ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಅಹಮದಾಬಾದ್‌ನಲ್ಲಿ ಸನ್ ರೈಸರ್ಸ್ ಹೈದರಾಬಾದ್ ವಿರುದ್ಧ ಮಂಗಳವಾರ ನಡೆದ ಐಪಿಎಲ್ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ 5 ವಿಕೆಟ್ ಕಳೆದುಕೊಂಡು 168 ರನ್ ಕಲೆ ಹಾಕಿದೆ.

13 ಮೇ 2026 ಬುಧವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 63 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಎಲ್ಲೆಲ್ಲೂ ಇಲಿಯೇ ! » 2



ಸಂವಿಧಾನದಿಂದ ಎಲ್ಲಾ ವರ್ಗಗಳ ಜನರಿಗೆ ಸಮಾನ ಹಕ್ಕು » 3



ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ : ಮರು ಪರೀಕ್ಷೆಗೆ ನಿರ್ಧಾರ » 4

# ಇತಿಹಾಸ ಅರಿಯದೆ ಲಘುವಾಗಿ ಮಾತಾಡಬೇಡಿ

## ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ದೇವೇಗೌಡರ ವಾಗ್ದಾಳಿ | ಬಾಂಗ್ಲಾ-ಪಾಕ್ ಯುದ್ಧ ಸ್ಮರಣೆ

• ಪ್ರಜೋದಯ ವರದಿ

**ಹಾಸನ:** ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಏರು ಪೇರುಗಳಾದ ದೇಶದ ಹಿತದೃಷ್ಟಿಯಿಂದ ಕೆಲವು ನಿರ್ಧಾರ ಕೈಗೊಳ್ಳುವುದು ಜವಾಬ್ದಾರಿಯಾಗಿರುತ್ತದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇತಿಹಾಸ ಅರಿತು ಮಾತನಾಡಬೇಕೆಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ವಾಗ್ದಾಳಿ ನಡೆಸಿದರು.

ಸುದ್ದಿಗಾರರೊಂದಿಗೆ ಮಂಗಳವಾರ ಮಾತನಾಡಿದ ಅವರು, ಇರಾನ್, ಇಸ್ರೇಲ್-ಅಮೇರಿಕಾ ನಡುವೆ 40 ದಿನ ಯುದ್ಧ ನಡೆದಿದೆ. ಭಾರತದ ಹಡಗು ಗಲ್ಫ್‌ನಲ್ಲಿ ಮುಳುಗಿದೆ. ಇವುಗಳೆಲ್ಲಾ ರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ಘಟನೆಗಳು. ಅದಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಹೊಣೆಗಾರರನ್ನಾಗಿಸುವುದು ಸರಿಯಲ್ಲ. ಮೂರು ರಾಷ್ಟ್ರಗಳಲ್ಲಿ ಹಿಂದೆಂದೂ ಕಾಣದಂತಹ ಯುದ್ಧ ನಡೆದಿದೆ. ಅದರ ಬಗ್ಗೆ ನಮ್ಮ ಮುಖ್ಯಮಂತ್ರಿ ಲಘುವಾಗಿ ಮಾತನಾಡಿದ್ದಾರೆಂದರು.

ಬಾಂಗ್ಲಾದೇಶ-ಪಾಕಿಸ್ತಾನ ನಡುವೆ ಯುದ್ಧದ ಸಂದರ್ಭದಲ್ಲಿ ಜಗಜೀವನ್ ರಾಮ್ ರಕ್ಷಣಾ ಸಚಿವರಾಗಿದ್ದರು. ಆಗ ಪ್ರಧಾನಿಯಾಗಿದ್ದ ಇಂದಿರಾ ಗಾಂಧಿ ರಾಮಲೀಲಾ ಮೈದಾನದಲ್ಲಿ ಏನು ಭಾಷಣ ಮಾಡಿದ್ದರೆಂದು ನೆನಪಿದೆಯೇ ಎಂದು ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದರು.

ಆಗ ಒಂದು ಕೆ.ಜಿ. ಸಕ್ಕರೆ ಬೆಲೆ 18 ರೂ.,



ಲೀಟರ್ ಸೀಮೆ ಎಣ್ಣೆ 12 ರೂ.ಗೆ ಏರಿಕೆಯಾಗಿದ್ದನ್ನು ಮಿಸ್ಟರ್ ಸಿದ್ದರಾಮಯ್ಯ ಮರೆತಿದ್ದಾರೆ. ಒಂದು ದಿನ ಟೀ ಕುಡಿಯೋದು ಬಿಡಿ, ವಾರದಲ್ಲಿ ಒಂದು ದಿನ ಊಟ ಮಾಡುವುದನ್ನು ಬಿಡಿ. ದಿನಕ್ಕೆ ಒಂದು ಬಾರಿ ಮಾತ್ರ ಟೀ ಕುಡಿಯಿರಿ ಎಂದು ಇಂದಿರಾ ಗಾಂಧಿ ಹೇಳಿದ್ದರು. ಅವರು ಈ ರೀತಿ ಭಾಷಣ ಮಾಡಿದಾಗ ಸಭೆಯಲ್ಲಿ ಕೋಲಾಹಲ ಉಂಟಾಯಿತು. ಇಂದಿರಾ ಗಾಂಧಿ ಅವರನ್ನು ಪೊಲೀಸರು ರಕ್ಷಿಸಿ ಕರೆದೊಯ್ದರು. ಕೇವಲ ಒಂದು ಸಣ್ಣ ಯುದ್ಧ ಇಷ್ಟೆಲ್ಲಾ ಸಮಸ್ಯೆ ಸೃಷ್ಟಿಸಿತು. ಇನ್ನು 40 ದಿನಗಳ ನಿರಂತರ ಯುದ್ಧ ಯಾವ ರೀತಿ ಪರಿಣಾಮ ಬೀರಿದೆ ಎಂಬುದನ್ನು ಅರಿಯಬೇಕಲ್ಲವೇ ಎಂದು ಹರಿಹಾಯ್ದರು.

ಪೆಟ್ರೋಲ್, ಡಿಸೇಲ್, ಅಡುಗೆ ಎಣ್ಣೆ ಬಳಕೆಯನ್ನು ಕಡಿಮೆ ಮಾಡಿ. ಸದ್ಯ ವಿದೇಶಿ ಪ್ರವಾಸ ಮಾಡುವುದು ಬೇಡವೆಂದು ಪ್ರಧಾನಿ ಹೇಳಿದ್ದಾರೆ. ಸಿದ್ದರಾಮಯ್ಯ ಅವರು ಬಹಳ ದೊಡ್ಡ ಪಾಂಡಿತ್ಯವಂತರು, ಈ ಬಗ್ಗೆ ಮಾತನಾಡಿದ್ದಾರೆ. ಸಿದ್ದರಾಮಯ್ಯ ಅವರೇ ನೀವು ಜವಾಬ್ದಾರಿಯುತ ಸ್ಥಾನದಲ್ಲಿದ್ದೀರಿ, ಮುಖ್ಯಮಂತ್ರಿ ಆಗಿದ್ದೀರಿ, ಹದಿನಾರು ಬಜೆಟ್ ಮಂಡಿಸಿದ್ದೀರಿ, ಬಹಳ ಅನುಭವಸ್ಥರು. ಹಿಂದೆ ನಡೆದಂತಹ ಕೆಲವು ಘಟನೆಗಳನ್ನು ಮೆಲುಕು ಹಾಕಿ ಮಾತನಾಡಿದರೆ ನಿಮ್ಮ ಸ್ಥಾನದ ಗೌರವ ಉಳಿಯುತ್ತೆ ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ನೀವು ಪ್ರಧಾನ ಮಂತ್ರಿ ಬಗ್ಗೆ ಲಘುವಾಗಿ ಮಾತನಾಡಿದರೆ ಅದರಿಂದ ಏನೂ ಆಗುವುದಿಲ್ಲ. ಈ ದೇಶದ 145 ಕೋಟಿ ಜನರ ಪ್ರಧಾನಿಯಾಗುವ ಶಕ್ತಿ ಒಬ್ಬರಿಗೆ ಇರೋದು ಎಂಬುದನ್ನು ಮೋದಿ ಸಾಬೀತುಪಡಿಸಿದ್ದಾರೆ. ರಾಜಕೀಯದಲ್ಲಿ ನನಗೆ 65 ವರ್ಷಗಳ ಅನುಭವವಿದೆ. ಮೋದಿ ವಿಶ್ವದ ಶ್ರೇಷ್ಠ ನಾಯಕರಾಗಿ ಬೆಳೆದಿದ್ದಾರೆ. ಅವರ ಬಗ್ಗೆ ಲಘುವಾಗಿ ಮಾತನಾಡದೆ ಸ್ವಲ್ಪ ಯೋಚನೆ ಮಾಡಿ ಮಾತನಾಡಿ ಎಂದು ಸಲಹೆ ನೀಡಿದರು.

### 93ರ ಇಳಿ ವಯಸ್ಸಲ್ಲೂ ಗೌಡರ ಓಡಾಟ

ಹಾಸನ: ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು 93ರ ಇಳಿ ವಯಸ್ಸಿನಲ್ಲೂ ಪಾದರಸದಂತೆ ಎಲ್ಲಾ ಕಡೆ ಓಡಾಡಿ ಜನಮನ ಗೆಲ್ಲುತ್ತಿರುವುದರ ಅವರು ಜಿಲ್ಲೆಯ ಮೇಲಿಟ್ಟಿರುವ ಪ್ರೀತಿಗೆ ಸಾಕ್ಷಿಯಾಗಿದೆ.

ಸೋಮವಾರ ರಾತ್ರಿ, ಹೊಳೆನರಸೀಪುರದ ಹರದನಹಳ್ಳಿ ನಿವಾಸಕ್ಕೆ ಬಂದ ಗೌಡರು ಬೆಳಿಗ್ಗೆ 7 ಗಂಟೆಗೆ ಗ್ರಾಮದ ದೇವೇಶ್ವರ ದೇಗುಲದಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ದೇವೇಗೌಡರನ್ನು ಭೇಟಿಯಾಗಲು ಬಂದ ಸಾರ್ವಜನಿಕರೊಂದಿಗೆ ಕುಶಲೋಪರಿ ವಿಚಾರಿಸಿದರು. ಅಲ್ಲಿಂದ ಮೊಸಳೆಹೊಸಹಳ್ಳಿ ಸರ್ಕಾರಿ ಇಂಜಿನೀಯರಿಂಗ್ ಕಾಲೇಜಿಗೆ ಭೇಟಿ ನೀಡಿ ಶುದ್ಧ ಕುಡಿಯುವ ನೀರಿನ ಘಟಕಕ್ಕೆ ಚಾಲನೆ ನೀಡಿದರು. ನಂತರ ರೈಲ್ವೆ ಮೇಲ್ಸೇತುವೆಗೆ ಭೇಟಿ ನೀಡಿ ಕಾಮಗಾರಿ ವೀಕ್ಷಿಸಿದರು. ಇಂಜಿನೀಯರಿಂಗ್ ವ್ಯಾಸಂಗಕ್ಕಾಗಿ ಬಂದಿರುವ ಹೊರ ಜಿಲ್ಲೆಯ ವಿದ್ಯಾರ್ಥಿನಿಯರೊಂದಿಗೆ ದೇವೇಗೌಡರು ಮಾತುಕತೆ ನಡೆಸಿದರು. ಈ ವೇಳೆ ಗೌಡರ ಜೊತೆ ಫೋಟೋಗಾಗಿ ವಿದ್ಯಾರ್ಥಿಗಳು ಮುಗಿಬಿದ್ದರು. ಮಧ್ಯಾಹ್ನ 1 ಗಂಟೆವರೆಗೆ ಮೊಸಳೆಹೊಸಹಳ್ಳಿಯಲ್ಲಿಯೇ ಇದ್ದ ಗೌಡರು ಬಳಿಕ ಹಾಸನದ ಮೆಗಾ ಡೇರಿಗೆ ಭೇಟಿ ನೀಡಿ ಕಾರಿನಲ್ಲೇ ಕುಳಿತು ಕಾಮಗಾರಿ ಪರಿಶೀಲಿಸಿದರು.

### ವಿಜಯ್ ಹೊಗಳಿದ ಗೌಡರು

ತಮಿಳುನಾಡು ನೂತನ ಮುಖ್ಯಮಂತ್ರಿ ಜೋಸೆಫ್ ವಿಜಯ್ ಅವರನ್ನು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಹಾಡಿ ಹೊಗಳಿದರು.

ಆ ರಾಜ್ಯದಲ್ಲಿ ಒಂದು ಹೊಸ ಶಕ್ತಿ ಸೃಷ್ಟಿಯಾಗಿದೆ. ಡಿಎಂಕೆ-ಎಐಎಡಿಎಂಕೆ, ಕಾಂಗ್ರೆಸ್ ಪಕ್ಷವನ್ನು ಸೋಲಿಸಿದ್ದಾರೆ. ಕೆ.ಕಾಮರಾಜ್ ಅವರಿಂದ ಎಂಜಿಆರ್, ಕರುಣಾನಿಧಿ, ಜಯಲಲಿತಾ ಅವರೆಲ್ಲರ ನಾಯಕತ್ವವನ್ನು ಹಿಂದಕ್ಕೆ ಸರಿಸಿ ವಿಜಯ್ ಅವರು ಬಹಳ ಮುಂದೆ ಹೋಗಿದ್ದಾರೆ. ವಿಜಯ್ ಅವರು ಎಲ್ಲೇ ಹೋದರು 40 ರಿಂದ 50 ಲಕ್ಷ ಜನರು ಸೇರುತ್ತಾರೆ. ಒಬ್ಬ ಸಾಮಾನ್ಯ ಸಹಾಯಕ ನಿರ್ದೇಶಕನ ಮಗ ಎತ್ತರಕ್ಕೆ ಬೆಳೆದಿದ್ದು ಅವರನ್ನು ಅಭಿನಂದಿಸುತ್ತೇನೆಂದರು.

ತಮಿಳುನಾಡಿಗೂ ನಮಗೂ ಸಮಸ್ಯೆಗಳಿವೆ. ಅದನ್ನು ಬಗೆಹರಿಸುವಂತಹ ಕಾಲದಲ್ಲಿ ಕುಳಿತು ಮಾತನಾಡುವ ಸಂದರ್ಭ ಬರಬಹುದು. ಚುನಾವಣೆ ವೇಳೆ ಟಿಕೆಟ್ ಹಂಚಿಕೆ ಸಂದರ್ಭದಲ್ಲಿ ಕಾಂಗ್ರೆಸ್ ಹಾಗು ಡಿಎಂಕೆಯ ಸ್ಟಾಲಿನ್ ನಡುವೆ ವ್ಯತ್ಯಾಸವಾಯಿತು. ಅದು ಅವರ ವೈಯುಕ್ತಿಕ ವಿಷಯ. ಕರುಣಾನಿಧಿ ಇದ್ದಾಗ ಎಷ್ಟು ಸ್ಥಾನ ಕೊಡುತ್ತಿದ್ದರು, ಸ್ಟಾಲಿನ್ ಏನು ಮಾಡಿದರೂ ಎಂಬುದರ ಕುರಿತು ಚರ್ಚಿಸಿ ಈಗ ಪ್ರಯೋಜನವಿಲ್ಲವೆಂದರು.

## ಪಾಕಿಸ್ತಾನಕ್ಕೆ ಚೀನಾ ನೆರವು: ಭಾರತ ತಿರುಗೇಟು



• ಪ್ರಜೋದಯ ವರದಿ

**ನವದೆಹಲಿ:** ಆಪರೇಷನ್ ಸಿಂದೂರ ಸೇನಾ ಕಾರ್ಯಾಚರಣೆಯಲ್ಲಿ ಪಾಕಿಸ್ತಾನಕ್ಕೆ ನೆರವು ನೀಡಿರುವುದಾಗಿ ಚೀನಾ ಒಪ್ಪಿಕೊಂಡಿದ್ದು, ದೇಶವೊಂದು ಎಂತಹವರನ್ನು ಬೆಂಬಲಿಸುತ್ತದೆ ಎಂಬುದರ ಮೇಲೆ ಅದರ ಘನತೆ ಮತ್ತು ಗೌರವ ನಿರ್ಧಾರವಾಗುತ್ತದೆಂದು ಸೂಚ್ಯ ವಾಗಿ ಭಾರತ ತಿರುಗೇಟು ನೀಡಿದೆ.

ಭಾರತದ ವಿದೇಶಾಂಗ ಇಲಾಖೆ ವಕ್ತಾರ ರಣಧೀರ್ ಜೈಸ್ವಾಲ್ ಅವರು ಮಾತನಾಡಿ, ಪಾಕಿಸ್ತಾನಕ್ಕೆ ಚೀನಾದ ಬೆಂಬಲದ ಬಗ್ಗೆ ಮೊದಲೇ ಗೊತ್ತಿತ್ತು. ಚೀನಾದ ಇತ್ತೀಚಿನ ಹೇಳಿಕೆ ನಮ್ಮ ನಿಲುವನ್ನು ದೃಢೀಕರಿಸುತ್ತದೆ. ಭಯೋತ್ಪಾದಕ ನೆಲೆಗಳನ್ನು ಹೊಂದಿರುವ ಪಾಕಿಸ್ತಾನವನ್ನು ಬೆಂಬಲಿಸಿರುವ ಚೀನಾ ಆತ್ಮಾವಲೋಕನ ಮಾಡಿಕೊಳ್ಳಬೇಕೆಂದು ಒತ್ತಾಯಿಸಿದ್ದಾರೆ. ಆಪರೇಷನ್ ಸಿಂದೂರ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಗೆ ಭಾರತದ ಸೇನಾ ಪ್ರತಿಕ್ರಿಯೆಯಾಗಿತ್ತು. ಭಯೋತ್ಪಾದಕ ನೆಲೆಗಳನ್ನು ನಾಶ ಮಾಡುವ ಸ್ಪಷ್ಟ ಗುರಿಯೊಂದಿಗೆ ಸೇನಾ ಕಾರ್ಯಾ ಚರಣೆ ಆರಂಭಿಸಲಾಗಿತ್ತು. ಭಾರತ ಈ ಗುರಿಯನ್ನು ಯಶಸ್ವಿಯಾಗಿ ತಲುಪಿದೆ ಎಂದು ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

ಭಯೋತ್ಪಾದಕ ಮೂಲಸೌಕರ್ಯವನ್ನು ಬೆಂಬಲಿಸುವುದು ಅಥವಾ ರಕ್ಷಿಸುವುದು ತಮ್ಮ ಖ್ಯಾತಿ ಮತ್ತು ಸ್ಥಾನಮಾನದ ಮೇಲೆ ಪರಿಣಾಮ ಬೀರುತ್ತದೆಯೇ ಎಂಬುದರ ಕುರಿತು ಚಿಂತಿಸುವುದು, ತಮ್ಮನ್ನು ತಾವು ಜವಾಬ್ದಾರಿಯುತವೆಂದು ಪರಿಗಣಿ ಸುವ ರಾಷ್ಟ್ರಗಳ ಜವಾಬ್ದಾರಿಯಾಗಿದೆ ಎಂದು ಚೀನಾ ವಿರುದ್ಧ ಕಿಡಿಕಾರಿದ್ದಾರೆ.

ಮೇ 7ರಂದು ಭಾರತವು ಆಪರೇಷನ್ ಸಿಂದೂರ ಸೇನಾ ಕಾರ್ಯಾಚರಣೆ ವರ್ಷಾಚರಣೆ ಆಚರಿಸಿದೆ. ಈ ಹಿನ್ನಲೆಯಲ್ಲಿ ಪಾಕಿಸ್ತಾನಕ್ಕೆ ಬೆಂಬಲ ನೀಡಿದ ಚೀನಾಗೆ ಆತ್ಮಾವಲೋಕನ ಮಾಡಿಕೊಳ್ಳುವಂತೆ ಭಾರತ ಕರೆ ಕೊಟ್ಟಿರುವುದು ಗಮನ ಸೆಳೆದಿದೆ. ಚೀನಾದ ಅಧಿಕೃತ ಮಾಧ್ಯಮ ವರದಿಗಳು ಭಾರತದೊಂದಿಗಿನ ನಾಲ್ಕು ದಿನಗಳ ತೀವ್ರವಾದ ಮಿಲಿಟರಿ ಸಂಘರ್ಷದ ಸಮಯದಲ್ಲಿ ಪಾಕಿಸ್ತಾನಕ್ಕೆ ಚೀನಾವು ಆನ್-ಸೈಟ್ ತಾಂತ್ರಿಕ ಬೆಂಬಲವನ್ನು ನೀಡಿರುವುದಾಗಿ ದೃಢಪಡಿಸಿವೆ.

# ನಾನು ಯಾವತ್ತೂ ಪಾಪದ ಕೆಲಸ ಮಾಡಿಲ್ಲ: ರೇವಣ್ಣ

• ಪ್ರಜೋದಯ ವರದಿ

**ಹಾಸನ:** ಕೆಎಂಎಫ್ ಅಧ್ಯಕ್ಷನಾಗಿದ್ದ ನಾನು ಪಾಪದ ಕೆಲಸ ಮಾಡಿಲ್ಲ, ದ್ವೇಷದ ರಾಜಕಾರಣವೂ ನನಗೆ ಗೊತ್ತಿಲ್ಲ. ಸಮಯ ಬಂದಾಗ ಎಲ್ಲದಕ್ಕೂ ಉತ್ತರ ಕೊಡುತ್ತೇನೆಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಕಾಂಗ್ರೆಸ್ ವಿರುದ್ಧ ಹರಿಹಾಯ್ದರು.

ನಗರ ಹೊರವಲಯದ ಕೈಗಾರಿಕಾ ಪ್ರದೇಶದಲ್ಲಿರುವ ಮೆಗಾ ಡೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಂದಿನ 40 ದಿನದಲ್ಲಿ ಮೆಗಾ ಡೇರಿ ಕೆಲಸ ಮುಗಿಸಲಾಗುವುದು. ಈ ರೀತಿಯ ಕಟ್ಟಡ ದೇಶದ ಎಲ್ಲಿಯೂ ಇಲ್ಲ. ನಮ್ಮ ಜಿಲ್ಲೆಯ ಜನರಿಗೆ ಅನುಕೂಲವಾಗಲಿ ಎಂದು ಇಷ್ಟೆಲ್ಲಾ ಮಾಡಿದ್ದೇನೆ. ಪಾಪದ ಕೆಲಸ ಮಾಡುವುದಾಗಿದ್ದರೆ ಕೆಎಂಎಫ್ ಅಧ್ಯಕ್ಷನಾಗಿದ್ದಾಗ ಕೋಲಾರಕ್ಕೆ ಯುಹೆಚ್‌ಟಿ ಘಟಕ ಕೊಡುತ್ತಿರಲಿಲ್ಲ. ದೇವೇಗೌಡರು, ಕುಮಾರಸ್ವಾಮಿ ಇಲ್ಲದಿದ್ದರೆ ಬೆಂಗಳೂರಿನಲ್ಲಿ





ಕೆಎಂಎಫ್ ಡೇರಿ ನಿರ್ಮಾಣವಾಗುತ್ತಿರಲಿಲ್ಲವೆಂದರು.

ಜಿಲ್ಲೆಯನ್ನು ಹಾಳು ಮಾಡಿದ್ದು ಯಾರು ಎಂಬುದನ್ನು ಸಮಯ ಬಂದಾಗ ಹೇಳುತ್ತೇನೆ. ದೇವೇಗೌಡರು ಇಲ್ಲದಿದ್ದರೆ ನಾವು ಏನೂ ಅಲ್ಲ. ಮುಖ್ಯಮಂತ್ರಿಯಾಗಿದ್ದಾಗ ಹೆಚ್.ಡಿ. ಕುಮಾರಸ್ವಾಮಿ ಜಿಲ್ಲೆಗೆ ಏನೇನು ಕೊಡುಗೆ ಕೊಟ್ಟಿದ್ದಾರೆಂಬುದನ್ನು ಸಾಕ್ಷಿ ಸಮೇತ ಹೇಳುತ್ತೇನೆ. ವಿಮಾನ ನಿಲ್ದಾಣ ಜಾಗ ಕಬಳಿಸಲು ಮಧ್ಯವರ್ತಿಗಳು ಹುಟ್ಟಿಕೊಂಡಿದ್ದಾರೆ. ಆದರೆ, ಅದಕ್ಕೆ ಅವಕಾಶ ಮಾಡಿಕೊಡುವುದಿಲ್ಲ, ಜಿಲ್ಲೆಯ ಅಭಿವೃದ್ಧಿಗಾಗಿ ಜೀವಿತದ ಕೊನೆಯವರೆಗೆ ಹೋರಾಡುತ್ತೇನೆ. ಕೈಗಾರಿಕಾಭಿವೃದ್ಧಿ, ವಿಮಾನ ನಿಲ್ದಾಣಕ್ಕಾಗಿ ಸಾವಿರಾರು ಎಕರೆ ಮೀಸಲಿಟ್ಟಿದ್ದೇವೆ. ಅದರಲ್ಲಿ ಅರ್ಧ ಎಕರೆ ಜಾಗವನ್ನು ನನ್ನ ಹೆಸರಿಗೆ ಬರೆಸಿಕೊಂಡಿದ್ದೇನಾ ಎಂದು ಖಾರವಾಗಿ ಪ್ರಶ್ನಿಸಿದರು.

ನಾನು ಯಾವುದಾದರು ಸಮಾಜಕ್ಕೆ ಅನ್ಯಾಯ ಮಾಡಿದ್ದನ್ನು ಬಹಿರಂಗಪಡಿಸಿದರೆ ಈಗಲೇ ರಾಜಕೀಯ ಜೀವನದಿಂದ ನಿವೃತ್ತಿಯಾಗುತ್ತೇನೆ. ನಮ್ಮ ಸರ್ಕಾರ ಇದ್ದಾಗ ಮುಸಲ್ಮಾನ ಜಿಲ್ಲಾಧಿಕಾರಿ ಇದ್ದರು. ಅವರು ಇದ್ದಾಗ ಜಿಲ್ಲೆಯಲ್ಲಿ ಅಭಿವೃದ್ಧಿ ಕೆಲಸಗಳು ಹೇಗಾಗುತ್ತಿದ್ದವು ಎನ್ನುವುದು ಎಲ್ಲರಿಗೂ ಗೊತ್ತಿದೆ ಎಂದರು.

ಶಾಸಕ ಹೆಚ್.ಪಿ.ಸ್ವರೂಪ್, ಹಾಮೂಲ್ ವ್ಯವಸ್ಥಾಪಕ ನಿರ್ದೇಶಕ ಮಹೇಶ್, ಮಾನಸ ಪಟೇಲ್ ಮತ್ತಿತರರಿದ್ದರು.

# ಜೂನ್ ಬಳಿಕ ಮೆಗಾ ಹಾಲಿನ ಡೇರಿ ಉದ್ಘಾಟನೆ

## ಕಾಮಗಾರಿ ಪರಿಶೀಲಿಸಿದ ಮಾಜಿ ಪ್ರಧಾನಿ | ಬಾಕಿ ಕೆಲಸ ಮುಗಿಸಲು ಸೂಚನೆ

• ಪ್ರಜೋದಯ ವರದಿ

**ಹಾಸನ:** ಅತ್ಯಾಧುನಿಕ ಸೌಲಭ್ಯಗಳನ್ನು ಒಳಗೊಂಡಿರುವ ದೇಶದ ಪ್ರಮುಖ ಮೆಗಾ ಡೇರಿಯನ್ನು ಜೂನ್ ಬಳಿಕ ಉದ್ಘಾಟಿಸಬೇಕಿದ್ದು, ಅಷ್ಟರೊಳಗೆ ಬಾಕಿ ಕೆಲಸ ಮುಗಿಸಬೇಕೆಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಸೂಚನೆ ನೀಡಿದರು.

ನಗರ ಹೊರವಲಯದ ಕೈಗಾರಿಕಾ ಪ್ರದೇಶದಲ್ಲಿ ನಿರ್ಮಿಸಿರುವ ಮೆಗಾ ಡೇರಿ ಕಾಮಗಾರಿ ಪರಿಶೀಲಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಅವರು ಆಗಮಿಸುವುದರಿಂದ ಲೋಪದೋಷಗಳಾಗಬಾರದು. ಕೆಲಸ ಬಾಕಿ ಇರುವಾಗಲೇ ಉದ್ಘಾಟನೆಗೆ ಅವರನ್ನು ಆಹ್ವಾನಿಸುವುದು ಸರಿಯಲ್ಲ. ಆದ್ದರಿಂದಲೇ ಖುದ್ದಾಗಿ ಸ್ಥಳ ಪರಿಶೀಲಿಸಿದ್ದೇನೆ. ಇನ್ನೊಂದು ಸಲ ಇಲ್ಲಿಗೆ ಭೇಟಿ ನೀಡಿ ಕೆಲಸ ಪೂರ್ಣಗೊಂಡಿದ್ದರೆ ಅವರನ್ನು ನೇರವಾಗಿ ಭೇಟಿಯಾಗಿ ಆಹ್ವಾನಿಸುತ್ತೇನೆಂದರು.



900 ಕೋ.ರೂ. ವೆಚ್ಚದ ಯೋಜನೆ ಇದಾಗಿದೆ. ಮೆಗಾ ಡೇರಿಗೆ ರಾಜ್ಯ ಸರ್ಕಾರದಿಂದ ಯಾವುದೇ ಆರ್ಥಿಕ ನೆರವು ಸಿಕ್ಕಿಲ್ಲ. ರಾಜ್ಯದ ದಾಕ್ಷಿಣ್ಯ ಇಲ್ಲದೆ ಕೇಂದ್ರ ಸರ್ಕಾರ ಹಾಗು ಮಾಜಿ ಸಚಿವ ರೇವಣ್ಣ ಅವರ ಪರಿಶ್ರಮದಿಂದ ಇಷ್ಟು ದೊಡ್ಡ ಕಟ್ಟಡ ನಿರ್ಮಾಣವಾಗಿದೆ. ಕೇಂದ್ರ ಸುಮಾರು 280 ಕೋ.ರೂ. ಅನುದಾನ ಕೊಟ್ಟಿದೆ. ಕೊಡಗು, ಹಾಸನ ಹಾಗು ಚಿಕ್ಕಮಗಳೂರು ಜಿಲ್ಲೆಯಿಂದ ಪ್ರತಿದಿನ 15 ಲಕ್ಷ ಲೀಟರ್ ಹಾಲು ಸಂಗ್ರಹವಾಗುತ್ತಿದ್ದು, ಹಿಂದೂಸ್ತಾನದಲ್ಲೇ ಅತ್ಯಂತ ದೊಡ್ಡ ಮೆಗಾ ಡೇರಿ ಇದಾಗಲಿದೆ ಎಂದು ಹೇಳಿದರು.

ಜರ್ಮನಿಯ ತಾಂತ್ರಿಕ ತಜ್ಞರು ಇಲ್ಲಿ ಕೆಲಸ ಮಾಡುತ್ತಿದ್ದಾರೆ. ಮಾಜಿ ಸಚಿವ ರೇವಣ್ಣ ಅವರ ಕಲ್ಪನೆಯಂತೆ ಡೇರಿ ತಲೆ ಎತ್ತಿದೆ. ಪ್ರವಾಸಿ ತಾಣವಾಗಿಸುವ ಉದ್ದೇಶದಿಂದ ಬೋಟಿಂಗ್, ಬುಲೆಟ್ ಟ್ರೈನ್ ವ್ಯವಸ್ಥೆ ಮಾಡುತ್ತಿದ್ದಾರೆ. ಕಳೆದ ತಿಂಗಳು ಪ್ರಧಾನಿ ನರೇಂದ್ರ ಮೋದಿ ಅವರು ಆದಿಚುಂಚನಗಿರಿ ಮಠಕ್ಕೆ ಭೇಟಿ ನೀಡಿದಾಗಲೇ ಡೇರಿಯನ್ನು ಉದ್ಘಾಟಿಸುವ ಯೋಚನೆ ಇತ್ತು. ಆದರೆ, ಕಾಮಗಾರಿ ಯಾವ ಹಂತದಲ್ಲಿದೆ ಎಂದು ತಿಳಿಯುವ ಉದ್ದೇಶದಿಂದ ನಾನೇ ಮುಂದೂಡಲು ಹೇಳಿದ್ದೆ. ಮೇ 26ಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರ ರಾಜಕೀಯ ಪಯಣದ ಕುರಿತು ಪುಸ್ತಕವೊಂದನ್ನು ನಾನು ಬಿಡುಗಡೆ ಮಾಡಲಿದ್ದೇನೆ. ಸಮಯ ಸಿಕ್ಕರೆ ಆಗಲೇ ಡೇರಿ ಉದ್ಘಾಟನೆಯ ವಿಷಯ ಪ್ರಸ್ತಾಪಿಸುತ್ತೇನೆಂದರು.

> ಸುಂದರ ಹೆಣ್ಣು ಮಗಳಿಗೆ ಮೂಗುತಿ ಇಲ್ಲದಿದ್ದರೆ ಚೆನ್ನಾಗಿ ಕಾಣಿಸುವುದಿಲ್ಲ. ಅದೇ ರೀತಿ ಮೆಗಾ ಡೇರಿ ಕಾಮಗಾರಿ ಬಾಕಿ ಇರುವಾಗಲೇ ಉದ್ಘಾಟಿಸಿದರೆ ಸರಿಯಾಗುವುದಿಲ್ಲ. ಈ ಡೇರಿ ದೇಶಕ್ಕೆ ಒಂದು ಸಂದೇಶ ನೀಡುವಂತಾಗಬೇಕು.
>
> -ಹೆಚ್.ಡಿ.ದೇವೇಗೌಡ, ಮಾಜಿ ಪ್ರಧಾನಿ

### 20 ಸಾವಿರ ಹಸು ನೀಡಬೇಕು

ಜಿಲ್ಲೆಯ ಬಡ ರೈತರಿಗೆ ಅನುಕೂಲವಾಗಲಿವೆಂಬ ಉದ್ದೇಶದಿಂದ 20 ಸಾವಿರ ರೈತರಿಗೆ ಹೆಚ್‌ಡಿಸಿಸಿ ಬ್ಯಾಂಕ್ ನೆರವಿನಿಂದ ಹಸುಗಳನ್ನು ವಿತರಿಸಲಾಗುತ್ತಿದೆ. ಆದಷ್ಟು ಬೇಗ ಆ

» ನಾಲ್ಕನೇ ಪುಟದಲ್ಲಿ

# ಮಲ್ಲಿಪಟ್ಟಣ ಏತ ನೀರಾವರಿ ಯೋಜನೆ ನಿರ್ಲಕ್ಷ್ಯಕ್ಕೆ ಆಕ್ರೋಶ

• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನ ಬಹು ನಿರೀಕ್ಷಿತ ಮಲ್ಲಿಪಟ್ಟಣ ಏತ ನೀರಾವರಿ ಯೋಜನೆ ಮೊದಲ ಹಂತದ ಕಾಮಗಾರಿ ಆರಂಭಗೊಂಡು 7 ವರ್ಷವಾದರೂ ಕಾಮಗಾರಿ ಪೂರ್ಣಗೊಂಡು ಕೆರೆ ಕಟ್ಟೆಗಳಿಗೆ ನೀರು ತುಂಬಿಸುವ ಕೆಲಸ ಆಗಿಲ್ಲ, ಅದಕ್ಕೆ ಗುತ್ತಿಗೆದಾರ ಮತ್ತು ಇಂಜಿನಿಯರ್‌ಗಳ ನಿರ್ಲಕ್ಷ್ಯವೇ ಕಾರಣವೆಂದು ಶಾಸಕ ಎ. ಮಂಜು ಅವರು ಆಕ್ರೋಶ ವ್ಯಕ್ತಪಡಿಸಿದರು.

ತಾಲ್ಲೂಕಿನ ಗಡಿಭಾಗ ಕೊಡಗು ಜಿಲ್ಲೆಯ ಕಟ್ಟೇಪುರ ಹೇಮಾವತಿ ಹಿನ್ನೀರಿನಲ್ಲಿ ನಡೆಯುತ್ತಿರುವ ನೂತನ ಮಲ್ಲಿಪಟ್ಟಣ ಏತನೀರಾವರಿ ಯೋಜನೆ ಜಾಕ್ ವೆಲ್ ಕಾಮಗಾರಿಯನ್ನು



ಮಂಗಳವಾರ ವೀಕ್ಷಿಸಿ ಮಾತನಾಡಿದ ಅವರು, 2025ರ ಜನವರಿ 20ರಂದು ಕಾಮಗಾರಿ ವೀಕ್ಷಣೆ ಮಾಡುವ ವೇಳೆ ಆಗಸ್ಟ್ ತಿಂಗಳಿಗೆ ಕಾಮಗಾರಿ ಪೂರ್ಣಗೊಳಿಸುವ ಭರವಸೆ ನೀಡಿದ್ದರು. ಈ ವೇಳೆಗೂ ಆಗಿಲ್ಲ. ಪುನಃ ಏ. 18ರಂದು ಕಾಮಗಾರಿ ಸ್ಥಳ ಪರಿಶೀಲನೆ ಕೈಗೊಂಡಾಗಲೂ ಕೂಡ ಅಕ್ಟೋಬರ್‌ಗೆ ನೀರು ಹರಿಸುವ ಭರವಸೆಯನ್ನು ಅಧಿಕಾರಿಗಳು ನೀಡಿದ್ದರು. ಆದರೆ 2026ರ ಮೇ ತಿಂಗಳು ಬಂದರೂ ಸಹ ಕೆಲಸ ಪೂರ್ಣಗೊಳಿಸಿಲ್ಲ. ಈ ನಿರ್ಲಕ್ಷ್ಯವನ್ನು ಸಹಿಸುವುದಿಲ್ಲವೆಂದು ಎಚ್ಚರಿಸಿದರು.

ಈ ಯೋಜನೆಯು 190 ಕೋಟಿ ರೂ. ವೆಚ್ಚದಲ್ಲಿ 200 ಕೆರೆಗಳಿಗೆ ನೀರು ತುಂಬಿಸುವುದಾಗಿದೆ. ಸುಮಾರು 78.10 ಕಿ.ಮೀ. ದೂರ ರೇಸಿಂಗ್ ಮೇನ್ ಪೈಪ್ ಲೈನ್ ಕಾಮಗಾರಿ ಬಹುತೇಕ ಮುಗಿಯುವ ಹಂತಕ್ಕೆ ಬಂದಿದೆ. 1.2 ಕಿ.ಮೀ. ಕೆಲಸ ಬಾಕಿ ಇದೆ. ವಿದ್ಯುತ್ ಸಂಪರ್ಕ, ತೊಟ್ಟಿ ಕೆಲಸವನ್ನು ಕೂಡಲೇ ಪೂರ್ಣಗೊಳಿಸಿ ಈ ಯೋಜನೆ ವ್ಯಾಪ್ತಿಗೆ ಒಳಪಡುವ 78 ಹಳ್ಳಿಗಳ ಕೆರೆ ಕಟ್ಟೆಗಳಿಗೆ ನೀರು ತುಂಬಿಸುವ ಕೆಲಸ ಕೈಗೊಳ್ಳುವಂತೆ ಸೂಚನೆ ನೀಡಿದರು.

ಸೋಮವಾರಪೇಟೆ ತಾಲ್ಲೂಕಿನ 20 ಕೆರೆ ಕಟ್ಟೆಗಳು ಸಹ ಸೇರಿವೆ. ಅಂದು ಆರಂಭಿಕವಾಗಿ ರಾಜ್ಯ ಸರ್ಕಾರ 120 ಕೋಟಿ ರೂ. ಬಿಡುಗಡೆ ಮಾಡಿ ಕಾಮಗಾರಿಯನ್ನು 18 ತಿಂಗಳ ಅವಧಿಯಲ್ಲಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರೊಂದಿಗೆ ಕರಾರು ಮಾಡಿಕೊಂಡಿತ್ತು. ಆದರೆ ಕೆಲಸ ಮಾತ್ರ ಕೇವಲ ಪೈಪ್ ಲೈನ್ ಅಳವಡಿಕೆಯಲ್ಲಿಯೇ ಸಾಗಿತ್ತು. ಹಿನ್ನೀರಿನಲ್ಲಿ ಜಾಕ್‌ವೆಲ್ ನಿರ್ಮಾಣ ಕೆಲಸ ಮುಗಿದಿದ್ದು, ಮೋಟಾರ್ ಅಳವಡಿಕೆ

» ನಾಲ್ಕನೇ ಪುಟದಲ್ಲಿ

# ಪೆಟ್ರೋಲ್ ಬಂಕ್ ಮಾಲೀಕರೊಂದಿಗೆ ಸಂಸದರ ಸಭೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ಪೆಟ್ರೋಲ್ ಬಂಕ್ ಮಾಲೀಕರು ಹಾಗು ಅಧಿಕಾರಿಗಳೊಂದಿಗೆ ನಗರದ ಸಂಸದರ ಕಚೇರಿಯಲ್ಲಿ ಮಂಗಳವಾರ ಸಭೆ ನಡೆಸಿದ ಸಂಸದ ಶ್ರೇಯಸ್ ಪಟೇಲ್ ಅವರು ಕಚ್ಚಾತೈಲ ದಾಸ್ತಾನು ಮತ್ತು ವಿತರಣೆ ಕುರಿತು ಮಾಹಿತಿ ಪಡೆದರು.

ಪೆಟ್ರೋಲ್ ಹಾಗು ಡೀಸೆಲ್ ಪೂರೈಕೆಯಲ್ಲಿ ಈ ವರೆಗೆ ಯಾವುದೇ ವ್ಯತ್ಯಯವಾಗಿಲ್ಲ. ಈ ಹಿಂದೆ ಆಯಿಲ್ ಕಂಪನಿಯವರು ಸಾಲದ ರೂಪದಲ್ಲಿ ಕಚ್ಚಾತೈಲ ಸರಬರಾಜು ಮಾಡುತ್ತಿದ್ದರು. ಇತ್ತೀಚೆಗೆ ಆ ಪ್ರಕ್ರಿಯೆ ಸ್ಥಗಿತಗೊಳಿಸಲಾಗಿದೆ. ಗ್ರಾಹಕರಿಗೆ ಬಾಟಲ್/ಕ್ಯಾನ್‌ಗಳಲ್ಲಿ ಪೆಟ್ರೋಲ್ ಅಥವಾ ಡೀಸೆಲ್ ನೀಡುವುದನ್ನು ಸ್ಥಗಿತಗೊಳಿಸಲಾಗಿದೆ ಎಂದು ಪೆಟ್ರೋಲ್ ಬಂಕ್ ಮಾಲೀಕರು




ಹಾಗು ಅಧಿಕಾರಿಗಳು ಹೇಳಿದರು.

ಪ್ರಸ್ತುತ ಸುಮಾರು 3 ರಿಂದ 6 ದಿನಗಳ ವರೆಗೆ ಸಾಕಾಗುವಷ್ಟು ಪೆಟ್ರೋಲ್ ಹಾಗು ಡಿಸೇಲ್ ದಾಸ್ತಾನಿದೆ. ದಾಸ್ತಾನು ಪೂರೈಕೆಯಲ್ಲಿ ಯಾವುದೇ ಸಮಸ್ಯೆ ಇಲ್ಲವೆಂದು ಅಧಿಕಾರಿಗಳು ಸ್ಪಷ್ಟಪಡಿಸಿದರು. ಸಭೆಯಲ್ಲಿ ಮಾತನಾಡಿದ ಸಂಸದ ಶ್ರೇಯಸ್ ಅವರು, ಜಿಲ್ಲೆಯಲ್ಲಿ ಪೆಟ್ರೋಲ್ ಹಾಗು ಡೀಸೆಲ್ ಪೂರೈಕೆಯಲ್ಲಿ ವ್ಯತ್ಯಯ ಆಗಿಲ್ಲ. ಸಾರ್ವಜನಿಕರು ಆತಂಕಕ್ಕೆ ಒಳಗಾಗಿ ಅನಗತ್ಯವಾಗಿ ಇಂಧನ ಸಂಗ್ರಹಿಸಬಾರದೆಂದು ಮನವಿ ಮಾಡಿದರು.

## ಪತ್ರಕರ್ತ ಕೆ.ಆರ್.ಮಂಜುನಾಥ್‌ಗೆ ದತ್ತಿನಿಧಿ ಪ್ರಶಸ್ತಿ

• ಪ್ರಜೋದಯ ವರದಿ



**ಹಾಸನ:** ಜಿಲ್ಲೆಯ ಪತ್ರಕರ್ತ ಕೆ.ಆರ್.ಮಂಜುನಾಥ್ ಅವರಿಗೆ ಕಾಸರಗೋಡು ಜಿಲ್ಲಾ ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘದ ಪ್ರತಿಷ್ಠಿತ ಕೆ.ಕೆ.ಶೆಟ್ಟಿ ಕುತ್ತಿಕಾರ್ ದತ್ತಿನಿಧಿ ಪ್ರಶಸ್ತಿ ಲಭಿಸಿದೆ.

ಸುದೀರ್ಘ ಪತ್ರಿಕಾ ಸೇವೆ, ಕನ್ನಡ ಭಾಷೆ ಹಾಗು ಪತ್ರಿಕೋದ್ಯಮ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಗುರುತಿಸಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಮಂಜುನಾಥ್ ಅವರು ಉದಯ ಟಿವಿ ಜಿಲ್ಲಾ ವರದಿಗಾರರಾಗಿ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾಗಿ ಹಾಗು ಕರ್ನಾಟಕ ಮಾಧ್ಯಮ ಅಕಾಡೆಮಿ ಸದಸ್ಯರಾಗಿ ಸಹ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ಮಲೆನಾಡು ಮಂದಾರ ಪತ್ರಿಕೆ ಸಂಪಾದಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಮೇ 16ರಂದು ಕಾಸರಗೋಡಿನಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ.

# ಯಗಚಿ ನದಿಗೆ ಸೇತುವೆ : ಮೇ 14ಕ್ಕೆ ಸಚಿವರೊಂದಿಗೆ ಮತ್ತೊಂದು ಸಭೆ

• ಪ್ರಜೋದಯ ವರದಿ

**ಬೇಲೂರು:** ಪಟ್ಟಣದ ಹೊಳೆ ಬೀದಿಯ ಯಗಚಿ ನದಿಗೆ ಸೇತುವೆ ನಿರ್ಮಾಣ ಸಂಬಂಧ ಲೋಕೋಪಯೋಗಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದ್ದು, ಮೇ 14ರಂದು ಸಚಿವ ಸತೀಶ್ ಜಾರಕಿಹೊಳಿ ಅವರೊಂದಿಗೆ ಚರ್ಚಿಸಲಾಗುವುದೆಂದು ಶಾಸಕ ಹೆಚ್.ಕೆ.ಸುರೇಶ್ ಅವರು ಹೇಳಿದ್ದಾರೆ.

ಬೆಂಗಳೂರಿನ ಲೋಕೋಪಯೋಗಿ ಕಚೇರಿಯಲ್ಲಿ ಮಂಗಳವಾರ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಶಾಸಕರು, ಕಾಮಗಾರಿ ಕುರಿತು ವರದಿ ತಯಾರಿಸುವಂತೆ ಸೂಚಿಸಿದರು. ಯಗಚಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣಕ್ಕೆ ಅನುದಾನ ಮಂಜೂರಾಗಿದೆ. ಯೋಜನಾ ವರದಿ ಅಂತಿಮ



ಗೊಂಡ ಬಳಿಕ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ಪಡೆಯಲಾಗುವುದು. ಶೀಘ್ರವೇ ಟೆಂಡರ್ ಕರೆದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರಿಂದ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಲಾಗುವುದೆಂದರು.

ಬೇಲೂರು ವಿಶ್ವ ವಿಖ್ಯಾತ ಪ್ರವಾಸಿ ತಾಣ. ಪ್ರತಿನಿತ್ಯ ದೇಶ ವಿದೇಶಗಳಿಂದ ಸಾವಿರಾರು ಪ್ರವಾಸಿಗರು ಬರುತ್ತಾರೆ. ಆದರೆ, ಬೇಲೂರು ಪಟ್ಟಣ ಪ್ರವೇಶಿಸಬೇಕೆಂದರೆ ಇರುವ ಒಂದೇ ಸೇತುವೆ ಹಾಗು ಒಂದೇ ಮುಖ್ಯ ರಸ್ತೆ ಮೇಲೆಯೇ ಸಾಗಬೇಕು. ಜೊತೆಗೆ ಹಬ್ಬ ಹರಿದಿನಗಳಂದು ದೇವರ ಉತ್ಸವ ಹಾಗು ಯಾವುದಾದರೂ ಪ್ರತಿಭಟನೆಗಳಾದರೆ ಮುಖ್ಯರಸ್ತೆ ಸಂಪೂರ್ಣವಾಗಿ ಬಂದ್ ಆಗುತ್ತದೆ. ಅದರಿಂದ ಸಂಚಾರ ದಟ್ಟಣೆ ಉಂಟಾಗಿ ಸಾರ್ವಜನಿಕರಿಗೆ ಭಾರೀ ತೊಂದರೆಯಾಗುತ್ತದೆ. ಈ ಎಲ್ಲಾ ಸಮಸ್ಯೆಯನ್ನು ಅಧಿಕಾರಿಗಳ ಗಮನಕ್ಕೆ ತರಲಾಗಿದೆ ಎಂದರು.

ಸಚಿವರಿಂದಲೂ ಸ್ಥಳ ಪರಿಶೀಲನೆ

ಯಗಚಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಿಸಬೇಕೆಂಬ ಕೂಗು ಇಂದು ನಿನ್ನೆಯದಲ್ಲ. ಮಾಜಿ ಶಾಸಕ ಕೆ.ಎಸ್. ಲಿಂಗೇಶ್ ಅವರು ಈ ಸಂಬಂಧ ಹಲವು ಸಭೆ ನಡೆಸಿದ್ದರು. ನಂತರ ಅಧಿಕಾರಕ್ಕೆ ಬಂದ ಹೆಚ್.ಕೆ.ಸುರೇಶ್ ಅವರೂ ಆ ನಿಟ್ಟಿನಲ್ಲಿ ಪ್ರಯತ್ನ ಮುಂದುವರಿಸಿದ್ದಾರೆ. ಇತ್ತೀಚೆಗೆ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರನ್ನು ಪಟ್ಟಣಕ್ಕೆ ಆಹ್ವಾನಿಸಿ ಸಮಸ್ಯೆ ಮನವರಿಕೆ ಮಾಡಿಕೊಡಲಾಗಿತ್ತು. ಈ ಹಿನ್ನಲೆಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ಸೇತುವೆ ನಿರ್ಮಾಣಕ್ಕಾಗಿ 50 ಕೋ.ರೂ. ಅನುದಾನ ಮಂಜೂರಾಗಿತ್ತು. ಆದರೆ, ತಾಂತ್ರಿಕ ಕಾರಣಗಳಿಂದ ಕಾಮಗಾರಿ ಪ್ರಾರಂಭವಾಗಲಿಲ್ಲ. ಶಾಸಕ ಹೆಚ್.ಕೆ.ಸುರೇಶ್ ಅವರು, ಸಚಿವರು ಹಾಗು ಅಧಿಕಾರಿಗಳನ್ನು ಪದೇ ಪದೇ ಭೇಟಿಯಾಗಿ ಕಾಮಗಾರಿ ಆರಂಭಕ್ಕೆ ಪ್ರಯತ್ನ ಆರಂಭಿಸಿದ್ದಾರೆ.

## ಸಾರಿಗೆ ನೌಕರರ ವೇತನ ಪರಿಷ್ಕರಣೆ

• ಪ್ರಜೋದಯ ವರದಿ

**ಬೆಂಗಳೂರು:** ಕೆಎಸ್‌ಆರ್‌ಟಿಸಿ ಸೇರಿ ನಾಲ್ಕು ರಸ್ತೆ ಸಾರಿಗೆ ಸಂಸ್ಥೆಗಳ ನೌಕರರು, ಅಧಿಕಾರಿಗಳ ವೇತನವನ್ನು ಶೇ.12.5ರಷ್ಟು ಪರಿಷ್ಕರಣೆ ಮಾಡಿ ರಾಜ್ಯ ಸರ್ಕಾರ ಆದೇಶಿಸಿದೆ.

ವೇತನ ಹೆಚ್ಚಳ 2025 ಏಪ್ರಿಲ್ 1 ರಿಂದಲೇ ಅನ್ವಯವಾಗಲಿದೆ. ಹೆಚ್ಚಾದ ಸಂಬಳ ಜುಲೈನಿಂದ ಲಭ್ಯವಾಗಲಿದೆ. 2025ರ ಏ.1ರಿಂದ 2026ರ ಜೂನ್ 30ರ ವರೆಗಿನ ವೇತನ ಪರಿಷ್ಕರಣೆ ಹೆಚ್ಚಳದ ಹಿಂಬಾಕಿ ಮೊತ್ತವನ್ನು ಮುಂದಿನ ದಿನಗಳಲ್ಲಿ ಪಾವತಿ ಮಾಡಲಾಗುವುದೆಂದು ಸರ್ಕಾರ ತಿಳಿಸಿದೆ.

ನಾಲ್ಕು ಸಾರಿಗೆ ಸಂಸ್ಥೆಗಳ 1 ಲಕ್ಷದ 5 ಸಾವಿರ ಸಿಬ್ಬಂದಿಗೆ ವೇತನ ಪರಿಷ್ಕರಣೆ ಅನ್ವಯವಾಗಲಿದೆ. ಅದರಿಂದ ನಾಲ್ಕು ಸಾರಿಗೆ ನಿಗಮಗಳಿಗೆ ಪ್ರತಿ ತಿಂಗಳು 72.80 ಕೋ.ರೂ., ಪ್ರತಿ ವರ್ಷ 873.64 ಕೋ.ರೂ. ಹೆಚ್ಚುವರಿ ವೆಚ್ಚವಾಗಲಿದೆ. ಈಗಾಗಲೇ 2023ರ ಮಾರ್ಚ್ ವೇತನ ಪರಿಷ್ಕರಣೆಯ 26 ತಿಂಗಳ ಹಿಂಬಾಕಿ ಮೊತ್ತ 1271.92 ಕೋ.ರೂ. ಇದ್ದು, ಮೊದಲ ಕಂತಿನ ಹಣ ರೂ. 450 ಕೋ.ರೂ.ಗಳನ್ನು ಸರ್ಕಾರವು ಬಿಡುಗಡೆ ಮಾಡಿದೆ.

CMYK CMYK CMYK CMYK



# ಎಲ್ಲೆಲ್ಲೂ ಇಲಿಯೇ!




ಮನುಕುಲದೊಂದಿಗೆ ದೀರ್ಘಕಾಲದ ಸಹಬಾಳ್ವೆಯನ್ನು ಹೊಂದಿರುವ ಜೀವಿಗಳಲ್ಲಿ ಪ್ರಮುಖ ಸ್ಥಾನದಲ್ಲಿರುವ ಇಲಿಗಳದ್ದು ಬಿಟ್ಟೆನೆಂದರೂ ಬಿಡದ ಬಂಧವಾಗಿ ಅದರ ಉಚ್ಚಾಟನೆಗೆ ಪ್ರಯೋಗಿಸುವ ನಮ್ಮೆಲ್ಲಾ ತಂತ್ರಗಳನ್ನೂ ಅತಂತ್ರಗೊಳಿಸಿ ಜಯಭೇರಿಯೊಂದಿಗೆ ಮುನ್ನಡೆಯುತ್ತಲೇ ಇರುತ್ತದೆ. ನಮ್ಮ ಮನೆಯನ್ನೇ ಅಲಿಖಿತವಾಗಿ ತಮ್ಮದಾಗಿಸಿಕೊಂಡಿರುವ ನಮ್ಮೀ ಸಹಬಂಧುಗಳು ಅಡಿಗಡಿಗೂ ಸವಾಲೊಡ್ಡುತ್ತಾ ದೊಡ್ಡ ತಲೆನೋವಾಗಿಯೇಬಿಡುತ್ತವೆ.

ಕೃಷಿಯನ್ನೇ ಜೀವನೋಪಾಯವಾಗಿಸಿಕೊಂಡಿದ್ದ ನಮ್ಮ ಮನೆಯಲ್ಲಿ ಧವಸ-ಧಾನ್ಯಗಳನ್ನು ತುಂಬಿಡುತ್ತಿದ್ದ ವಾಡೆ-ಪೆಟ್ಟಿಗೆಗಳೆಲ್ಲಾ ಇಲಿಗಳದೇ ಸಾಮ್ರಾಜ್ಯವಾಗಿದ್ದು ಅವುಗಳನ್ನು ಹೊರದೂಡುವುದರಲ್ಲಿ ಸಾಕುಸಾಕಾಗುತ್ತಿತ್ತು. ಮನೆಕೆಲಸ ಮಾಡುತ್ತಿದ್ದ ಹುಡುಗರು ಇಲಿಯ ಕಾಟಕ್ಕೆ ರೋಸಿಹೋಗಿ ಬೋನಿಗೆ ಬಿದ್ದ ಇಲಿಗಳನ್ನು ಸಮೀಪದ ನಾಲೆಯೊಳಗೆ ಮುಳುಗಿಸಿಬಿಡುತ್ತಿದ್ದರು. ತಮ್ಮ ಸ್ವಲ್ಪ ದೊಡ್ಡವನಾದ ನಂತರ ಇಲಿವಿಲೇವಾರಿ ಕಾರ್ಯವನ್ನು ವಹಿಸಿಕೊಂಡು ಅತ್ಯುತ್ಸಾಹದಿಂದ ಇಲಿಗಳನ್ನು ದೂರದ ಪೊದೆಗಳಲ್ಲಿ ಬಿಟ್ಟುಬರಲಾರಂಭಿಸಿದ. ಒಮ್ಮೆ ಹೀಗೇ ಬೆಳಿಗ್ಗೆ ಎದ್ದವನೇ ಕತ್ತಲು ತುಂಬಿದ್ದ ಓಡೆಯ ಬಳಿ ಓಡಿಹೋಗಿ ಬೋನು ತೆಗೆದುಕೊಳ್ಳಲು ಕೈಚಾಚಿದಾಗ ಅದರೊಳಗಿಂದ ಫಳಫಳನೆ ಹೊಳೆದಂತಾಗಿ ಟಾರ್ಚ್ ಬಿಟ್ಟು ನೋಡಿದಾಕ್ಷಣವೇ ಬೋನಿನೊಳಗೆ ನಾಗರಹಾವು ಕಂಡಿದೆ!

ನಮ್ಮ ಮನೆಯಲ್ಲಿದ್ದ ಬೆಕ್ಕುಗಳಂತೂ ಕಾಲಕಾಲಕ್ಕೆ ಯಥೇಚ್ಛವಾಗಿ ದೊರೆಯುತ್ತಿದ್ದ ಹಾಲನ್ನವನ್ನು ತಿನ್ನುತ್ತಾ ಪರಮ ಸಾಧುಗಳಾಗಿ ಮುಂದೆ ಬಂದರೆ ಹಾಯಲಾರೆ, ಹಿಂದೆ ಬಂದರೆ ಒದೆಯಲಾರೆ ಎನ್ನುವಂತೆ ಸದಾ ಮಲಗಿದ್ದು ಇಲಿಗಳು ಮೈಮೇಲೆ ಓಡಾಡಿದರೂ ಜುಮ್ಮೆನ್ನುತ್ತಿರಲಿಲ್ಲ. ಒಮ್ಮೆ ಯುವಬೆಕ್ಕೊಂದು ತಮ್ಮನ ಪುಸ್ತಕದ ಗೂಡಿನಿಂದ ಹೊರಗಿಣುಕಿದ ಇಲಿಯನ್ನು ಗಬಕ್ಕನೆ ಹಿಡಿದುಕೊಂಡೇಬಿಟ್ಟಿತು. ಅವತ್ತೆಲ್ಲಾ ತಮ್ಮ ಅತ್ತಿದ್ದೂಅತ್ತಿದ್ದೆ!

ನಾವು ಐದನೇ ಕ್ಲಾಸಿಗೆ ಅಡಿಯಿಟ್ಟು ಇಂಗ್ಲಿಷ್ ಕಲಿತಾಗ ಆಡುತ್ತಿದ್ದ ಚಿತ್ರರಚನಾ ಆಟವೆಂದರೆ ಇಟ್ರಂಥಿ ಅಕ್ಷರಗಳಲ್ಲಿ ಇಲಿಯನ್ನು ಬರೆಯೋ ಸಂಭ್ರಮ! ಅದೇ ತಾನೇ ಸ್ಲೇಟ್‌ನಿಂದ ನೋಟ್‌ಬುಕ್‌ಗೆ ಪ್ರಮೋಷನ್ನಾಗಿದ್ದ ನಮ್ಮ ಹೊಸಪುಸ್ತಕದ ಹಾಳೆಹಾಳೆಗಳ ಮೂಲೆಮೂಲೆಗಳಲ್ಲೂ ಇಲಿಗಳದ್ದೇ ಸಂಚಾರ!

ಗೌರಿಹಬ್ಬದಲ್ಲಿ ಗಣಪತಿಯನ್ನು ತಂದಾಗಲೆಲ್ಲಾ ತಮ್ಮನಿಗೆ ಅಷ್ಟು ದೊಡ್ಡ ಗಣಪತಿ ಅದ್ಹೇಗೆ ಅಷ್ಟೊಂದು ಪುಟ್ಟ ಇಲಿ ಮೇಲೆ ಕೂರ್ತಾನೆನ್ನುವುದೇ ಸಮಸ್ಯೆಯಾಗ್ತಿತ್ತು. ಆಗೆಲ್ಲಾ ವಾಮದೇವಋಷಿಯು ಯಾಗಪೀಡಕ ಕ್ರೌಂಚರಾಕ್ಷಸನನ್ನು ಇಲಿಯಾಗಿಸಿದರೂ ಬೃಹದಾಕಾರವಾಗಿ ಬೆಳೆದು ಎಲ್ಲರನ್ನೂ ಹಿಂಸಿಸಲಾರಂಭಿಸಿದಾಗ ಗಣೇಶನು ಅಸ್ತ್ರವನ್ನು ಪ್ರಯೋಗಿಸಿ ತನ್ನ ವಾಹನವನ್ನಾಗಿಸಿಕೊಂಡ ಕಥೆಯನ್ನು ಅಣ್ಣ ಹೇಳ್ತಿದ್ದರು. ಪ್ರತಿವರ್ಷವೂ ಶಮಂತಕೋಪಾಖ್ಯಾನದಂತೆಯೇ ಈ ಕಥೆಯನ್ನು ಹೇಳುವುದೂ ಒಂದು ಸಂಪ್ರದಾಯದಂತೆಯೇ ಆಗಿಬಿಟ್ಟಿತ್ತು! ನಾವು ಪರೋಕ್ಷವಾಗಿ ಇಲಿಗೂ ಗಣಪತಿಯೊಂದಿಗೆ ಪೂಜೆ ಮಾಡಿದರೆ ಉತ್ತರ ಕರ್ನಾಟಕದಲ್ಲಿ ಗಣೇಶ ಚತುರ್ಥಿಯ ಮಾರನೇದಿನ ಇಲಿಹಬ್ಬವನ್ನೇ ಆಚರಿಸಿ ಇಲಿಪೂಜೆಯನ್ನು ಮಾಡುತ್ತಾರಂತೆ!

ನಮ್ಮಕ್ಕನಿಗೆ ಪಟ್ಟಣದಲ್ಲಿ ಕೆಲಸ ಸಿಕ್ಕಾಗ ಮನೆಮಾಡಿ ತಮ್ಮನನ್ನೂ ಅಲ್ಲೇ ಓದಲು ಕರೆದುಕೊಂಡುಹೋದಳು. ಅಲ್ಲಿಯೂ ಇಲಿಗಳ ಹಾವಳಿಯಿದ್ದು ಅವರೊಂದಿಗಿದ್ದ ನಮ್ಮತ್ತೆಯ ಕೈಯನ್ನು ಇಲಿಯೊಂದು ಕುರುಕಿ ಇಂಜೆಕ್ಷನ್ ತೆಗೆದುಕೊಳ್ಳುವಂತಾದಾಗ ಸ್ವಲ್ಪ ಸೀರಿಯಸ್ನೆಸ್ ಉಂಟಾಯಿತು. ಅಷ್ಟೇ ಅಲ್ಲದೆ ಹೊಸದಾಗಿ ಹೊಲಿಸಿದ್ದ ಹತ್ತಿಯ ಸುಪ್ಪತ್ತಿಗೆಗಳನ್ನು ಅವರೆಲ್ಲಾ ಊರಿಗೆ ಬಂದು ಹೋಗುವಷ್ಟರಲ್ಲಿ ಛಿದ್ರಗೊಳಿಸಿ ಮನೆಯ ತುಂಬಾ ಹರಡಿ ಹಿಂಜಿದ ಅರಳೆಯು ಗಾಳಿಗೆ ಹಾರಿ ಮೋಡಗಳಾಗಿವೆಯೇ ಎನ್ನುವಂತಾಗಿತ್ತು. ಅಲ್ಲಿಗೊಮ್ಮೆ ಹೋಗಿದ್ದಾಗ ನನ್ನ ಹೊಚ್ಚಹೊಸ ಚಂದೇರಿ ಸೀರೆಯನ್ನೂ ಚಿಂದಿಚಿಂದಿ ಮಾಡಿ ನನ್ನ ಮೇಲೂ ಸೇಡುತೀರಿಸಿಕೊಂಡವು.

ಈ ಎಲ್ಲಾ ವಿದ್ಯಮಾನಗಳಿಂದ ಇಲಿಯ ಬಗೆಗಿನ ತಮ್ಮನ ಹೆಂಗರುಳೂ ಪೆಡಸಾಗಿ ಕಂಡಲ್ಲಿ ಬಡಿಯಬೇಕೆನಿಸುವಂತಾಯ್ತು. ಒಮ್ಮೆ ರಾತ್ರಿ ಎಲ್ಲರೂ ಸಾಲಾಗಿ ಮಲಗಿದ್ದಾಗ ತಮ್ಮ ಹಿಡಿದೇಬಿಟ್ಟೆ ಎನ್ನುವಾಗಲೇ ನಮ್ಮಕ್ಕ ಹೋಎಂದು ಕಿರುಚುವುದ ರೊಟ್ಟಿಗೇ ಬಿಡೋ ಕೈನ ಎನ್ನುವಷ್ಟರಲ್ಲಿ ಅವನು ಇಲಿ ಯನ್ನು ಹಿಚುಕಿ ಕೊಲ್ಲುವ ಸಾಹಸದಲ್ಲಿ ಅವಳ ಕೈ ನಜ್ಜುಗುಜ್ಜಾಗಿ ಊದಿಕೊಂಡಿತ್ತು! ಹಲಗೆಸೇವೆ ಮಾಡಿದ್ದ ಆ ಹೆಂಚಿನ ಮನೆಯಲ್ಲಿ ರಾತ್ರಿಯಾದಾ ಕ್ಷಣವೇ ಅಟ್ಟದ ಮೇಲೆ ಇಲಿಗಳ ನೆಗೆದಾಟ-ಕುಣಿದಾಟಗಳು ಪ್ರಾರಂಭವಾಗೇ ಬಿಡುತ್ತಿತ್ತು! ಕುವೆಂಪುರವರ ಬೊಮ್ಮನ ಹಳ್ಳಿಯ ಕಿಂದರಿಜೋಗಿಯಲ್ಲಿರುವಂತೆ ಅಲ್ಲೇನಿಲಿಗಳ ಕಾಟವೆ ಕಾಟ ಎನ್ನುವಂತಾಯ್ತು. ರಾಬರ್ಟ್ ಬ್ರೌನಿಂಗ್ರವರ ಭಾವಾನುವಾದವಿದಾದ್ದರಿಂದ ಇಂಗ್ಲಿಷ್‌ನವರಿಗೂ ಇಲಿ ಗಳು ಕಾಟಕೊಡ ದೇಬಿಟ್ಟಿಲ್ಲವೆನ್ನುವುದು ಅಂಡರ್‌ಸ್ಟುಡ್! ಮುಂದಿನ ದಿನಗಳಲ್ಲಿ ಕೆರೆಯೊಂದರ ಸಮೀಪವೇ ನಮ್ಮ ಸ್ವಗೃಹವನ್ನು ಕಟ್ಟಿಕೊಳ್ಳ ಬೇಕಾದ ಅನಿವಾರ್ಯತೆ ಯುಂಟಾದ್ದರಿಂದ ಕ್ರೌಂಚ ಬಂಧುಗಳಾದ ದೊಡ್ಡದೊಡ್ಡ ಹೆಗ್ಗಣಗಳನ್ನೇ ಎದುರಿಸ ಬೇಕಾಯ್ತು. ಬಾಗಿಲ ಮುಂದೆಯೇ ಮರಿಹಂದಿಗಳಂತಹ ಈ ದೈತ್ಯರು ನಾಯಿ-ಬೆಕ್ಕುಗಳನ್ನೂ ಬೆದರಿಸುತ್ತಾ ಗುಟುರುಹಾಕಿಕೊಂಡು ಓಡಾಡುತ್ತಾ ಇನ್ನೆಲ್ಲಿ ಮನೆಯೊಳಗೆ ನುಗ್ಗಿಬಿಡುತ್ತವೋ ಎಂದು ಹೆದರಿ ಒಳಗೆ ದೌಡಾಯಿಸಿ ಬಾಗಿಲುಮುಚ್ಚುವಂತಾಯ್ತು. ಯಾವುದೋ ಮಾಯದಲ್ಲಿ ಮನೆ ಪ್ರವೇಶಿಸುತ್ತಿದ್ದ ಇಲಿಗಳು ವಾರ್ಡ್‌ರೋಬ್‌ಗಳೊಳಗೆ ಮರಿಹಾಕಿ ಸಂತಾನಾಭಿವೃದ್ಧಿ ಮಾಡಿಕೊಂಡು ಮನೆತುಂಬಾ ಸಡಗರಿಸುತ್ತಾ ಚಜ್ಜ-ಸ್ಲ್ಯಾಬ್‌ಗಳ ಮೇಲೆಲ್ಲಾ ನೆಗೆಯುತ್ತಾ-ಕುಣಿಯುತ್ತಾ-ಫೈಟಿಂಗ್‌ಮಾಡುತ್ತಾ ಚಾತುರ್ಯಪ್ರದರ್ಶನ ಮಾಡಲಾರಂಭಿಸಿದುವು.

ಇಲಿಮನೆಯಲ್ಲೇ ನಾವೇನಾದರೂ ವಾಸಿಸುತ್ತಿದ್ದೀವೇನೋ ಎನ್ನುವಂತಾಗಿ ಮಗಮುದ್ದು ಸ್ಕೂಲಿನಲ್ಲಿ ನೋಟ್‌ಬುಕ್ ತೆಗೆಯಲು ಹೋದಾಗ ಬ್ಯಾಗಿಂದ ಇಲಿಯೊಂದು ಛಂಗನೆ ಹಾರಿದ್ದು, ಹೋಮ್‌ವರ್ಕ್ ಬುಕ್ಕನ್ನು ಇಲಿ ಕಡಿದುಹಾಕಿದೆಯೆಂದು ಮುದ್ದುಮಗಳು ಗೋಳಾಡಿದ್ದು, ಆಫೀಸಿಗೆ ಹೋಗುವ ಆತುರದಲ್ಲಿ ಮನೆಯವರು ಶೂ ಹಾಕಿಕೊಳ್ಳಲು ಹೋದಾಗ ಅದರೊಳಗಿಟ್ಟಿದ್ದ ಸಾಕ್ಸ್ ಜೂಲುಜೂಲಾಗಿದ್ದು, ಇದೆಲ್ಲದರ ಡೈರೆಕ್ಟ್ ಎಫೆಕ್ಟ್ ನನ್ನ ಮೇಲೇ ಆಗುತ್ತಿದ್ದುದರಿಂದ ನನ್ನ ಪಾಡಂತೂ ಕೇಳುವಂತೆಯೇ ಇಲ್ಲ.

ಇಂಥಾ ಇಲಿಗಳೊಂದಿಗಿನ ಸಹಬಾಳ್ವೆಯಲ್ಲೇ ಮಕ್ಕಳು ಬೆಳೆದು ದೊಡ್ಡವರಾದಂತೆಯೇ ಅದೇವರ್ಷ ಗಣಪತಿ ಹಬ್ಬದಂದು ಸಂಜೆ ಮಂಗಳಾರತಿಗೆ ಬಂದು ಎಲ್ಲರೂ ಕುಳಿತಿದ್ದಾಗ ಅನಾಮತ್ತಾಗಿ ಒಬ್ಬರ ಪಂಚೆಯೊಳಗೆ ಇಲಿಯೊಂದು ನುಗ್ಗಿ ಕೋಲಾಹಲವೆಬ್ಬಿಸಿದ್ದರಿಂದುಂಟಾದ ಅವಮಾನದಿಂದ ಮಗನೇ ಇಲಿಗಳ ನಿರ್ಮೂಲನಾ ಯೋಜನೆಯನ್ನು ಹಾಕಿಕೊಂಡು ಬಹಳ ದಿನಗಳಿಂದಲೂ ಬೋನಿಗೂ ಬೀಳದೇ ಸತಾಯಿಸುತ್ತಿದ್ದ ಇಲಿಗಳನ್ನು ಹೊರದಬ್ಬುವ ಪ್ರಥಮ ಪ್ರಯತ್ನವಾಗಿ ಚಜ್ಜದ ಮೇಲಿನ ಇಲಿಸಂಸಾರವನ್ನು ಉಚ್ಚಾಟಿಸಲು ಸ್ಲಾಬ್ ಏರಿ ಕಾರ್ಯಾಚರಣೆಗೆ ತೊಡಗಿದ್ದಾಗ ಅನಿರೀಕ್ಷಿತವಾಗಿ ಇಲಿಯೊಂದು ಮೇಲಿನಿಂದ ಗುರಿಯಿಟ್ಟಂತೆ ಅವನ ಎದೆಗೇ ಅಪ್ಪಳಿಸಿದಾಗ ಗಂಡುಗುಂಡಿಗೆಯೂ ಅಲ್ಲಾಡಿ ಅವನು ಹೋ ಎಂದು ಅಬ್ಬರಿಸುತ್ತಾ ನೆಗೆದು ಓಡಿದ್ದು, ಇಂಥಾ ವಿದ್ಯಮಾನಗಳಲ್ಲೆಲ್ಲಾ ಚಿಟ್ಟನೆ ಚೀರುವುದೇ ಸ್ಪಾಂಟೇನಿಯಸ್ ರಿಯಾಕ್ಷನ್ನಾಗಿದ್ದ ನಮಗೆ ಖುಷಿಯಾಯ್ತು! ಇಲಿಗಳ ಪ್ರವೇಶದ್ವಾರವನ್ನೇ ಮುಚ್ಚುವ ಕೈಂಕರ್ಯವನ್ನು ಕೈಗೊಂಡು ನೆಲ-ಜಲ ದ್ವಾರಗಳನ್ನೆಲ್ಲಾ ಬಂದ್ ಮಾಡಲಾಯಿತು. ಡ್ರೈನೇಜ್‌ಗಳ ತೆರಪುಗಳನ್ನೆಲ್ಲಾ ಮುಚ್ಚಿದರೂ ಮೂಷಕ ಪ್ರವೇಶವನ್ನು ಮಾತ್ರ ತಡೆಯಲಾಗಲಿಲ್ಲ. ಮತ್ತೆಲ್ಲಿಂದ ಬರುತ್ತಿವೆ ಎಂದು ತಲೆಕೆಡಿಸಿಕೊಳ್ಳುತ್ತಿದ್ದಾಗ ಒನ್ ಫೈನ್ ಡೇ ಹಾಲ್‌ನ ವೆಂಟಿಲೇಟರ್ ಬಳಿ ಸದ್ದಾಗಲಾರಂಭಿಸಿತು. ಎಲ್ಲರೂ ಕೋಲನ್ನು ಹಿಡಿದು ಕದನ ಸನ್ನದ್ಧರಾಗಿ ಶತ್ರುವನ್ನ ಹಿಮ್ಮೆಟ್ಟಿಸಲು ಅನುವಾದಾಗ ಮೇಲಿನಿಂದ ಅಯಾಚಿತ್ತಾಗಿ ಇಲಿಶೂರನೊಬ್ಬ ಒಳಕ್ಕೆ ಡೈಹೊಡೆದಾಕ್ಷಣವೇ ಮಗಳು ಕಿವಿಗಡಚಿಕ್ಕುವಂತೆ ಚೀರಿ ಸೋಫಾ ಏರಿ ಕುಣಿದಾಡಿಯೇಬಿಟ್ಟಳು! ಇಂಥಾ ತೀವ್ರಾತಿತೀವ್ರ ಶಬ್ದಾಘಾತದಿಂದ ಕಾಣೆಯಾದ ಆ ಇಲಿ ಮತ್ತೆಂದೂ ಕಾಣಸಿಗಲಿಲ್ಲ! ಈರೀತಿ ವಾಯುಮಾರ್ಗದಲ್ಲಿ ಇಲಿಶತ್ರುವನ್ನು ನಿರೀಕ್ಷಿಸದ ನಾವು ಬೆಪ್ಪಾಗಿ ವೆಂಟಿಲೇಟರ್‌ಗಳನ್ನೂ ಮುಚ್ಚಬೇಕಾಯಿತು.

ಇಲಿಗಳೇ ಇಲ್ಲದ ಜಾಗವಿದೆಯೇ ಎಂದು ವೈರಾಗ್ಯಹೊಂದಬಹುದಿತ್ತೇನೋ ಅಥವಾ ನೂಲನ್ನು ಕತ್ತರಿಸದಂತೆ ಇಲಿಗಳನ್ನು ಪೂಜಿಸುತ್ತಿದ್ದ ನೇಕಾರರಂತೆ ಇಲಿಪೂಜೆ ಮಾಡುವುದೋ ಆದರೆ ಇತ್ತೀಚೆಗೆ ಕೆನಡಾದ ಅಲ್ಬರ್ಟಾವು ಇಲಿಗಳಿಂದ ಮುಕ್ತವಾದ ಪ್ರಾಂತ್ಯವಾಗಿದೆ ಎಂದು ತಿಳಿದಾಗಿನಿಂದ ನಾವೂ ಪರಮ ಆಶಾವಾದದಲ್ಲಿ ನಮ್ಮ ಪ್ರಯತ್ನವನ್ನು ಮುಂದುವರೆಸುತ್ತಿದ್ದೇವೆ!

**- ಪ್ರಭಾಮಣಿ ನಾಗರಾಜ,** ಹಾಸನ



# ರಾತ್ರಿಯ ನೀಲಾಕಾಶದ ನೋಟ ಒಂದು ಹಿತವಾದ ಅನುಭವ

ಒಂದು ಭಾನುವಾರದ ರಾತ್ರಿ ಎಂಟು ಗಂಟೆಯ ಸಮಯ. ಊಟ ಮುಗಿಸಿದ ತಂದೆ ಕುಮಾರ್ ಮನೆಯ ತಾರಸಿಯ ಮೇಲೆ ಕುರ್ಚಿಯಲ್ಲಿ ಕುಳಿತಿದ್ದರು. ರಾತ್ರಿಯ ನೀಲಾಕಾಶ ಸ್ವಚ್ಛಂದವಾಗಿತ್ತು. ನಕ್ಷತ್ರಗಳು ಫಳಫಳನೆ ಹೊಳೆಯುತ್ತಿದ್ದವು. ತಣ್ಣನೆಯ ಗಾಳಿ ಬೀಸುತ್ತಿತ್ತು. ಮನಸ್ಸಿಗೆ ಒಂದು ರೀತಿ ಹಿತವಾದ ಅನುಭವವಾಗುತ್ತಿತ್ತು. ಇದೇ ವೇಳೆಗೆ ಇಬ್ಬರು ಮಕ್ಕಳು ಮಾನ್ಯ ಮತ್ತು ಧನ್ಯ ಮನೆಯ ತಾರಸಿಯ ಮೇಲೆ ಕುಳಿತ ತಂದೆಯ ಬಳಿ ಬಂದು ನಕ್ಷತ್ರಗಳನ್ನು ನೋಡುತ್ತಾ ಕುಳಿತಿರುತ್ತಾರೆ. ಮಾನ್ಯ ಕೇಳುತ್ತಾಳೆ, ಅಪ್ಪ, ಈ ಇಡೀ ಭೂಮಿ ಹೇಗೆ ಕೆಲಸ ಮಾಡುತ್ತದೆ? ಅಲ್ಲಿಂದ ಅವರ ಜ್ಞಾನದ ಪಯಣ ಆರಂಭವಾಗುತ್ತದೆ. ಮಗಳ ಈ ಪ್ರಶ್ನೆಯ ಮೂಲಕ ಅವರಲ್ಲಿದ್ದ ಕುತೂಹಲವನ್ನು ಗಮನಿಸಿದ ತಂದೆ ಕುಮಾರ್ ವಿವರಿಸುತ್ತಾರೆ: ಮಕ್ಕಳೇ, ಈ ಭೂಮಿ ಒಂದು ಈರುಳ್ಳಿಯಂತೆ, ಪದರ ಪದರಗಳಿಂದ ಕೂಡಿದೆ. ಭೂಮಿಯ ಮೇಲ್ಪದರು ತೊಗಟೆಯಾಗಿದೆ. ಇಲ್ಲಿಯೇ ನಾವು ವಾಸಿಸುತ್ತಿದ್ದೇವೆ. ಇದನ್ನು ಭೂ ಕವಚ ಎಂದು ಕರೆಯಲಾಗುತ್ತದೆ. ಇನ್ನು ಎರಡನೇ ಪದರು ಮ್ಯಾಂಟಲ್ ಆಗಿದೆ. ಇದರಲ್ಲಿ ಕೊತಕೊತ ಕುದಿಯುವ ದ್ರವರೂಪದ ಲಾವಾ ಇದೆ. ಇದನ್ನೇ ಮ್ಯಾಗ್ಮಾ ಎನ್ನಲಾಗುತ್ತದೆ. ಭೂಮಿಯ ಮೂರನೇ ಪದರು ಭೂಗರ್ಭ ಎನಿಸಿದೆ. ಇದು ಘನಾಕೃತಿಯ ಗಟ್ಟಿ ಪದಾರ್ಥವಾಗಿದೆ. ಭೂಮಿಯ ಒಳಭಾಗದ ಶಾಖ ಮತ್ತು ಲಾವಾ ಮತ್ತು ಕಬ್ಬಿಣದ ತಿರುಳಿನ ಬಗ್ಗೆ ಹೇಳುವಾಗ ಮಕ್ಕಳು ಬೆರಗಾಗುತ್ತಾರೆ.

ಧನ್ಯ ಕೇಳುತ್ತಾಳೆ, ಅಪ್ಪ, ಇಷ್ಟು ಎತ್ತರದ ಹಿಮಾಲಯ ಪರ್ವತಗಳು ಅಲ್ಲಿಗೆ ಹೇಗೆ ಬಂದವು? ಹಿಮಾಲಯ ಪರ್ವತ ಶ್ರೇಣಿಗಳು ಬಹಳ ಆಶ್ಚರ್ಯವಲ್ಲವೇ?

ಹೌದು ಮಗು, ನಿನ್ನ ಪ್ರಶ್ನೆಗಳು ಸರಿಯಾಗಿವೆ ಎನ್ನುತ್ತಾ ತಂದೆ ಕುಮಾರ್ ನಗುತ್ತಾ ವಿವರಿಸುತ್ತಾರೆ, ನೋಡು ಧನ್ಯ, ಎರಡು ಬಲವಾದ ವಸ್ತುಗಳು ಪರಸ್ಪರ ಡಿಕ್ಕಿ ಹೊಡೆದಾಗ ಅವುಗಳ ಮಧ್ಯದ ಭಾಗ ಮೇಲೆ ಏಳುತ್ತದಲ್ಲವೇ? ಹಾಗೆಯೇ, ಲಕ್ಷಾಂತರ ವರ್ಷಗಳ ಹಿಂದೆ ಈ ಭೂಮಿಯ ಅಂತರಾಳದಲ್ಲಿ ತೇಲುವ ಪ್ಲೇಟ್‌ಗಳು ಒಂದಕ್ಕೊಂದು ಜೋರಾಗಿ ಡಿಕ್ಕಿ ಹೊಡೆಯುತ್ತಿರುತ್ತವೆ. ಭಾರತ ಮತ್ತು ಏಷ್ಯಾ ಖಂಡದ ಭಾಗಗಳಲ್ಲಿ ಈ ಪ್ರಕ್ರಿಯೆ ನಡೆದಿರುವುದರಿಂದ ಹಿಮಾಲಯ ಪರ್ವತಗಳು ಇಲ್ಲಿಯೇ ರೂಪುಗೊಂಡಿವೆ. ನೀನು ಹೇಳಿದಂತೆ ಹಿಮಾಲಯ ಪರ್ವತಗಳು ಈ ಸೃಷ್ಟಿಯ ಅನನ್ಯ ಅಚ್ಚರಿಯಾಗಿವೆ ಕಂದ. ಭೂಮಿಯ ಅಂತರಾಳದಲ್ಲಿ ಪ್ಲೇಟ್‌ಗಳು ಜೋರಾಗಿ ಡಿಕ್ಕಿ ಹೊಡೆಯುವ ಪ್ರಕ್ರಿಯೆಯಲ್ಲಿ ಭೂಮಿ ಮಡಚಿಕೊಂಡು ಈ ದೈತ್ಯ ಪರ್ವತಗಳು ಸೃಷ್ಟಿಯಾದವು. ಇವುಗಳನ್ನು ನಾವು ಮಡಿಕೆ ಪರ್ವತಗಳು ಎನ್ನುತ್ತೇವೆ. ಅಂದರೆ, ಇಂದಿಗೂ ಹಿಮಾಲಯ ಪ್ರತಿ ವರ್ಷ ಕೆಲವು ಮಿಲಿಮೀಟರ್‌ಗಳಷ್ಟು ಎತ್ತರ ಬೆಳೆಯುತ್ತಲೇ ಇದೆ! ಎಂದು ಭೂ ವಿಜ್ಞಾನಿಗಳು ಊಹಿಸುತ್ತಾರೆ. ಎಂದು ತಂದೆ ಹೇಳಿದಾಗ ಮಕ್ಕಳು ಕುತೂಹಲದಿಂದ ಕೇಳುತ್ತಿರುತ್ತಾರೆ. ಮನೆಯ ಕೆಲಸಗಳನ್ನು ಮುಗಿಸಿ ತಾಯಿ ವೈಶಾಲಿ ತಾರಸಿಯ ಮೇಲೆ ಬಂದು ಸೇರಿಕೊಳ್ಳುತ್ತಾಳೆ. ಏನೋ ಯೋಚನೆ ಮಾಡುತ್ತಿದ್ದ ಮಾನ್ಯಳನ್ನು ಗಮನಿಸಿದ ತಂದೆ, ಮಾನ್ಯ, ನೀನು ಏನು ಯೋಚ್ನೆ ಮಾಡ್ತಾ ಇದ್ದೀಯಾ? ಎನ್ನುತ್ತಾನೆ. ಕೂಡಲೇ ಮಾನ್ಯ ಕೇಳುತ್ತಾಳೆ, ಸಮುದ್ರದ ಅಡಿಯಲ್ಲಿ ಏನಿದೆ ಅಪ್ಪ? ತಂದೆ ಕುಮಾರ್ ಮಕ್ಕಳಿಗೆ ಕಣ್ಣು ಮುಚ್ಚಿ ಕಲ್ಪಿಸಿಕೊಳ್ಳಲು ಹೇಳುತ್ತಾರೆ: ಸಮುದ್ರದ ಅಡಿಯಲ್ಲಿ ಭೂಮಿಗಿಂತಲೂ ದೊಡ್ಡ ಪರ್ವತ ಶ್ರೇಣಿಗಳಿವೆ, ಆಳವಾದ ಕಂದಕಗಳಿವೆ. ಮರಿಯಾನಾ ಟ್ರೆಂಚ್ ಎನ್ನುವ ಕಂದಕ ಎಷ್ಟು ಆಳವಾಗಿದೆ ಎಂದರೆ, ಅದರೊಳಗೆ ಮೌಂಟ್ ಎವರೆಸ್ಟ್ ಪರ್ವತವನ್ನು ಇಟ್ಟರೂ ಅದು ಮುಳುಗಿ ಹೋಗುತ್ತದೆ! ಅಲ್ಲಿ ಸೂರ್ಯನ ಬೆಳಕು ತಲುಪುವುದಿಲ್ಲ, ವಿಚಿತ್ರವಾದ ಜೀವಿಗಳು ಸ್ವಯಂ ಪ್ರಕಾಶದೊಂದಿಗೆ ಬದುಕುತ್ತವೆ. ಎಂದು ಹೇಳಿದಾಗ, ಹೌದಾ ಅಪ್ಪಾ ಎಂದು ಆಶ್ಚರ್ಯದಿಂದ ನೋಡುತ್ತಾರೆ.


ತಾನು ಹೇಳುತ್ತಿರುವ ವಿಷಯವನ್ನು ಮುಂದುವರಿಸಿದ ತಂದೆ ನೋಡಿ ಮಕ್ಕಳೇ, ನಾವು ವಾಸಿಸುವ ಈ ಭೂಮಿಯ ಮೇಲಿನ ಗಾಳಿ ಕೇವಲ ಉಸಿರಾಡಲಿಕ್ಕಷ್ಟೇ ಅಲ್ಲ, ಅದು ನಮ್ಮ ರಕ್ಷಕ, ಎನ್ನುತ್ತಾರೆ ತಂದೆ. ಈ ಭೂಮಿಯ ಮೇಲೆ ಓಝೋನ್ ಪದರವಿದೆ. ಸೂರ್ಯನ ಹಾನಿಕಾರಕ ಅತಿನೇರಳೆ ಕಿರಣಗಳಿಂದ ನಮ್ಮನ್ನು ಕಾಪಾಡುವ ಛತ್ರಿಯಂತೆ ಹರಡಿದೆ. ಅದಲ್ಲದೇ ನಮ್ಮ ಭೂಮಿಗೆ ಗುರುತ್ವಾಕರ್ಷಣೆಯ ಶಕ್ತಿ ಇದೆ. ಭೂಮಿ ತನ್ನ ವಾತಾವರಣವನ್ನು ಹಿಡಿದಿಟ್ಟು ಕೊಂಡಿರುವುದರಿಂದಲೇ ನಾವು ವಾಸಿಸಲು ಅವಕಾಶ ಮತ್ತು ಯೋಗ್ಯವೆನಿಸಿದೆ. ಎನ್ನುವಾಗ ತಕ್ಷಣ ಮಧ್ಯ ಪ್ರವೇಶಿಸಿದ ಧನ್ಯ ಅಪ್ಪಾ, ಸಮಯದ ಲೆಕ್ಕಾಚಾರ ಹೇಗೆ ಮಾಡೋದು? ಅಕ್ಷಾಂಶ ಮತ್ತು ರೇಖಾಂಶಗಳು ಅಂದರೆ ಏನು? ಒಂದು ದೇಶ ಎಲ್ಲಿದೆ ಎಂದು ನಮಗೆ ಹೇಗೆ ತಿಳಿಯುತ್ತದೆ? ಎಂದು ಮಕ್ಕಳು ಕೇಳಿದಾಗ, ತಂದೆ ಕುಮಾರ್ ಮಕ್ಕಳೇ, ಈ ಭೂಮಿಯ ಮೇಲೆ ಸಮಭಾಜಕ ವೃತ್ತಕ್ಕೆ ಸಮಾನಾಂತರವಾಗಿ ಮತ್ತು ಲಂಬವಾಗಿ ನಾವು ಎಳೆದುಕೊಂಡಿರುವ ಕಾಲ್ಪನಿಕ ಗೆರೆಗಳ ಬಗ್ಗೆ ವಿವರಿಸುತ್ತಾರೆ. ಮುಂದುವರಿದು ಸಮಭಾಜಕ ವೃತ್ತ ಎಂದರೆ ಭೂಮಿಯನ್ನು ಉತ್ತರ ಮತ್ತು ದಕ್ಷಿಣವಾಗಿ ಹಂಚುವ ಮಧ್ಯದ ರೇಖೆಯಾಗಿದೆ. ಇಲ್ಲಿ ಸೂರ್ಯ ನೇರವಾಗಿ ಇರುವುದರಿಂದ ವಿಪರೀತ ಶಾಖವಿರುತ್ತದೆ. ಅಲ್ಲದೇ ದಿನ ರಾತ್ರಿಯ ಸಮಯದಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಭೂಮಿ ತಿರುಗುವ ವೇಗದಿಂದಾಗಿ ಲಂಡನ್‌ನಲ್ಲಿ ಬೆಳಗಾಗುವಾಗ ನಮಗೆ ಮಧ್ಯಾಹ್ನವಾಗಿರುತ್ತದೆ. ಜಗತ್ತು ಒಂದೇ ಆದರೂ ಸಮಯದ ಹಂಚಿಕೆ ಎಷ್ಟು ವಿಭಿನ್ನ ಎಂದು ಅವರು ವಿವರಿಸುತ್ತಾರೆ. ಅಲ್ಲದೇ ಮುಂದುವರಿದು ತಂದೆ ಹೇಳುತ್ತಾರೆ, ಭೂಮಿ ನಮಗೆ ಎಲ್ಲವನ್ನೂ ಕೊಟ್ಟಿದೆ, ಆದರೆ ಮನುಷ್ಯ ಅತಿ ಆಸೆಯಿಂದ ಅದರ ಸಮತೋಲನ ತಪ್ಪಿಸುತ್ತಿದ್ದಾನೆ ಅಷ್ಟೇ ಅಲ್ಲದೆ, ಜಾಗತಿಕ ತಾಪಮಾನ ಹೆಚ್ಚುತ್ತಿದ್ದು ಕಾರ್ಬನ್ ಡೈಆಕ್ಸೈಡ್ ಹೆಚ್ಚಾಗಿ ಭೂಮಿ ಜ್ವರ ಬಂದಂತೆ ಕಾಯುತ್ತಿದೆ. ಹಿಮನದಿಗಳ ಕರಗುವಿಕೆ: ಆರ್ಕ್‌ಟಿಕ್ ಮತ್ತು ಅಂಟಾರ್ಕ್‌ಟಿಕಾದ ಮಂಜುಗಡ್ಡೆ ಕರಗಿ ಸಮುದ್ರದ ಮಟ್ಟ ಏರುತ್ತಿದೆ.

ಅಂತಿಮವಾಗಿ ಮಕ್ಕಳಿಗೆ ತಂದೆ ಕೊಡುವ ಸಂದೇಶವೇನೆಂದರೆ: ಭೂಗೋಳ ಎಂದರೆ ಕೇವಲ ಭೂತಕಾಲದ ಬಗ್ಗೆ ತಿಳಿಯುವುದಲ್ಲ, ಅದು ಭವಿಷ್ಯವನ್ನು ಉಳಿಸಿಕೊಳ್ಳುವ ದಾರಿ. ಎಂದಾಗ ಮಾನ್ಯ ಕೇಳುತ್ತಾಳೆ, ನಾವು ಇದನ್ನು ಸರಿಪಡಿಸಬಹುದೇ ಅಪ್ಪ? ತಂದೆ ಕುಮಾರ್ ಆತ್ಮವಿಶ್ವಾಸದಿಂದ ಹೇಳುತ್ತಾರೆ, ಖಂಡಿತ. ಭೂಮಿಯ ಪ್ರತಿಯೊಂದು ಭಾಗವು ಹೇಗೆ ಕೆಲಸ ಮಾಡುತ್ತದೆ ಎಂದು ನಾವು ಸರಿಯಾಗಿ ಅರ್ಥಮಾಡಿಕೊಂಡರೆ ಮಾತ್ರ, ಅದನ್ನು ಹೇಗೆ ಉಳಿಸಬೇಕೆಂದು ನಮಗೆ ತಿಳಿಯುತ್ತದೆ. ನೀವೇ ಮುಂದಿನ ತಲೆಮಾರಿನ ಭೂಗೋಳ ರಕ್ಷಕರು ಮಕ್ಕಳೇ. ಎಂದಾಗ ಮಕ್ಕಳು ಅಪ್ಪಾ, ತುಂಬಾ ವಿಷಯಗಳನ್ನು ತಿಳಿದೆವು. ಈ ಭೂಮಿಯ ರಕ್ಷಣೆ ನಾವು ಮಾಡುತ್ತೇವೆ. ಎಂದರು.

**- ಕೆ. ಎನ್. ಚಿದಾನಂದ.** (ನಾನಂಚಿ) ಹಾಸನ.



# ಗೊರೂರು ಅನಂತರಾಜು ಅವರ ವಿಮರ್ಶನ ಕೃತಿ




ಸಾಗುತಾ ಇದೆ ದೋಣಿ ನದಿಯ ನೀರನು ಸೀಳುತಾ ಕರುನಾಡಿನಲ್ಲಿ ಅದೆಷ್ಟೋ ಸಾಹಿತಿಗಳು ಪತ್ರಕ್ಷವಾಗಿ ಪರೋಕ್ಷವಾಗಿ ನವ್ಯ ಕನ್ನಡದಲ್ಲಿಯೂ ಉತ್ತುಂಗಕ್ಕೇರಿಸುವ ಸಾಹಿತ್ಯವನ್ನು ನೀಡಿ ಕನ್ನಡ ನುಡಿಯನ್ನು ವಿಶ್ವಮಟ್ಟದಲ್ಲಿ ನಿಲ್ಲುವಂತೆ ಮಾಡಿದ್ದಾರೆ. ಅದೇ ನಿಟ್ಟಿನಲ್ಲಿ ಸ್ವತಂತ್ರ ಅಮೃತ ಮಹೋತ್ಸವವನ್ನು ನೆನಪಿಸಿಕೊಳ್ಳುವಂತೆ ಸಾಗುತ ಇದೆ ದೋಣಿ ನದಿಯ ನೀರನು ಸೀಳುತಾ ಎನ್ನುವಂತಹ ಗಮನ ಸೆಳೆಯುವ ಶೀರ್ಷಿಕೆಯನ್ನೊತ್ತ ಹಾಸನದ ಖ್ಯಾತ ಸಾಹಿತಿಯೊಬ್ಬರ ವಿಮರ್ಶನ ಕೃತಿಯೊಂದು ಇದೀಗ ಬೆಳಕಿಗೆ ಬಂದಿದೆ. ಆ ಸಾಹಿತಿಯೇ ಶ್ರೀಯುತ ಗೊರೂರು ಅನಂತರಾಜುರವರು. ಇವರ ಕೈಚಳಕದಿಂದ ಹೊರಬಂದ ನಾನಾ ಮಸ್ತಕ, ಲೇಖನ ಸಂಕಲನಗಳಿಗೆ ಹೊಸ ಸೇರ್ಪಡೆ. ಹಾಸನದ ಹೆಸರಾಂತ ಸಾಹಿತಿಗಳನೇಕರು ಬರೆದ ಸುಂದರವಾದ ವಿಮರ್ಶನ ಲೇಖನಗಳನ್ನು ಜೋಡಿಸಿರುವಂತಹ ಹೊತ್ತಿಗೆ ಸಾಗುತಾ ಇದೆ ದೋಣಿ ನದಿಯ ನೀರನು ಸೀಳುತಾ

ಇದೊಂದು ಸಮೃದ್ಧ ಕನ್ನಡ ಸಾಹಿತ್ಯದ ಪ್ರಾತಿನಿಧಿಕ ಬಿಡಿ ಕೃತಿಗಳೆಂದೇ ಹೇಳಬೇಕು. ಯಾವುದೇ ಮಸ್ತಕವಿರಲಿ ಅಲ್ಲಿರಬೇಕಿರುವುದು ಜ್ಞಾನಾರ್ಜನೆಯ ಭಂಡಾರ, ಸಮಚಿತ್ತ ಕಾಯುವ ಬರಹಗಳು. ಆ ರೀತಿಯಲ್ಲಿಯೇ ಬರೆಯುವಂತಹ ಒಬ್ಬ ಸಾಹಿತಿಯ ಪ್ರಹಸನ, ಲೇಖನ, ನಾನಾ ಕೃತಿಗಳಿತ್ಯಾದಿಗಳಿಗೆ ಇತರೆ ಸಾಹಿತಿಗಳು ಬಿಡಿಯಾಗಿ ಬರೆದ ಅಭಿಪ್ರಾಯ ಕ್ರೋಢಿಕರಿಸಿ ಪ್ರಕಟಪಡಿಸಲಾಗಿರುವಂತಹದೇ ಈ ಮಸ್ತಕದ ವಿಶೇಷತೆ.



ಹಾಸನ ಜಿಲ್ಲೆಯ ಗೊರೂರು ಸ್ವಾತಂತ್ರ್ಯ ಹೋರಾಟಗಾರರು ಮತ್ತು ಸಾಹಿತಿಗಳ ತವರೂರು ಎಂದೇ ಸುಪ್ರಸಿದ್ಧ. ಅಂತಹ ಊರಿಗೆ ಈ ಶತಮಾನದ ಕಿರೀಟ ಗೊರೂರು ಅನಂತರಾಜು ಅವರು ಎಂದರೆ ತಪ್ಪಾಗದು. ಅವರ ಬಗ್ಗೆ ಅನೇಕ ಹಿರಿಯ ಸಾಹಿತಿಗಳು ಹೇಳುವ ಒಂದು ಸಾಮಾನ್ಯ ಮಾತು ಸರಳ ಸಜ್ಜನಿಕೆಯ ಪಾದರಸದಂತಹ ವ್ಯಕ್ತಿ. ಕನ್ನಡವನ್ನು ನಿತ್ಯ ಲೇಖನಿಯ ಮೂಲಕ ಸುಲಲಿತವಾಗಿ ಹರಿಯಬಿಡುವ ಸಾಹಿತಿ. ಅಂತಹ ಸಾಹಿತಿಗಳ ಕೃತಿಗೆ ನುಡಿಪೋಣಿಸುವುದು ಸಣ್ಣ ವಿಚಾರವಲ್ಲ, ಅಂತಹದೊಂದು ಅವಕಾಶ ಸಿಕ್ಕಿರುವುದು ನನ್ನ ಸೌಭಾಗ್ಯವೆಂದು ಕೊಂಡಿದ್ದೇನೆ.

ಅವರ ಈ ಕೃತಿಯಲ್ಲಿ ಅನೇಕ ಸಾಹಿತಿಗಳು ತಮ್ಮ ಸಾಹಿತ್ಯಿಕ ಚಾತುರ್ಯತೆಯನ್ನು ಹೊರಗೆಡವಿದ್ದಾರೆ ಎಂದರೂ ತಪ್ಪಾಗಲಾರದು. ಅಂತೆಯೇ ಶ್ರೀಯುತ ಎನ್. ಎಲ್.ಚನ್ನೇಗೌಡರು ಗೆಳೆಯರೆಂದೆಣಿಸದೆ ಮಾಡಿದ ವಿಮರ್ಶೆ ಹಾಗೂ ಶ್ರೀಮತಿ ಸಾವಿತ್ರಮ್ಮ ಓಂ. ಅವರು ಹಾಸನದ ಸಾಂಸ್ಕೃತಿಕ ದಿಗ್ಗಜರ ಕುರಿತು ಮತ್ತು ಗೊರೂರು ಅನಂತರಾಜುರವರ ಹಲವು ಕೃತಿಗಳ ಕುರಿತು ಸುಂದರವಾಗಿ ಲೇಖನಿ ಹರಿಸಿದ್ದಾರೆ. ಶ್ರೀಮತಿ ಮಾಲಾ ಚೆಲುವನಹಳ್ಳಿಯವರು ಶ್ರೀಯುತರಿಗೆ ಸಂದ ಪ್ರಶಸ್ತಿ ಪುರಸ್ಕಾರಗಳನ್ನೂ ಅವರ ಪ್ರತಿಭೆಯನ್ನೂ ಅನಾವರಣಗೊಳಿಸಿರುವುದು, ಶ್ರೀಮಾನ್ ಹೊನ್ನಶೆಟ್ಟಿಹಳ್ಳಿ ಗಿರಿರಾಜ್ ಅವರು ನಾಟಕ ಬರವಣಿಗೆಯಲ್ಲಿ ಗೊರೂರರ ಕೈಚಳಕ ಕುರಿತು ಬರೆದ ಲೇಖನ, ಶ್ರೀಮತಿ ವಾಣಿ ಮಹೇಶ್‌ರವರು ಬದುಕು ಸಂತೆ ಬಂಡಿ ಶೀರ್ಷಿಕೆಯಡಿ ಬರೆದ ಅನಂತರಾಜುರವರು ಗೊರೂರು ಅಣೆಕಟ್ಟೆ ಕಟ್ಟುವುದನ್ನು ನೋಡುತ್ತಾ ಬೆಳೆದವರು ಎನ್ನುವ ವಿಚಾರವನ್ನೆತ್ತಿ ವಿಮರ್ಶೆ ಮಾಡಿರುವಂತಹದೆಲ್ಲಾ ಗಮನ ಸೆಳೆಯುತ್ತದೆ.

ಶ್ರೀಯುತ ಜಿ.ಎಸ್.ಪ್ರಕಾಶ್ ಬೆಂಗಳೂರುರವರು ರಂಗಭೂಮಿ ಹಾಗೂ ಜಾನಪದ ಕಲಾವಿದರ ಸಂದರ್ಶನ ಮಾಡಿದಂತಹ ರಂಗವೈಭವವನ್ನು ಹೆಸರಿಗೆ ತಕ್ಕಂತೆ ಅರ್ಥಗರ್ಭಿತವಾಗಿ ವಿಮರ್ಶಿಸಿದ್ದಾರೆ. ಶ್ರೀ ಗಣಪತಿ ಗೋಚಲವಾದಿರವರು ಚೈನಾ ನಾಟಕ ಕುರಿತು ಬರೆದ ಕೃತಿಗೆ ಸೂಕ್ತ ರೀತಿಯಲ್ಲಿ ವಿಷಯ ಎತ್ತಿಹಿಡಿಯುವಂತ ವಿಚಾರ ಜೋಡಿಸಿ ವಿಮರ್ಶೆ ಬರೆದಿದ್ದಾರೆ. ಮಂಡ್ಯದ ಶ್ರೀ ಕಟ್ಟೇ ಎಂ.ಎಸ್.ಕೃಷ್ಣಸ್ವಾಮಿರವರು ಕಥಾಸಿರಿ ಐಸಿರಿ ಕುರಿತು ಬರೆಯುವಾಗ ಶ್ರೀಯುತರು ಕೈಯಾಡಿಸಿದ ಕ್ಷೇತ್ರಗಳನ್ನೆಲ್ಲ ಪ್ರಕಟಪಡಿಸಿದ್ದಾರೆ. ಶ್ರೀಮತಿ ಎಸ್.ಲಲಿತಾರವರು ಗೊರೂರು ಅನಂತರಾಜುರವರು ಪ್ರತಿಯೊಬ್ಬರ ಬರವಣಿಗೆಗೆ ನೀಡಿದ ಮಾನ್ಯತೆ, ಸೇವಾಪರತೆ ಕುರಿತು ತಮ್ಮ ಭಾವನೆಗಳನ್ನೂ ವ್ಯಕ್ತಪಡಿಸುತ್ತ ವಿಮರ್ಶನ ತೋರಣ ಕಟ್ಟಿದ್ದಾರೆ. ಶ್ರೀ ಎಸ್.ಎಸ್.ಪುಟ್ಟೇಗೌಡರು ಹೊಯ್ಸಳ ಇತಿಹಾಸ ಕುರಿತು ಬರೆದ ಲೇಖನ ಹೇಮೆಯೊಂದಿಗಿನ ಗೊರೂರು ಅನಂತರಾಜುರವರಿಗಿರುವ ಆತ್ಮೀಯ ನಂಟನ್ನು ತಾವೂ ಭಾವನಾತ್ಮಕವಾಗಿ ಬರೆದಿದ್ದಾರೆ. ಸ್ವತ: ಶ್ರೀಯುತ ಗೊರೂರು ಅನಂತರಾಜುರವರು ಇತರರ ಕೃತಿಗಳಿಗೆ ಬರೆದ ವಿಮರ್ಶೆ ಆಸಕ್ತಿದಾಯಕವಾಗಿದೆ. ಒಟ್ಟಿನಲ್ಲಿ ಈ ಹೊತ್ತಿಗೆಯು ಒಬ್ಬ ಸಕಲಕಲಾವಲ್ಲಭ ಸಾಹಿತಿ ನಾಗರೀಕ ಸಮಾಜವೆಂಬ ನದಿಯಲ್ಲಿ, ಬಿಳಿ ಹಾಳೆ ಎಂಬ ನೀರನ್ನು ದೋಣಿ ಎಂಬ ಲೇಖನಿಯ ಮೂಲಕ ಅಕ್ಷರಗಳಿಂದ ಸೀಳುತ ಸಾಗುತ್ತಲೇ ಹೋಗುತ್ತಿದ್ದಾರೆ ಎಂಬುದನ್ನು ವ್ಯಕ್ತಪಡಿಸಿದಂತಿದೆ. ಕೊನೆಯಲ್ಲಿ ಇವರ ಸಾಹಿತ್ಯ ಕಲಾ ಸಾಧನೆಗೆ ಇನ್ನಷ್ಟು ಭೋರ್ಗರೆದು ಹರಿಯುತ್ತಲೇ ಇರಲಿ ಎಂಬ ಶುಭಕಾಮನೆಯೊಂದಿಗೆ ಆಶಯ ನುಡಿಗಳನ್ನು ಆತ್ಮಪೂರ್ವಕ ಅಕ್ಷರಗಳಲ್ಲಿ ದಾಖಲಿಸಿದ್ದೇನೆ.

**- ಶ್ರೀಮತಿ ಮಾಳೇಟಿರ ಸೀತಮ್ಮ ವಿವೇಕ್**
**ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಶಾಸ್ತ್ರ ಅಧ್ಯಯನಗಾರರು ಮತ್ತು ಬರಹಗಾರರು.**
77/15ಎ, ಎಂ.ಜಿ.ರಸ್ತೆ, ವಿದ್ಯಾನಗರ, ಹಾಸನ-573201,
ಮೊ: 8050264334.

# ಜಿರಾಫೆಗಳ ಚರ್ಮದಲ್ಲಿ ಕಲೆಗಳು ಯಾಕಿವೆ?

ಜಿರಾಫೆಗಳ ದೇಹದಲ್ಲಿ ಎದ್ದು ಕಾಣಿಸುವುದು ಅವುಗಳ ಎತ್ತರದ ಕುತ್ತಿಗೆಗಳು. ಹಾಗೆಯೇ ಅವುಗಳ ಚರ್ಮದಲ್ಲಿರುವ ಕಲೆಗಳೂ ಎದ್ದು ಕಾಣಿಸುತ್ತವೆ. ಜಿರಾಫೆಗಳ ದೇಹದಲ್ಲಿರುವ ಈ ಚಂದದ ಕಲೆಗಳು ಕೆಲವು ಕಾರಣಗಳಿಗಾಗಿ ಬಹಳ ಮುಖ್ಯ. ಅವೇನು?

ಮೊದಲನೆಯದಾಗಿ, ಈ ಕಲೆಗಳು ವೈರಿಗಳಿಗೆ ಜಿರಾಫೆಗಳ ಸುಳಿವು ತಿಳಿಯದಂತೆ ಮಾಡಲು ಸಹಕರಿಸುತ್ತವೆ. ಜಿರಾಫೆಗಳು ಮರಗಳ ನಡುವೆ ನಿಂತಾಗ ಈ ಕಲೆಗಳಿಂದಾಗಿ ಅವು ತಮ್ಮ ಪರಿಸರದಲ್ಲಿ ಎದ್ದು ಕಾಣಿಸುವುದಿಲ್ಲ - ಮುಖ್ಯವಾಗಿ ಸೂರ್ಯನ ಬೆಳಕು ಮರಗಿಡಗಳ ಕೊಂಬೆಗಳು ಮತ್ತು ಎಲೆಗಳ ನಡುವೆ ತೂರಿಕೊಂಡು ಹೋಗುವಾಗ. ಜೊತೆಗೆ, ಜಿರಾಫೆಗಳ ಇಡೀ ಆಕಾರವನ್ನು ಒಡೆಯಲು ಈ ಕಲೆಗಳು ಕಾರಣವಾಗುತ್ತವೆ. ಇದರಿಂದಾಗಿ, ಕೆಲವೇ ಅಡಿಗಳ ದೂರದಲ್ಲಿ ಇರುವವರಿಗೂ ಇಲ್ಲೊಂದು ಜಿರಾಫೆ ಇದೆ ಎಂದು ಗುರುತಿಸುವುದು ಸುಲಭವಲ್ಲ. ಜಿರಾಫೆಗಳು ವಾಸಿಸುವ ಪ್ರದೇಶಗಳಲ್ಲಿ ಬೆಳೆಯುವ ಮರಗಿಡಗಳಿಗೆ ಅನುಸಾರವಾಗಿ ಅವುಗಳ ದೇಹದ ಕಲೆಗಳ ವಿನ್ಯಾಸ ಇರುತ್ತದೆ ಎಂದು ಮೈಕೆಲ್ ಎಂಬ ಪರಿಣತರು ತಿಳಿಸುತ್ತಾರೆ. ಉದಾಹರಣೆಗೆ, ಆಫ್ರಿಕಾದ ಸವನ್ನಾ ಹುಲ್ಲುಗಾವಲಿನಲ್ಲಿ ಸಾಮಾನ್ಯವಾಗಿ ಕಂಡು ಬರುವ ಅಕೇಶಿಯಾ ಮರಗಳ ಕೊಂಬೆರೆಂಬೆಗಳ ವಿನ್ಯಾಸಕ್ಕೆ ಅನುಸಾರವಾಗಿ ಜಿರಾಫೆಗಳ ದೇಹದ ಕಲೆಗಳು ಇರುವುದನ್ನು ಸಂಶೋಧಕರು ಹಲವು ಬಾರಿ ಗಮನಿಸಿದ್ದಾರೆ.


ಬೆಳೆಯುತ್ತಿರುವ ಜಿರಾಫೆಗಳ ಉಳಿವಿಗೆ ದೇಹದ ಕಲೆಗಳು ಬಹಳ ಮುಖ್ಯ. ಯಾಕೆಂದರೆ, ಅವು ಬದುಕಿ ಉಳಿಯಬೇಕಾದರೆ, ತಮ್ಮ ಸುಳಿವು ಸಿಂಹ, ಹುಲಿ ಇತ್ಯಾದಿ ವೈರಿಗಳಿಗೆ ಕಾಣಿಸದಂತೆ ಇರುವುದು ಬಹಳ ಅಗತ್ಯ. 2018ರ ಒಂದು ಅಧ್ಯಯನದ ಅನುಸಾರ, ಎಳೆಯ ಜಿರಾಫೆಗಳ ಉಳಿವಿನ ದರ ಮತ್ತು ದೊಡ್ಡ ಹಾಗೂ ಹೆಚ್ಚು ವೃತ್ತಾಕಾರದ ಕಲೆಗಳ ನಡುವೆ ನೇರ ಸಂಬಂಧ ಕಂಡು ಬಂತು. ಇದಕ್ಕೆ ಕಾರಣ ಜಿರಾಫೆಗಳ ಸುಳಿವು ವೈರಿ ಪ್ರಾಣಿಗಳಿಗೆ ಸಿಗದಿರುವಂತೆ ಮಾಡಲು ಕಲೆಗಳ ಈ ವಿನ್ಯಾಸ ಹೆಚ್ಚು ಸಹಕಾರಿ ಎಂಬುದು ಸಂಶೋಧಕರ ಅಭಿಪ್ರಾಯ. ಇದೇ ಅಧ್ಯಯನದಿಂದ ತಾಯಿ ಮತ್ತು ಕರು ಜಿರಾಫೆಗಳ ದೇಹದ ಕಲೆಗಳ ವಿನ್ಯಾಸ ಒಂದೇ ರೀತಿ ಇರುತ್ತದೆ ಎಂಬುದೂ ತಿಳಿದು ಬಂತು. ಇದು, ಜಿರಾಫೆಗಳ ದೇಹದ ಕಲೆಗಳ ಕೆಲವು ಗುಣಲಕ್ಷಣಗಳು ಅನುವಂಶಿಕ ಎಂಬುದನ್ನು ಸೂಚಿಸುತ್ತದೆ.

ಜಿರಾಫೆಗಳ ದೇಹದ ಕಲೆಗಳ ಇನ್ನೊಂದು ಮುಖ್ಯ ಕೆಲಸ ದೇಶದ ಉಷ್ಣತೆಯನ್ನು ನಿಯಂತ್ರಿಸುವುದು. ಭೂಮಿಯ ಅತ್ಯಂತ ಬಿಸಿ ವಾತಾವರಣದ ಪ್ರದೇಶಗಳಲ್ಲಿ ವಾಸ ಮಾಡುವ ಜಿರಾಫೆಗಳಲ್ಲಿ ಬೆವರು ಮೂಡುವುದಿಲ್ಲ. ಹಾಗಿರುವಾಗ ಅವು ತಮ್ಮ ದೇಹದ ಉಷ್ಣತೆಯನ್ನು ಹೇಗೆ ನಿಯಂತ್ರಿಸುತ್ತವೆ? ತಮ್ಮ ದೇಹದ ಕಲೆಗಳ ಮೂಲಕ! ಜಿರಾಫೆಗಳ ದೇಹದ ಪ್ರತಿಯೊಂದು ಕಲೆಯ ಒಳಭಾಗದಲ್ಲಿ ರಕ್ತನಾಳಗಳ ಒತ್ತೊತ್ತಾದ ಜಾಲ ಇರುತ್ತದೆ. ಒಂದು ಜಿರಾಫೆ ತನ್ನ ದೇಹದ ಉಷ್ಣತೆ ಕಡಿಮೆ ಮಾಡಿಕೊಳ್ಳಬೇಕೆಂದು ಬಯಸಿದಾಗ, ಅಲ್ಲಿನ ರಕ್ತನಾಳಗಳು ದೊಡ್ಡದಾಗಿ, ಅಲ್ಲಿಗೆ ಹೆಚ್ಚು ರಕ್ತ ಹರಿದು ಬರುತ್ತದೆ ಎಂದು ಮೈಕೆಲ್ ತಿಳಿಸುತ್ತಾರೆ. ಈ ರಕ್ತವು ಜಿರಾಫೆಯ ಚರ್ಮಕ್ಕೆ ಹತ್ತಿರವಾಗಿ ಹರಿಯುವಾಗ ಉಷ್ಣತೆಯನ್ನು ಬಿಡುಗಡೆ ಮಾಡುತ್ತದೆ. ಬಿಸಿ ವಾತಾವರಣದಲ್ಲಿರುವ ಜಿರಾಫೆಗಳ ಉಷ್ಣತಾ ಫೋಟೋಗ್ರಾಫುಗಳು ಇದನ್ನು ಖಚಿತ ಪಡಿಸುತ್ತವೆ ಎನ್ನುತ್ತಾರೆ ಮೈಕೆಲ್. ಯಾಕೆಂದರೆ, ಗಾಢವಾಗಿ ಕಾಣಿಸುವ ಕಲೆಗಳು ಸುತ್ತಲಿನ ಚರ್ಮಕ್ಕಿಂತ ಹೆಚ್ಚು ಬಿಸಿಯಾಗಿರುತ್ತವೆ ಎಂಬುದನ್ನು ಫೋಟೋಗ್ರಾಫುಗಳು ತೋರಿಸುತ್ತವೆ.

ಈಗ ಪರಿಶೀಲನಾ ಹಂತದಲ್ಲಿರುವ ಮಸಾಯಿ ಜಿರಾಫೆಗಳ ಕುರಿತಾದ ಇನ್ನೊಂದು ಅಧ್ಯಯನದ ವರದಿಯೂ ಈ ಸಂಗತಿಯನ್ನು ಪುಷ್ಟೀಕರಿಸುತ್ತದೆ. ಅಂದರೆ, ಜಿರಾಫೆಗಳ ದೇಹದ ಉಷ್ಣತೆಯ ನಿಯಂತ್ರಣದಲ್ಲಿ ಕಲೆಗಳು ಮುಖ್ಯ ಪಾತ್ರ ವಹಿಸುತ್ತವೆ ಎಂಬುದನ್ನು. ಆ ಅಧ್ಯಯನದ ಅನುಸಾರ, ಚಳಿಯ ವಾತಾವರಣದಲ್ಲಿ ದೇಹದ ದೊಡ್ಡ ಕಲೆಗಳಿಂದ ಜಿರಾಫೆಗಳಿಗೆ ಅನುಕೂಲ. ಯಾಕೆಂದರೆ, ಆ ಕಲೆಗಳ ಒಳ ಭಾಗದಲ್ಲಿರುವ ರಕ್ತ ನಾಳಗಳು, ಚಳಿಯಿದ್ದಾಗ ಸಂಕುಚಿತಗೊಂಡು ದೇಹದ ಉಷ್ಣತೆ ಉಳಿಸಿಕೊಳ್ಳಲು ಸಹಕಾರಿ. ಇದಕ್ಕೆ ಹೋಲಿಸಿದಾಗ, ಜಿರಾಫೆಗಳ ದೇಹದ ಸಣ್ಣ ಕಲೆಗಳಿಂದ ಬಿಸಿ ವಾತಾವರಣದಲ್ಲಿ ಹೆಚ್ಚು ಅನುಕೂಲ. ಕಾರಣ: ದೊಡ್ಡ ಮತ್ತು ಗಾಢ ಕಲೆಗಳು ಸೂರ್ಯನ ಶಾಖವನ್ನು ಹೆಚ್ಚು ಹೀರುತ್ತವೆ.

ಇವೆಲ್ಲದರ ಜೊತೆಗೆ, 2022ರಲ್ಲಿ ಪ್ರಕಟವಾಗಿರುವ ಮತ್ತೊಂದು ಅಧ್ಯಯನದ ಅನುಸಾರ, ದೇಹದ ಕಲೆಗಳು ತಮ್ಮ ಆಕಾರ, ಅಳತೆ ಮತ್ತು ಓರಿಯೆಂಟೇಷನ್ ಮೂಲಕ ಜಿರಾಫೆಗಳಿಗೆ ತಮ್ಮದೇ ಗುಂಪಿನ ಇತರ ಜಿರಾಫೆಗಳನ್ನು ಗುರುತಿಸಲಿಕ್ಕೂ ಸಹಾಯ ಮಾಡುತ್ತವೆ. ಜಿರಾಫೆಗಳ ಚರ್ಮದ ಕಲೆಗಳ ಬಗ್ಗೆ ನಮಗೆ ತಿಳಿಯದ ಎಷ್ಟೆಲ್ಲ ಸಂಗತಿಗಳಿವೆ, ಅಲ್ಲವೇ?

**- ಅಡ್ಡೂರು** ಕೃಷ್ಣ ರಾವ್



# ಕೂದಲನ್ನು ಮಲಗಿಸಬೇಡ!

ಮೂರು ವರ್ಷದ ಮೊಮ್ಮಗ ಅರ್ಜುನ ಈಗಿನ್ನೂ ಕಲಿಯುತ್ತಿರುವ ಮುದ್ದು ಮಾತುಗಳಿಂದ ನಮ್ಮನ್ನು ರಂಜಿಸುವ ತುಂಟ. ಅವನಿಗೆ ತಲೆ ಸ್ನಾನ ಎಂದರೆ ಬೇಸರ, ಅಲರ್ಜಿ! ಮೊನ್ನೆ ಭಾನುವಾರ ನನ್ನ ಸೊಸೆ ಅವನಿಗೆ ಸ್ನಾನ ಮಾಡಿಸುವಾಗ ತಲೆಯ ಮೇಲೆ ನೀರು ಸುರಿಯುತ್ತಲೇ, ಅಮ್ಮಾ, ನನ್ನ ಕೂದಲನ್ನು ಮಲಗಿಸಬೇಡ, ಎದ್ದುಕೂಡಿಸು ಎಂದು ರಚ್ಚೆಹಿಡಿದ. ಏನೆಂದು ಅರಿಯದೇ ಅವಳನ್ನು ವಿಚಾರಿಸಲು, ನೀರು ಸುರಿಯುತ್ತಲೇ ಕೂದಲು ತಲೆಗೆ ಮೆತ್ತಿ ಕೊಳ್ಳೋದನ್ನು ಮಲಗಿಸಬೇಡ ಎಂಬರ್ಥದಲ್ಲಿ ಹೇಳಿದ್ದಳು. ಇದನ್ನರಿತು ಮನೆಯವರೆಲ್ಲಾ ಅವನ ವಿಭಿನ್ನ ವಿಚಾರಣೆಗೆ ನಕ್ಕೆವು. ಹಟ ಮರೆತು ತಾನೂ - ನಗುವಿನಲ್ಲಿ ಭಾಗಿಯಾದ ಆ ತುಂಟ!

**- ಸ್ಮಿತಾ ಜೋಶಿ**



# ಸಂವಿಧಾನದಿಂದ ಎಲ್ಲಾ ವರ್ಗಗಳ ಜನರಿಗೆ ಸಮಾನ ಹಕ್ಕು

## ಡಾ.ಅಂಬೇಡ್ಕರ್ ಆದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು: ಶಾಸಕ ಸಿಮೆಂಟ್ ಮಂಜು

• ಪ್ರಜೋದಯ ವರದಿ

**ಸಕಲೇಶಪುರ:** ಡಾ.ಬಿ.ಆರ್. ಅಂಬೇಡ್ಕರ್ ಅವರು ದೇಶಕ್ಕೆ ನೀಡಿದ ಸಂವಿಧಾನವು ಎಲ್ಲ ವರ್ಗಗಳ ಜನರಿಗೆ ಸಮಾನ ಹಕ್ಕು ಹಾಗೂ ಸಾಮಾಜಿಕ ನ್ಯಾಯವನ್ನು ಒದಗಿಸಿದೆ. ಅವರ ಆದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

ಪಟ್ಟಣದ ಕೆಎಸ್‌ಆರ್‌ಟಿಸಿ ಡಿಪೋ ಆವರಣದಲ್ಲಿ ಆಯೋಜಿಸಿದ್ದ ಸಂವಿಧಾನ ಶಿಲ್ಪಿ, ಭಾರತರತ್ನ ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿ, ಶಿಕ್ಷಣ, ಸಂಘಟನೆ ಮತ್ತು ಹೋರಾಟದ ಮೂಲಕ ಸಮಾಜದಲ್ಲಿ ಬದಲಾವಣೆ ತರಬೇಕೆಂಬ ಅಂಬೇಡ್ಕರ್ ಅವರ ಸಂದೇಶ ಇಂದಿಗೂ ಪ್ರಸ್ತುತವಾಗಿದೆ ಎಂದರಲ್ಲದೆ, ಸಾಮಾಜಿಕ ನ್ಯಾಯ, ಸಮಾನತೆ ಹಾಗೂ ಸಹೋದರತ್ವದ ತತ್ವಗಳನ್ನು ಅಂಬೇಡ್ಕರ್ ದೇಶಕ್ಕೆ ನೀಡಿದ್ದು, ಇವುಗಳನ್ನು ಕಾಪಾಡುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದು ತಿಳಿಸಿದರು.

ಶಿಕ್ಷಣವೇ ಸಮಾಜ ಪರಿವರ್ತನೆಯ ಶಕ್ತಿಯಾಗಿದ್ದು, ಶಿಕ್ಷಣದ ಮೂಲಕವೇ ಅಭಿವೃದ್ಧಿ ಸಾಧಿಸಬಹುದು. ಸಮಾಜದಲ್ಲಿ ಜಾತಿ ಭೇದ ಹಾಗೂ ಅಸಮಾನತೆ ನಿವಾರಣೆಗೆ ಎಲ್ಲರೂ ''ದೇಶ ಮೊದಲು'' ಎಂಬ ಮನೋಭಾವದಿಂದ ಒಗ್ಗಟ್ಟಾಗಿ ಕೆಲಸ ಮಾಡಬೇಕು ಎಂದು ಕರೆ ನೀಡಿದರು.

ಸಮಾಜದಲ್ಲಿ ಶಿಕ್ಷಣ, ಸಮಾನತೆ ಹಾಗೂ ಸ್ವಾಭಿಮಾನ ಬೆಳೆಸುವಲ್ಲಿ ಅಂಬೇಡ್ಕರ್ ಅವರ ಹೋರಾಟ ಇಂದಿಗೂ ಯುವಜನತೆಗೆ ಪ್ರೇರಣೆಯಾಗಿದ್ದು, ಅವರ ತತ್ವ ಆದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಸಂವಿಧಾನವು ಪ್ರತಿಯೊಬ್ಬ ನಾಗರಿಕರಿಗೂ ಸಮಾನ ಹಕ್ಕುಗಳನ್ನು ನೀಡಿದ್ದು, ಅದರ ಮೌಲ್ಯಗಳನ್ನು ಕಾಪಾಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದರು.



ಚಿಕ್ಕಮಗಳೂರು ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಸತೀಶ್ ವಿ. ಅವರು ಮಾತನಾಡಿ, ಸರ್ಕಾರಿ ನೌಕರರು ಸಮಾಜದಲ್ಲಿ ಸಮಾನತೆ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸುವ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು ಎಂದು ಅವರು ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ರಾಜ್ಯ ಅಂಬೇಡ್ಕರ್ ಪ್ರಶಸ್ತಿ ವಿಜೇತ ಹಾಗೂ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಯೋಜಕ ಅಣ್ಣಯ್ಯ ಹೆತ್ತೂರು ಮತ್ತು ಸಫಾಯಿ ಕರ್ಮಚಾರಿ ಲಕ್ಷ್ಮೀ ಅವರನ್ನು ಸನ್ಮಾನಿಸಲಾಯಿತು.

ಸಕಲೇಶಪುರ ಘಟಕದ ಅಧ್ಯಕ್ಷ ಬಿ.ಸಿ. ಮಂಜಯ್ಯ ಮತ್ತು ಪದಾಧಿಕಾರಿಗಳು ಕಾರ್ಯಕ್ರಮದ ನೇತೃತ್ವ ವಹಿಸಿದ್ದರು. ಕಾರ್ಯಕ್ರಮದ ಅಂಗವಾಗಿ ಅಮ್ಮ ವಸುಂದರೆ ಕಲಾತಂಡದ ವತಿಯಿಂದ ಭೀಮಗಾಯನ ನಡೆಯಿತು. ರಾಷ್ಟ್ರಪ್ರಶಸ್ತಿ ಹಾಗೂ ಚಿನ್ನದ ಪದಕ ವಿಜೇತ ಅಂತರಾಷ್ಟ್ರೀಯ ಜಾನಪದ ಕಲಾವಿದ ಡಾ. ಅಮ್ಮ ರಾಮಚಂದ್ರ ಜೀ ಅವರ ತಂಡದ ಗಾಯನ ವಿಶೇಷ ಆಕರ್ಷಣೆಯಾಗಿತ್ತು.

ರಾಜ್ಯ ಸಮಿತಿಯ ರಾಜ್ಯಾಧ್ಯಕ್ಷ ರವೀಂದ್ರ ಎನ್., ಗೌರವಾಧ್ಯಕ್ಷ ಹಿರೇಮಗಳೂರು ರಾಮಚಂದ್ರ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಶಾಂತರಾಜು ಸಿಡಿಗಳಲೆ, ಕಾನೂನು ಸಲಹೆಗಾರ ಅನಿಲ್ ಕುಮಾರ್, ಹಾಸನ ಜಿಲ್ಲಾ ಸಂಯೋಜಕ ಯೋಗೇಶ್ ಎಂ. ಎಸ್., ಮಹಿಳಾ ಜಾಗೃತಿ ಮಾರ್ಗದರ್ಶಿ ಅಸೋಸಿಯೇಷನ್ ಅಧ್ಯಕ್ಷೆ ಕಲ್ಪನಾ ಕೀರ್ತಿ, ವಿಭಾಗದ ಅಧ್ಯಕ್ಷ ಉಮೇಶ್ ಎಂ.ಎಸ್., ಪ್ರಾದೇಶಿಕ ತರಬೇತಿ ಕೇಂದ್ರದ ಪ್ರಾಂಶುಪಾಲ ಅಬ್ದುಲ್ ಖುದ್ದೂಸ್ ಇತರರಿದ್ದರು.

# ರೈಲ್ವೆ ನಿಯಮಗಳನ್ನು ಸರಿಯಾಗಿ ಪಾಲಿಸಿ

• ಪ್ರಜೋದಯ ವರದಿ

**ಅರಸೀಕೆರೆ:** ಪ್ರಯಾಣಿಕರು ರೈಲನ್ನು ಹತ್ತುವಾಗ ಮತ್ತು ಇಳಿಯುವಾಗ ಜಾಗರೂಕತೆ ವಹಿಸಬೇಕು, ತುಸು ಎಚ್ಚರ ತಪ್ಪಿದರೂ ಸಾವು- ನೋವು ಸಂಭವಿಸುತ್ತದೆ ಎಂದು ಡಿಐಜಿ ಜೆ.ಕೆ. ರಶ್ಮಿ ಅವರು ರೈಲು ಪ್ರಯಾಣಿಕರಿಗೆ ಕಿವಿಮಾತು ಹೇಳಿದರು.



ನಗರದ ರೈಲ್ವೆ ನಿಲ್ದಾಣಕ್ಕೆ ಆಗಮಿಸಿದ ಅವರು ಮೊದಲಿಗೆ ರೈಲ್ವೆ ಪೊಲೀಸರೊಂದಿಗೆ ಸಮಾಲೋಚನೆ ನಡೆಸಿ ಸಲಹೆ ಸೂಚನೆಗಳನ್ನು ನೀಡಿದರು. ನಂತರ ರೈಲು ನಿಲ್ದಾಣದ ಆವರಣದಲ್ಲಿದ್ದ ಪ್ರಯಾಣಿಕರೊಂದಿಗೂ ಸಹ ಮಾತನಾಡಿದ ಅವರು ಸುಗಮ ಸಂಚಾರ ದೃಷ್ಟಿಯಿಂದ ರೈಲ್ವೆ ಇಲಾಖೆಯ ನಿಯಮಗಳನ್ನು ಪ್ರಯಾಣಿಕರು ಪಾಲಿಸುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ರೈಲು ಪ್ರಯಾಣಿಕರ ಸುಗಮ ಸಂಚಾರಕ್ಕೆ ಹಾಗೂ ಅವರ ಆಸ್ತಿ ರಕ್ಷಣೆಗೆ ರೈಲ್ವೆ ಪೊಲೀಸ್ ಶ್ರಮಿಸುತ್ತಿದೆ. ಆದರೂ ಕೆಲ ಸಂದರ್ಭದಲ್ಲಿ ಅಪರಾಧಿ ಕೃತ್ಯಗಳು ಹಾಗೂ ಅಪಘಾತಗಳು ಸಂಭವಿಸುತ್ತಿದ್ದು ಈ ನಿಟ್ಟಿನಲ್ಲಿ ರೈಲು ಪ್ರಯಾಣಿಕರು ಸಹ ಜಾಗೃತಿ ವಹಿಸುವ ಮೂಲಕ ರೈಲ್ವೆ ಪೊಲೀಸರಿಗೆ ಸಹಕಾರ ನೀಡುವಂತೆ ಅವರು ಮನವಿ ಮಾಡಿದರು.

ರೈಲು ನಿಲ್ದಾಣ ಹಾಗೂ ರೈಲ್ವೆ ಇಲಾಖೆ ವ್ಯಾಪ್ತಿಗೆ ಬರುವ ಪ್ರದೇಶದಲ್ಲಿ ಅಪಘಾತ ಸಂಭವಿಸಿ ಯಾರಾದರೂ ಸಂಕಷ್ಟಕ್ಕೆ ಸಿಲುಕಿದರೆ ಅಂಥವರ ನೆರವಿಗೆ ಧಾವಿಸುವ ಮನಸ್ಥಿತಿಯನ್ನು ಪ್ರತಿಯೊಬ್ಬರು ಬೆಳೆಸಿಕೊಳ್ಳುವ ಮೂಲಕ ಮಾನವೀಯತೆ ಮೆರೆಯಬೇಕು ಎಂದು ಕರೆ ನೀಡಿದರು.

ಇದೇ ಸಂದರ್ಭದಲ್ಲಿ ರೈಲ್ವೆ ಪೊಲೀಸರು ಪ್ರಯಾಣಿಕರೊಂದಿಗೆ ಸೌಜನ್ಯದಿಂದ ನಡೆದುಕೊಳ್ಳಬೇಕು ಅವರ ನೋವನ್ನು ನಲಿವಿಗೆ ಸ್ಪಂದಿಸುವ ಮೂಲಕ ರೈಲ್ವೆ ಪೊಲೀಸರು ಪ್ರಯಾಣಿಕರ ಸ್ನೇಹಿತರು ಎಂಬಂತೆ ನಡೆದುಕೊಳ್ಳುವಂತೆ ಅವರು ಕಿವಿ ಮಾತು ಹೇಳಿದರು.

ಈ ಸಂದರ್ಭದಲ್ಲಿ ಸ್ಥಳೀಯ ರೈಲ್ವೆ ಪೊಲೀಸ್ ಠಾಣೆಯ ಹಿರಿಯ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

# ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

• ಪ್ರಜೋದಯ ವರದಿ



**ಹಾಸನ:** ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಹೊಳೆನರಸೀಪುರ ನೋಡಲ್ ಕೇಂದ್ರ, ವ್ಯಾಪ್ತಿಯ 66/11 ಕೆ.ವಿ.ವಿ ಕೇಂದ್ರ, ದೊಡ್ಡಕಾಡನೂರು ಮತ್ತು ದೊಡ್ಡಹಳ್ಳಿ ತ್ರೈಮಾಸಿಕ ನಿರ್ವಹಣಾ ಕೆಲಸಗಳನ್ನು ಹಮ್ಮಿಕೊಂಡಿರುವುದರಿಂದ ಮೇ 13 ರಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ದೊಡ್ಡಕಾಡನೂರು ಶಾಖಾ ವ್ಯಾಪ್ತಿಯ ಗ್ರಾಮಗಳಾದ ದೊಡ್ಡಕಾಡನೂರು, ಸಿ.ಹಿಂಡಲಹಳ್ಳಿ, ಹಿರಿತಾಳು, ಬಾಚಹಳ್ಳಿ, ಕಬ್ಬರು, ಕಲ್ಲೊಡೆಯೋರಕಾವಲ್, ದಾಳಗೌಡನಹಳ್ಳಿ, ನಗರನಹಳ್ಳಿ, ರಂಗೇನಹಳ್ಳಿ, ಮರಹಳ್ಳಿ, ಹಾಗೂ ದೊಡ್ಡಹಳ್ಳಿ ವಿ.ವಿ.ಕೇಂದ್ರ, ವ್ಯಾಪ್ತಿಯ ಗ್ರಾಮಗಳಾದ ಸಂತೆಮೈದಾನ, ರಾಗಿಮರೂರು, ಚೌಡಸಮುದ್ರ, ಬೀಕನಹಳ್ಳಿ, ಆಲೇನಹಳ್ಳಿ, ಮುಂಜನಹಳ್ಳಿ, ಗುಳಿವಿನ ಅತ್ತಿಗುಪ್ಪೆ, ಅರಕೆರೆ, ಯಡೇಗೌಡನಹಳ್ಳಿ, ಹಾಗು ಸುತ್ತ ಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

**ಹೊಳೆನರಸೀಪುರ ನೋಡಲ್ ಕೇಂದ್ರ ವ್ಯಾಪ್ತಿ**

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಹೊಳೆನರಸೀಪುರ ನೋಡಲ್ ಕೇಂದ್ರ, ವ್ಯಾಪ್ತಿಯ 66/11ಕೆ.ವಿ.ವಿ ಕೇಂದ್ರ, ದೊಡ್ಡಕಾಡನೂರು ಮತ್ತು ದೊಡ್ಡಹಳ್ಳಿ ತ್ರೈಮಾಸಿಕ ನಿರ್ವಹಣಾ ಕೆಲಸಗಳನ್ನು ಹಮ್ಮಿಕೊಂಡಿರುವುದರಿಂದ ಮೇ 13 ರಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ದೊಡ್ಡಕಾಡನೂರು ಶಾಖಾ ವ್ಯಾಪ್ತಿಯ ಗ್ರಾಮಗಳಾದ ದೊಡ್ಡಕಾಡನೂರು, ಸಿ.ಹಿಂಡಲಹಳ್ಳಿ, ಹಿರಿತಾಳು, ಬಾಚಹಳ್ಳಿ, ಕಬ್ಬರು, ಕಲ್ಲೊಡೆಯೋರಕಾವಲ್, ದಾಳಗೌಡನಹಳ್ಳಿ, ನಗರನಹಳ್ಳಿ, ರಂಗೇನಹಳ್ಳಿ, ಮರಹಳ್ಳಿ, ಹಾಗೂ ದೊಡ್ಡಹಳ್ಳಿ ವಿ.ವಿ.ಕೇಂದ್ರ, ವ್ಯಾಪ್ತಿಯ ಗ್ರಾಮಗಳಾದ ಸಂತೆಮೈದಾನ, ರಾಗಿಮರೂರು, ಚೌಡಸಮುದ್ರ, ಬೀಕನಹಳ್ಳಿ, ಆಲೇನಹಳ್ಳಿ, ಮುಂಜನಹಳ್ಳಿ, ಗುಳಿವಿನ ಅತ್ತಿಗುಪ್ಪೆ, ಅರಕೆರೆ, ಯಡೇಗೌಡನಹಳ್ಳಿ, ಹಾಗು ಸುತ್ತ ಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

**ಹಾನುಬಾಳು, ಅರೇಹಳ್ಳಿ ವಿವಿ ಕೇಂದ್ರದಲ್ಲಿ:**

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, 66/11ಕೆ.ವಿ ಹಾನುಬಾಳು ಮತ್ತು ಅರೇಹಳ್ಳಿ ವಿ.ವಿ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣಾ ಕೆಲಸಗಳನ್ನು ಹಮ್ಮಿಕೊಂಡಿರುವುದರಿಂದ ಮೇ 13 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ರವರೆಗೆ ಹಾನುಬಾಳು ಮತ್ತು ಅರೇಹಳ್ಳಿ ವಿ.ವಿ ಕೇಂದ್ರಗಳಿಂದ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

# ಇಂಧನ ಮಾರಾಟಕ್ಕೆ ರಾಜ್ಯ ಸರ್ಕಾರದಿಂದ ಹೊಸ ಮಾರ್ಗಸೂಚಿ

## ಸಾರ್ವಜನಿಕರು ಹಾಗೂ ಪೆಟ್ರೋಲ್ ಬಂಕ್ ಮಾಲೀಕರಲ್ಲಿ ತೀವ್ರ ಚರ್ಚೆ | ದುರುಪಯೋಗ ತಡೆಯುವ ಉದ್ದೇಶ

• ಪ್ರಜೋದಯ ವರದಿ

**ಬೆಂಗಳೂರು:** ಪೆಟ್ರೋಲ್ ಹಾಗೂ ಡೀಸೆಲ್ ಲಭ್ಯತೆ ಕುರಿತು ಆತಂಕಗಳು ವ್ಯಕ್ತವಾಗುತ್ತಿರುವ ಬೆನ್ನಲ್ಲೇ ರಾಜ್ಯ ಸರ್ಕಾರ ಇಂಧನ ಮಾರಾಟಕ್ಕೆ ಸಂಬಂಧಿಸಿದಂತೆ ಕಟ್ಟುನಿಟ್ಟಿನ ಹೊಸ ಮಾರ್ಗಸೂಚಿಗಳನ್ನು ಪ್ರಕಟಿಸಿದೆ. ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಹೊರಡಿಸಿರುವ ಆದೇಶ ಇದೀಗ ಸಾರ್ವಜನಿಕರು ಹಾಗೂ ಪೆಟ್ರೋಲ್ ಬಂಕ್ ಮಾಲೀಕರಲ್ಲಿ ತೀವ್ರ ಚರ್ಚೆಗೆ ಕಾರಣವಾಗಿದೆ.

ಪೆಟ್ರೋಲಿಯಂ ನಿಯಮ-2022 ಅನ್ನು ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಿರುವ ಸರ್ಕಾರ, ರಾಜ್ಯದ ಎಲ್ಲಾ ಚಿಲ್ಲರೆ ಇಂಧನ ಮಾರಾಟ ಕೇಂದ್ರಗಳಿಗೆ ಸ್ಪಷ್ಟ ನಿರ್ದೇಶನ ನೀಡಿದೆ. ವಿಶೇಷವಾಗಿ ಪೆಟ್ರೋಲ್ ಮತ್ತು ಡೀಸೆಲ್ ಅನ್ನು ನಿಗದಿತ ಪ್ರಮಾಣ ಹಾಗೂ ನಿಯಮಗಳಂತೆ ಮಾತ್ರ ಮಾರಾಟ ಮಾಡಬೇಕು ಎಂದು ಕಟ್ಟಪ್ಪಣೆ ವಿಧಿಸಲಾಗಿದೆ.

ಜಾಗತಿಕ ಸನ್ನಿವೇಶ, ಇಂಧನ ಸರಬರಾಜಿನ ಅನಿಶ್ಚಿತತೆ ಹಾಗೂ ಕೃತಕ ಅಭಾವ ಸೃಷ್ಟಿಸುವ ಸಾಧ್ಯತೆಗಳ ಹಿನ್ನೆಲೆ ಸರ್ಕಾರ ಮುನ್ನೆಚ್ಚರಿಕಾ ಕ್ರಮವಾಗಿ ಈ ಮಾರ್ಗಸೂಚಿಗಳನ್ನು ಜಾರಿಗೆ ತಂದಿದೆ ಎನ್ನಲಾಗಿದೆ. ಸಾರ್ವಜನಿಕರಿಗೆ ಇಂಧನ ಕೊರತೆ ಉಂಟಾಗದಂತೆ ಹಾಗೂ ಅನಧಿಕೃತ ದಾಸ್ತಾನು, ದುರುಪಯೋಗ ತಡೆಯುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ.

ಹೊಸ ನಿಯಮಗಳ ಪ್ರಕಾರ ವಾಹನಗಳ ಕಂಟೇನರ್‌ಗಳಿಗೆ ಗರಿಷ್ಠ 200 ಲೀಟರ್ ಮಿತಿ ನಿಗದಿ ಮಾಡಲಾಗಿದೆ. ಪೆಟ್ರೋಲ್ ಅಥವಾ ಡೀಸೆಲ್ ಅನ್ನು ಬಾಟಲಿ, ಕ್ಯಾನ್ ಸೇರಿದಂತೆ ಅನಧಿಕೃತ ಪಾತ್ರೆಗಳಲ್ಲಿ ನೀಡಬಾರದು ಎಂದು ಸೂಚಿಸಲಾಗಿದೆ. ಇಂಧನವನ್ನು ವಾಹನಗಳ ಟ್ಯಾಂಕ್‌ಗಳಿಗೆ ಮಾತ್ರ ತುಂಬಿಸಬೇಕು ಎಂದು ಸ್ಪಷ್ಟಪಡಿಸಲಾಗಿದೆ.




ಇನ್ನು ಚಿಲ್ಲರೆ ಮಾರಾಟ ಕೇಂದ್ರಗಳಲ್ಲಿ ಸಗಟು ವ್ಯಾಪಾರ ನಡೆಸುವಂತಿಲ್ಲ. ಸಗಟು ಮಾರಾಟವನ್ನು ಸರ್ಕಾರ ನಿಗದಿಪಡಿಸಿರುವ ಸ್ಥಳಗಳಲ್ಲಿ ಮಾತ್ರ ಮಾಡಲು ಅವಕಾಶ ನೀಡಲಾಗಿದೆ. ನಿಯಮ ಉಲ್ಲಂಘಿಸಿದರೆ ಕಠಿಣ ಕಾನೂನು ಕ್ರಮ ಕೈಗೊಳ್ಳುವುದಾಗಿ ಸರ್ಕಾರ ಎಚ್ಚರಿಕೆ ನೀಡಿದೆ.

ಕೃಷಿ ಚಟುವಟಿಕೆಗಳಿಗೆ ಯಾವುದೇ ತೊಂದರೆ ಆಗದಂತೆ ರೈತರಿಗೆ ಅಗತ್ಯ ಪ್ರಮಾಣದಲ್ಲಿ ಡೀಸೆಲ್ ಪೂರೈಕೆ ಖಚಿತಪಡಿಸಬೇಕು ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ. ಜೊತೆಗೆ ಅಧಿಕಾರಿಗಳು ಕಾಲಕಾಲಕ್ಕೆ ಬಂಕ್‌ಗಳಲ್ಲಿ ಪರಿಶೀಲನೆ ನಡೆಸಬೇಕು ಹಾಗೂ ಜಿಲ್ಲಾಧಿಕಾರಿಗಳು ಸಂಪೂರ್ಣ ಪ್ರಕ್ರಿಯೆಯನ್ನು ಮಾನಿಟರ್ ಮಾಡಬೇಕು ಎಂದು ಸೂಚಿಸಲಾಗಿದೆ.

ಸರ್ಕಾರದ ಈ ಕ್ರಮ ಇಂಧನ ಕೊರತೆ ತಡೆಗಟ್ಟಲು ಮುನ್ನೆಚ್ಚರಿಕಾ ಕ್ರಮವೇ ಅಥವಾ ಪೂರೈಕೆ ಕಷ್ಟಕರವಾಗಬಹುದು ಎಂಬುದರ ಮುನ್ಸೂಚನೆಯೇ ಎಂದು ತಿಳಿದು ಬಂದಿಲ್ಲ.

# ಮೇ 18 ರಿಂದ ಕುರಿ ಸಾಕಾಣಿಕೆ ತರಬೇತಿ

**ಹಾಸನ:** ಪಶು ಪಾಲನಾ ಇಲಾಖೆಯ ವತಿಯಿಂದ ರೈತರಿಗೆ, ರೈತ ಮಹಿಳೆಯರಿಗೆ ಹಾಗೂ ಆಸಕ್ತಿಯುಳ್ಳವರಿಗೆ ಪಶು ಪಾಲನಾ ಇಲಾಖೆಯ ಪಶು ವೈದ್ಯಕೀಯ ತರಬೇತಿ ಕೇಂದ್ರದಿಂದ ಆಧುನಿಕ ಕುರಿ ಮತ್ತು ಮೇಕೆ ಸಾಕಣಿಕೆ ತರಬೇತಿಯನ್ನು ಮೇ 18 ರಿಂದ 19 ರವರೆಗೆ ಹಾಗೂ ಆಧುನಿಕ ಕೋಳಿ ಸಾಕಾಣಿಕೆ ತರಬೇತಿಯನ್ನು ಮೇ 20 ರಿಂದ 21 ರ ವರೆಗೆ ಏರ್ಪಡಿಸಲಾಗಿದೆ.

ಆಸಕ್ತಿಯುಳ್ಳವರು ಪ್ರಾರಂಭದ ದಿನ ಬೆಳಿಗ್ಗೆ 10.30 ಗಂಟೆಯೊಳಗೆ ಪಶುಪಾಲನಾ ಇಲಾಖೆಯ ಪಶು ವೈದ್ಯಕೀಯ ತರಬೇತಿ ಕೇಂದ್ರದ ಉಪ ನಿರ್ದೇಶಕರ ಕಚೇರಿಗೆ ಹಾಜರಾಗಬೇಕು.

ಮಾಹಿತಿಗಾಗಿ ದೂ. ಸಂಖ್ಯೆ: 08172-235226, ಸಂಪರ್ಕಿಸಬಹುದಾಗಿದೆ ಎಂದು ಪಶು ಪಾಲನಾ ಮತ್ತು ಪಶು ವೈದ್ಯಕೀಯ ತರಬೇತಿ ಕೇಂದ್ರದ ಉಪ ನಿರ್ದೇಶಕರು ತಿಳಿಸಿದ್ದಾರೆ.

# ಇಂದಿರಾಗಾಂಧಿ ಹೇಳಿದರೆ ಶಿಸ್ತು, ಮೋದಿ ಹೇಳಿದರೆ ಅಪರಾಧವೇ?

## ಚಿನ್ನದ ಮೇಲಿನ ವ್ಯಾಮೋಹ ಬಿಡಿ ಎಂದು ಚಿದಂಬರಂ ಗೋಗರೆದಿದ್ದು ನೆನಪಿಲ್ಲವೇ?

• ಪ್ರಜೋದಯ ವರದಿ

**ಬೆಂಗಳೂರು:** ದೇಶದ ಹಿತದೃಷ್ಟಿಯಿಂದ ಚಿನ್ನ ಮತ್ತು ಇಂಧನ ಬಳಕೆಯನ್ನು ಕಡಿಮೆ ಮಾಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ನೀಡಿರುವ ಕರೆಗೆ ಕಾಂಗ್ರೆಸ್ ನಾಯಕರು ಆಕ್ಷೇಪ ವ್ಯಕ್ತಪಡಿಸಿದ್ದಕ್ಕೆ ಬಿಜೆಪಿ ನಾಯಕ ಆರ್. ಅಶೋಕ್ ತಿರುಗೇಟು ನೀಡಿದ್ದಾರೆ.

ಈ ಸಂಬಂಧ ತಮ್ಮ ಎಕ್ಸ್ ಖಾತೆಯಲ್ಲಿ ಬರೆದುಕೊಂಡಿರುವ ಆರ್. ಅಶೋಕ್. ಕಾಂಗ್ರೆಸ್ಸಿಗರ ಆರ್ಥಿಕ ಅಜ್ಞಾನ ಮತ್ತು ಅಂಧ ವಿರೋಧಕ್ಕೆ ಇದಕ್ಕಿಂತ ಸಾಕ್ಷಿ ಬೇಕೆ? ಇತಿಹಾಸದ ಅರಿವೂ ಇಲ್ಲದ, ಆರ್ಥಿಕ ನಿರ್ವಹಣೆಯ ಗಂಧ-ಗಾಳಿಯೂ ಗೊತ್ತಿಲ್ಲದ ಇಂದಿನ ಕಾಂಗ್ರೆಸ್ ನಾಯಕರಿಗೆ ಪ್ರಧಾನಿ ನರೇಂದ್ರ ಮೋದಿ ಅವರ



ಪ್ರತಿಯೊಂದು ನಡೆಯನ್ನೂ ವಿರೋಧಿಸುವುದೇ ಒಂದು ನಿತ್ಯ ಕಾಯಕವಾಗಿಬಿಟ್ಟಿದೆ. ರಾಷ್ಟ್ರದ ಹಿತದೃಷ್ಟಿಯಿಂದ ಮೋದಿ ಅವರು ನೀಡುವ ದೂರದೃಷ್ಟಿಯ ಆರ್ಥಿಕ ಸಲಹೆಗಳನ್ನು ಲೇವಡಿ ಮಾಡುವ ಈ ಕಾಂಗ್ರೆಸ್ಸಿಗರು ಒಮ್ಮೆ ತಮ್ಮದೇ ಪಕ್ಷದ ಇತಿಹಾಸವನ್ನು ತಿರುವಿ ಹಾಕಲಿ ಎಂದಿದ್ದಾರೆ.

1967 ರಲ್ಲಿ ಅಂದಿನ ಪ್ರಧಾನಿ ಇಂದಿರಾ ಗಾಂಧಿಯವರು ದೇಶದ ಆರ್ಥಿಕ ಶಿಸ್ತಿಗಾಗಿ 'ಚಿನ್ನ ಕೊಳ್ಳಬೇಡಿ' ಎಂದು ಜನರಲ್ಲಿ ಮನವಿ ಮಾಡಿದ್ದರು. 2013 ರಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರವಿದ್ದಾಗ ಹಣಕಾಸು ಸಚಿವ ಪಿ. ಚಿದಂಬರಂ ಅವರು ಚಾಲ್ತಿ ಖಾತೆ ಕೊರತೆ ಸರಿದೂಗಿಸಲು 'ಚಿನ್ನದ ಮೇಲಿನ ವ್ಯಾಮೋಹ ಬಿಡಿ' ಎಂದು ಪದೇ ಪದೇ ಗೋಗರೆದಿದ್ದರು.

'ದೊರೆ ಮಾಡಿದರೆ ದಂಡವಿಲ್ಲ' ಎಂಬಂತೆ, ಇಂದಿರಾ ಗಾಂಧಿ ಅಥವಾ ಸೋನಿಯಾ ಗಾಂಧಿ ಅವರ ಕಾಲದಲ್ಲಿ ಅಂದಿನ ಕಾಂಗ್ರೆಸ್ ಸರ್ಕಾರಗಳು ಕರೆ ನೀಡಿದರೆ ಅದು ಆರ್ಥಿಕ ನೀತಿ. ಆದರೆ ರಾಷ್ಟ್ರದ ಹಿತದೃಷ್ಟಿಯಿಂದ ಮೋದಿ ಅವರು ಕರೆ ನೀಡಿದರೆ ಅದು ಇವರಿಗೆ ತಪ್ಪಾಗಿ ಕಾಣುತ್ತಿರುವುದು ಕಾಂಗ್ರೆಸ್ ನಾಯಕರ ಎಡಬಿಡಂಗಿತನಕ್ಕೆ ಹಿಡಿದ ಕನ್ನಡಿ ಎಂದು ಅಶೋಕ್ ಅವರು ತೀವ್ರವಾಗಿ ಲೇವಡಿ ಮಾಡಿದ್ದಾರೆ.


# ರಾಜ್ಯದ ಹಲವೆಡೆ ಭಾರೀ ಮಳೆಯ ಮುನ್ಸೂಚನೆ

• ಪ್ರಜೋದಯ ವರದಿ

**ಬೆಂಗಳೂರು:** ಬೆಂಗಳೂರು ಸೇರಿದಂತೆ ರಾಜ್ಯದ ಹಲವೆಡೆ ಮಳೆಯಾಗುವ ಮುನ್ಸೂಚನೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದ್ದು, ಕೊಡಗು, ಶಿವಮೊಗ್ಗ ಸೇರಿದಂತೆ ದಕ್ಷಿಣ ಒಳನಾಡಿನ ಹಲವೆಡೆ ಭಾರೀ ಮಳೆಯಾಗಲಿದೆ. ಬೆಂಗಳೂರಿನಲ್ಲಿ ಮುಂದಿನ ನಾಲ್ಕು ದಿನಗಳ ಕಾಲ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದ್ದು, ಎಚ್ಚರಿಕೆ ವಹಿಸುವಂತೆ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ತಿಳಿಸಿದೆ.

ಎಲ್ಲೆಲ್ಲಿ ಮಳೆ?

ಕರಾವಳಿಯ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ 30-40 ಕಿ.ಮೀ ವೇಗದ ಗಾಳಿಯೊಂದಿಗೆ ಗುಡುಗು ಸಹಿತ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ



ಶುಷ್ಕ ವಾತಾವರಣ ಇರಲಿದೆ. ಮಂಗಳೂರು ಮತ್ತು ಉಡುಪಿ ಭಾಗದಲ್ಲಿ ಗರಿಷ್ಠ ತಾಪಮಾನ 33 ದಾಟುವ ಸಾಧ್ಯತೆ ಇದೆ.

ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಬಿಸಿಲಿನ ಬೇಗೆ ಮುಂದುವರಿಯಲಿದ್ದರೂ, ಕೆಲವು ಕಡೆಗಳಲ್ಲಿ ಗಂಟೆಗೆ 30-40 ಕಿ.ಮೀ ವೇಗ ಗುಡುಗು ಮತ್ತು ಬಿರುಗಾಳಿ ಸಹಿತ ಮಳೆಯಾಗುವ ಸಾಧ್ಯತೆ ಇದೆ. ಬೆಳಗಾವಿ, ಧಾರವಾಡ, ಗದಗ, ಹಾವೇರಿ, ಕೊಪ್ಪಳ ಜಿಲ್ಲೆಗಳಲ್ಲಿ ಗಂಟೆಗೆ 40-50 ಕಿ.ಮೀ ಬಿರುಗಾಳಿಯೊಂದಿಗೆ ಗುಡುಗು ಸಹಿತ ಮಳೆಯಾಗಲಿದೆ ಎಂದು ಇಲಾಖೆ ತಿಳಿಸಿದೆ.

ಬೆಂಗಳೂರು ಸೇರಿದಂತೆ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಮೋಡ ಕವಿದ ವಾತಾವರಣವಿರಲಿದ್ದು, ಸಂಜೆ ಅಥವಾ ರಾತ್ರಿಯ ವೇಳೆ ಸಾಧಾರಣ ಮಳೆಯಾಗುವ ಮುನ್ಸೂಚನೆ ಇದೆ. ಬೆಂಗಳೂರಿನಲ್ಲಿ ಗರಿಷ್ಠ ತಾಪಮಾನ 34.8 ಮತ್ತು ಕನಿಷ್ಠ ತಾಪಮಾನ 23.8 ಆಸುಪಾಸಿನಲ್ಲಿರಲಿದೆ. ಶಿವಮೊಗ್ಗ, ದಾವಣಗೆರೆ, ಚಿಕ್ಕಮಗಳೂರು, ಹಾಸನ, ಕೊಡಗು, ಮೈಸೂರು ಜಿಲ್ಲೆಗಳಲ್ಲಿ ಗುಡುಗು ಸಹಿತ ಮಳೆಯಾಗಲಿದೆ.

ಮೇ 15 ಮತ್ತು 16 ರಂದು ದಕ್ಷಿಣ ಒಳನಾಡಿನ ಕೆಲ ಪ್ರದೇಶಗಳಲ್ಲಿ ಭಾರೀ ಮಳೆಯಾಗಲಿದೆ. 64.5 ಮಿ.ಮೀ ಇಂದ 115.5 ಮಿ.ಮೀ ಮಳೆಯಾಗಲಿದ್ದು, ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಮುನ್ಸೂಚನೆ ನೀಡಿದೆ.

# ರಾಗಿ ಖರೀದಿಗೆ ಮೇ 15ರ ವರೆಗೆ ಅವಧಿ ಕಡಿತ

ಹಾಸನ: ಕನಿಷ್ಟ ಬೆಂಬಲಬೆಲೆ ಯೋಜನೆಯಡಿಯಲ್ಲಿ 2025-26ನೇ ಸಾಲಿನ ರಾಗಿ ಖರೀದಿ ಪ್ರಕ್ರಿಯೆಯನ್ನು ಕೇಂದ್ರ ಸರ್ಕಾರವು ಮೇ.30 ರವರೆಗೆ ರೈತರಿಂದ ಎಂ.ಎಸ್.ಪಿ ರಾಗಿಯನ್ನು ಖರೀದಿ ಮಾಡಲು ಅವಧಿಯನ್ನು ನೀಡಲಾಗಿದ್ದು, ಮೇ ಮತ್ತು ಜೂನ್-2026ರ ಮಾಹೆಗೆ ಪ್ರತಿ ಮಾಹೆಗೆ ಎನ್.ಎಫ್.ಎಸ್.ಎ ಅಡಿಯಲ್ಲಿ 3+3 ಒಟ್ಟು 6 ಕೆ.ಜಿ ರಾಗಿಯನ್ನು ವಿತರಣೆ ಮಾಡಲು ಹಂಚಿಕೆ ನೀಡಲಾಗಿರುತ್ತದೆ. ರೈತರಿಂದ ಖರೀದಿ ಕಾರ್ಯ ಮಂದಗತಿಯಲ್ಲಿ ಸಾಗುತ್ತಿರುವುದ್ದರಿಂದ ಮೇ.30 ಮೊಟಕುಗೊಳಿಸುವ ರಾಗಿ ಖರೀದಿಯ ಅಂತಿಮ ದಿನಾಂಕವನ್ನು ಮೇ 15 ಕ್ಕೆ ನಿಗದಿಪಡಿಸಲಾಗಿದೆ, ಆದ್ದರಿಂದ ಜಿಲ್ಲೆಯ ರೈತರು ರಾಗಿ ದಾಸ್ತಾನನ್ನು ಮೇ 15 ರೊಳಗೆ ಖರೀದಿ ಕೇಂದ್ರಗಳಿಗೆ ನೀಡುವಂತೆ ಜಿಲ್ಲಾಧಿಕಾರಿ ತಿಳಿಸಿದ್ದಾರೆ.

# ಹಿಮಂತ್ ಬಿಸ್ವಾ ಶರ್ಮಾ 2ನೇ ಅವಧಿಗೆ ಅಸ್ಸಾಂ ಸಿಎಂ

• ಪ್ರಜೋದಯ ವರದಿ

**ಗುವಾಹಟಿ:** ಹಿಮಂತ ಬಿಸ್ವಾ ಶರ್ಮಾ ಅವರು ಸತತ 2ನೇ ಅವಧಿಗೆ ಅಸ್ಸಾಂನ ಮುಖ್ಯಮಂತ್ರಿಯಾಗಿ ಮಂಗಳವಾರ ಪ್ರಮಾಣ ವಚನ ಸ್ವೀಕರಿಸಿದರು.

ಖಾನಪಾರದ ಪಶು ವೈದ್ಯಕೀಯ ಕಾಲೇಜು ಮೈದಾನದಲ್ಲಿ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಕೇಂದ್ರ ಸಚಿವ ನಿತಿನ್ ಗಡ್ಕರಿ, ಹೊಸದಾಗಿ ನೇಮಕಗೊಂಡ ಬಂಗಾಳ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಮತ್ತು ಭಾರತಕ್ಕೆ ಅಮೆರಿಕದ ರಾಯಭಾರಿ ಸೆರ್ಗಿಯೊ ಗೋರ್ ಸೇರಿದಂತೆ ಕೆಲವು ಪ್ರಮುಖರ ಸಮ್ಮುಖದಲ್ಲಿ ಅವರು ಪ್ರಮಾಣ ಸ್ವೀಕರಿಸಿದರು.



ಬಿಸ್ವಾ ಶರ್ಮಾ ಅವರಿಗೆ ಅಸ್ಸಾಂ ರಾಜ್ಯಪಾಲ ಲಕ್ಷ್ಮಣ್ ಪ್ರಸಾದ್ ಆಚಾರ್ಯ ಅವರು ಪ್ರಮಾಣ ವಚನ ಬೋಧಿಸಿದರು. 57 ವರ್ಷದ ಅವರು ಸತತ ಎರಡನೇ ಅವಧಿಗೆ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ರಾಜ್ಯದ ಮೊದಲ ಕಾಂಗ್ರೆಸ್ಸೇತರ ನಾಯಕರಾಗಿದ್ದಾರೆ.

ಕಳೆದ ಮೇ 4 ರಂದು ನಡೆದ ವಿಧಾನಸಭಾ ಚುನಾವಣಾ ಫಲಿತಾಂಶ ಪ್ರಕಟವಾದಾಗ ಅಸ್ಸಾಂನಲ್ಲಿ ಬಿಜೆಪಿ ನಿರ್ಣಾಯಕ ಜನಾದೇಶವನ್ನು ಪಡೆಯಿತು. 126 ಸದಸ್ಯ ಬಲದ ವಿಧಾನ ಸಭೆಯಲ್ಲಿ ಪಕ್ಷವು 82 ಸ್ಥಾನಗಳನ್ನು ಗೆದ್ದಿತು ಮತ್ತು ಅದರ ಪಾಲುದಾರರಾದ ಎಜಿಪಿ ಮತ್ತು ಬಿಪಿಎಫ್ ತಲಾ 10 ಸ್ಥಾನಗಳನ್ನು ಗೆದ್ದವು, ರಾಜ್ಯದಲ್ಲಿ ಒಟ್ಟು ಎನ್‌ಡಿಎ ಸಂಖ್ಯೆಯನ್ನು 102 ಕ್ಕೆ ಏರಿಸಿದೆ.

ಜಲುಕ್ಬರಿ ಕ್ಷೇತ್ರದಿಂದ ಅಭ್ಯರ್ಥಿಯಾಗಿದ್ದ ಹಿಮಂತ ಬಿಸ್ವಾ ಶರ್ಮಾ 89,000 ಕ್ಕೂ ಹೆಚ್ಚು ಮತಗಳಿಂದ ಗೆದ್ದರು. ಶರ್ಮಾ ಮಾತ್ರವಲ್ಲ, ಬಿಜೆಪಿ ನಾಯಕರಾದ ರಾಮೇಶ್ವರ್ ತೇಲಿ, ಅತುಲ್ ಬೋರಾ, ಚರಣ್ ಬೊರೊ ಮತ್ತು ಅಜಂತಾ ನಿಯೋಗ್ ಕೂಡ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು.

# ದಾದಿಯರು ತಮ್ಮ ಸೇವೆಯಲ್ಲೇ ಸಾರ್ಥಕತೆ ಕಂಡವರು

## ರಾಜ್ಯಮಟ್ಟದ ತರಬೇತಿ ಕಾರ್ಯಕ್ರಮದಲ್ಲಿ ಶಾಸಕ ಸ್ವರೂಪ್ ಪ್ರಕಾಶ್

• ಪ್ರಜೋದಯ ವರದಿ

**ಹಾಸನ:** ಪ್ರತಿದಿನ ತಮ್ಮ ಸೇವೆಯಲ್ಲಿ ಸಾರ್ಥಕತೆಯನ್ನು ಕಾಣುತ್ತಿರುವ ದಾದಿಯರ (ಶುಶ್ರೂಷಕರು) ಸೇವೆ ಅಪಾರ, ಇವರ ಸೇವೆಗೆ ಬೆಲೆ ಕಟ್ಟಲು ಸಾಧ್ಯವಿಲ್ಲ ಎಂದು ಶಾಸಕರು ಹಾಗೂ ಸಂಜೀವಿನಿ ಸಹಕಾರ ಆಸ್ಪತ್ರೆಯ ಅಧ್ಯಕ್ಷ ಹೆಚ್.ಪಿ ಸ್ವರೂಪ್ ಪ್ರಕಾಶ್ ಶ್ಲಾಘಿಸಿದರು.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಹಾಸನ ಜಿಲ್ಲಾ ಸಹಕಾರ ಒಕ್ಕೂಟ, ಸಂಜೀವಿನಿ ಸಹಕಾರಿ ಆಸ್ಪತ್ರೆ ಹಾಗೂ ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ ನಿ., ಹಾಸನ ಮತ್ತು ಸಹಕಾರ ಇಲಾಖೆ ಸಂಯುಕ್ತಾಶ್ರಯದಲ್ಲಿ ಸಹಕಾರ ಆಸ್ಪತ್ರೆಯ ಸಿಬ್ಬಂದಿಗಳಿಗೆ ಇಂದು ಏರ್ಪಡಿಸಿದ್ದ ರಾಜ್ಯ ಮಟ್ಟದ ತರಭೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.



ಸಹಕಾರ ಕ್ಷೇತ್ರದಲ್ಲಿ ಸಹಕಾರ ತತ್ವಗಳಿಗೆ ಅನುಗುಣವಾಗಿ ಇಡೀ ರಾಜ್ಯದಲ್ಲಿರುವ ಎರಡು ಸಹಕಾರ ಆಸ್ಪತ್ರೆಗಳಲ್ಲಿ ನಮ್ಮ ಸಂಜೀವಿನಿ ಸಹಕಾರಿ ಆಸ್ಪತ್ರೆಯು ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವುದು ಶ್ಲಾಘನೀಯ. ಇದಕ್ಕೆ ಕಾರಣ ಕರ್ತರು ಇಲ್ಲಿನ ಸಿಬ್ಬಂದಿಗಳು, ವೈದ್ಯರು, ಆಡಳಿತ ಮಂಡಳಿಯಾಗಿದೆ. ಇಂದು ಅಂತರಾಷ್ಟ್ರೀಯ ದಾದಿಯರ ದಿನವಾಗಿದ್ದು, ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲ ಶುಶ್ರೂಷಕರು, ವೈದ್ಯರಿಗೆ ಅಂತರಾಷ್ಟ್ರೀಯ ದಾದಿಯರ ದಿನದ ಶುಭಾಷಯಗಳನ್ನು ಕೋರಿದರು.

ಜಿಲ್ಲಾ ಸಹಕಾರ ಒಕ್ಕೂಟ ಅಧ್ಯಕ್ಷ ಎಸ್. ಎನ್. ಪ್ರಕಾಶ್ ಮಾತನಾಡಿ, ಹಾಸನ ಜಿಲ್ಲೆಯಲ್ಲಿ ಸುಮಾರು 30 ರಿಂದ 35 ರೀತಿಯಾದ 2000 ಸಹಕಾರ ಸಂಘಗಳಿದ್ದು, ಅದರಲ್ಲಿ ನಮ್ಮ ಜಿಲ್ಲೆಯ ಸಂಜೀವಿನಿ ಸಹಕಾರ ಆಸ್ಪತ್ರೆಯು ರಾಜ್ಯದಲ್ಲಿಯೇ ಹೆಸರುವಾಸಿಯಾಗಿದೆ. ಸಹಕಾರ ತತ್ವದಡಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಈ ಆಸ್ಪತ್ರೆಯು ಬಡವರಿಗೆ ಕೂಲಿ ಕಾರ್ಮಿಕರಿಗೆ, ಸಹಕಾರಿಗಳಿಗೆ ಉತ್ತಮವಾದ ಅತಿ ಕಡಿಮೆ ದರದಲ್ಲಿ ಸೇವೆಯನ್ನು ನೀಡುತ್ತಿದೆ. ದಾದಿಯರ ದಿನವಾದ ಇಂದು ತರಬೇತಿ ನೀಡುತ್ತಿರುವುದು ನಮಗೆ ಸಂತೋಷವಾಗಿರುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಹಿರಿಯ ಸಹಕಾರಿಗಳು ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರಾದ ಆರ್.ಟಿ. ದ್ಯಾವೇಗೌಡ, ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ನಿರ್ದೇಶಕ ಕೆ.ಎಸ್. ಮಂಜೇಗೌಡ ಒಕ್ಕೂಟದ ಉಪಾಧ್ಯಕ್ಷ ಡಿ.ಬಿ. ಸೋಮೇಗೌಡ, ನಿರ್ದೇಶಕರಾದ ನಾಗರಾಜು, ಪುಟ್ಟಸ್ವಾಮಿಗೌಡ, ಪದ್ಮರಾಜು, ಪ್ರವೀಣ್, ಸೋಮಣ್ಣ, ಸಿದ್ದೇಶ್ ಹಾಜರಿದ್ದರು.

## ರಾಜ್ಯ ಸರ್ಕಾರದಿಂದ ಪೂಜೆ ಮಾಡುವ ಅರ್ಚಕರ ಕಡೆಗಣನೆ | ರಂಭಾಪುರಿ ಶಾಖಾ ಮಠದ ಡಾ.ಮಹೇಶ್ವರ ಶಿವಾಚಾರ್ಯ ಸ್ವಾಮೀಜಿ

# ಹುಂಡಿ ಹಣದಿಂದಲೇ ದೇವಾಲಯದ ಅಭಿವೃದ್ಧಿಯಾಗಲಿ


• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ರಾಜ್ಯ ಸರ್ಕಾರ ಸಾಕಷ್ಟು ಭಾಗ್ಯಗಳನ್ನು ಕಲ್ಪಿಸುತ್ತಿದೆ. ಆದರೆ ನಿತ್ಯವೂ ಲೋಕ ಕಲ್ಯಾಣಕ್ಕಾಗಿ ಪೂಜೆ ಮಾಡುವ ಅರ್ಚಕರನ್ನು ಕಡೆಗಣಿಸಿದ್ದು, ಅವರಿಗೆ ಹೊಸದಾಗಿ ಭಾಗ್ಯ ಕಲ್ಪಿಸಬೇಕು ಎಂದು ರಂಭಾಪುರಿ ಶಾಖಾ ಮಠದ ಡಾ. ಮಹೇಶ್ವರ ಶಿವಾಚಾರ್ಯ ಸ್ವಾಮೀಜಿ ಅಭಿಪ್ರಾಯಪಟ್ಟರು.

ಪಟ್ಟಣದ ಗಣಪತಿ ಪೆಂಡಾಲಿನಲ್ಲಿ ಧಾರ್ಮಿಕ ದತ್ತಿ ಇಲಾಖೆಯ ಅಧೀನದಲ್ಲಿನ ತಾಲೂಕು ಅರ್ಚಕರ ವಾರ್ಷಿಕ ಮಹಾ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ನಿತ್ಯವೂ ದೇವಾಲಯಗಳಲ್ಲಿ ಪೂಜೆ ಮಾಡುವ ಅರ್ಚಕರಿಗೆ ಗೌರವ ಧನ ನೀಡುತ್ತಿಲ್ಲ, ದೇವಾಲಯದ ಪೂಜೆ ಮಾಡಲು ಹೂವು, ಊದುಬತ್ತಿ, ಕರ್ಪೂರ, ದೀಪದ ಎಣ್ಣೆಗಾಗಿ ಮಾಸಿಕ ಐದು ಸಾವಿರ ಮಾತ್ರ ನೀಡಲಾಗುತ್ತಿದೆ, ಇಂದಿಗೂ ಅರ್ಚಕರು ಸರ್ಕಾರದಿಂದ ಯಾವುದೇ ಹಣ ಪಡೆಯದೆ ಪೂಜೆ ಮಾಡುತ್ತಿದ್ದಾರೆ, ಇವರಿಗೆ ಸಂಭಾವನೆ ನೀಡಲು ಸರ್ಕಾರ ಮುಂದಾಗಬೇಕು ಎಂದರು.

ಸರ್ಕಾರ ಹಿಂದೂ ದೇವಾಲಯಗಳಲ್ಲಿ ಹುಂಡಿ ಇಟ್ಟಿದೆ. ಆದರೆ ಆ ಹಣವನ್ನು ದೇವಾಲಯ ಅಭಿವೃದ್ಧಿಗೆ ಉಪಯೋಗಿಸಿಕೊಳ್ಳಲು ಸಾಕಷ್ಟು ಕಾನೂನು ತೊಡಕು ಮಾಡುತ್ತಿದೆ. ಇದಾಗಬಾರದು, ಯಾವ ದೇವಾಲಯದಲ್ಲಿ ಹುಂಡಿ ಇದೆಯೋ ಆ ಹುಂಡಿಯ ಹಣದಿಂದಲೇ ದೇವಾಲಯ ಅಭಿವೃದ್ಧಿಯಾಗಬೇಕು ಇದಕ್ಕೆ ಬದಲಾವಣೆ ತರಬೇಕಾಗಿದೆ ಎಂದು ಅವರು ತಿಳಿಸಿದರು.

ನಾಗರನವಿಲೆ ದೇವಾಲಯವನ್ನು ಗ್ರಾಮಸ್ಥರ ಸಹಕಾರದಲ್ಲಿ ಅಭಿವೃದ್ಧಿ ಮಾಡಿ ಇಂದು ಮಾಸಿಕ ಸಾವಿರಾರು ರೂ. ಆದಾಯ ಬರುತ್ತಿದೆ. ಆದರೆ ಆ ಹಣವನ್ನು ಅಲ್ಲಿನ ಅಭಿವೃದ್ಧಿ ಕೆಲಸಗಳಿಗೆ ಉಪಯೋಗಿಸಿಕೊಳ್ಳಲು ಕಾನೂನು ತೊಡಕು ಮಾಡಲಾಗುತ್ತಿದೆ, ದೇವಾಲಯ ಅಭಿವೃದ್ಧಿಗೆ ಸರ್ಕಾರ ಆಸಕ್ತಿ ತೋರುತ್ತಿಲ್ಲ, ಆದರೆ ದೇವಾಲಯದ ಹಣವನ್ನು ಮಾತ್ರ ಸರ್ಕಾರ ಪಡೆಯುತ್ತಿದೆ ಇದು ಎಷ್ಟು ಸರಿ ಎಂದು ಪ್ರಶ್ನಿಸಿದರು.



ರಾಜ್ಯ ಸರ್ಕಾರ ಬಜೆಟ್ ಮಂಡನೆ ವೇಳೆ ರಾಜ್ಯದಲ್ಲಿನ ಧಾರ್ಮಿಕ ದತ್ತಿ ಇಲಾಖೆ ಅಧೀನದಲ್ಲಿನ ದೇವಾಲಯಗಳ ಅಭಿವೃದ್ಧಿಗೆ ಒಂದು ಸಾವಿರ ಕೋಟಿ ಮೀಸಲಿಡಬೇಕು, ರಾಜ್ಯದಲ್ಲಿನ ಸಾಕಷ್ಟು ಎ ಗ್ರೇಡ್ ದೇವಾಲಯಗಳಲ್ಲಿ ಮಾಸಿಕ ಲಕ್ಷಾಂತ ಹಣ ಬರುತ್ತಿದೆ, ಜಿಲ್ಲೆಯ ಹೆಸರಾಂತ ಹಾಸನಾಂಬ ದೇವಾಲಯದಲ್ಲಿ ವರ್ಷಕ್ಕೆ ಹತ್ತರಿಂದ ಹದಿನೈದು ದಿವಸ ಬಾಗಿಲು ತೆರೆಯಲಾಗುತ್ತದೆ. ಈ ವೇಳೆಯಲ್ಲಿ ಕೋಟ್ಯಾಂತರ ಹಣ ಬಂದರೂ ವಾರ್ಷಿಕವಾಗಿ ಜಿಲ್ಲೆಯ ದೇವಾಲಯ ಅಭಿವೃದ್ಧಿಗೆ ಹಣ ನೀಡುತ್ತಿಲ್ಲ ಎಂದು ಬೇಸರ ವ್ಯಕ್ತ ಪಡಿಸಿದರು.

ಧರ್ಮದ ಬಗ್ಗೆ ಬುದ್ಧಿಜೀವಿಗಳು ಅವಹೇಳನಕಾರಿಯಾಗಿ ಮಾತನಾಡುತ್ತಾರೆ. ಈ ರೀತಿ ಮಾಡುವುದು ಪ್ರಚಾರದ ಹುಚ್ಚಿಗಾಗಿ, ಸನಾತನ ಧರ್ಮದ ಬಗ್ಗೆ ಅವಹೇಳನಾಕಾರಿಯಾಗಿ ಮಾತನಾಡುವ ನೈತಿಕತೆ ಇಲ್ಲ, ತಮ್ಮ ತೆವಲಿಗಾಗಿ ಸನಾತನ ಧರ್ಮವನ್ನು ಹೀನಾಯವಾಗಿ ಮಾತನಾಡುವುದು ಎಷ್ಟು ಸರಿ, ಇವರಿಂದ ಸಮಾಜದಲ್ಲಿ ಅಶಾಂತಿ ವಾತಾವರಣ ಸೃಷ್ಟಿಯಾಗುತ್ತದೆ ಎಂದು ಹೇಳಿದರು.

ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ ಮಾತನಾಡಿ, ಎಲ್ಲಾ ಜಾತಿಯವರು ಧಾರ್ಮಿಕ ದತ್ತಿ ಇಲಾಖೆ ದೇವಾಲಯಗಳ ಪೂಜೆ ಮಾಡುತ್ತಿದ್ದಾರೆ. ಅವರಿಗೆ ನೆಲೆ ಇಲ್ಲದಂತಾಗಿದೆ. ಹಾಗಾಗಿ ನೂರನ ಬಡಾವಣೆಯಲ್ಲಿನ ಸಿಎ ನಿವೇಶನವನ್ನು ಸರ್ಕಾರದಿಂದ ಮಂಜೂರು ಮಾಡಿಸಲಾಗುವುದು ಎಂದು ಭರವಸೆ ನೀಡಿದರು.

ದೇವಾಲಯಗಳ ಸುತ್ತ ಶುಚಿಯಾಗಿ ಇಟ್ಟುಕೊಳ್ಳಬೇಕು, ಇಲಾಖೆ ಅಧೀನದಲ್ಲಿ ಬರುವ ದೇವಾಲಯಗಳ ಸುತ್ತಿ ಅಶುಚಿತ್ವ ಇದ್ದರೆ ಗ್ರಾಮ ಪಂಚಾಯಿತಿಗೆ ಅರ್ಜಿ ಕೊಟ್ಟು ಶುಚಿ ಮಾಡಿಸಿಕೊಳ್ಳಲು ಅರ್ಚಕರು ಮುಂದಾಗಬೇಕಿದೆ, ದೇವರನ್ನು ಭಕ್ತರು ಅರ್ಚಕರಲ್ಲಿ ಕಾಣುತ್ತಾರೆ, ಆದರೂ ಕೆಲ ಗ್ರಾಮಗಳಲ್ಲಿ ತೊಂದರೆ ಕೊಡುವವರು ಇರುತ್ತಾರೆ ಇಂತಹ ವರ ವಿರುದ್ಧ ವ್ಯಾಜ್ಯ ಮಾಡುವ ಬದಲಾಗಿ ಇಲಾಖೆ ಮೂಲಕ ಬಗೆಹರಿಸಿಕೊಳ್ಳಿ ಎಂದು ಸಲಹೆ ನೀಡಿದರು.

ಏಕಲವ್ಯ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರಾದ ಶ್ರೀಧರ್ ಮೂರ್ತಿ, ಪ್ರಸಾದ್ ಹಾಗೂ ಪುಟ್ಟಸ್ವಾಮಯ್ಯ ಅವರನ್ನು ಸಂಘದ ಪದಾಧಿಕಾರಿಗಳು ಸರ್ವ ಸದಸ್ಯರು ಸನ್ಮಾನಿಸಿದರು.

ತಾಲ್ಲೂಕು ಅರ್ಚಕ ಸಂಘದ ಅಧ್ಯಕ್ಷ ವಿ.ಎನ್.ಶ್ರೀಧರ್ ಮೂರ್ತಿ, ಉಪಾಧ್ಯಕ್ಷ ಪುಟ್ಟಸ್ವಾಮಯ್ಯ, ಕಾರ್ಯದರ್ಶಿ ರಾಮಚಂದ್ರ, ಖಜಾಂಚಿ ನಾಗೇಶ್, ಪದಾಧಿಕಾರಿಗಳಾದ ಕಿರಣ್ ಕುಮಾರ್, ಸುದರ್ಶನ್, ಯೋಗಾನಂದ್, ನರಸಿಂಹಮೂರ್ತಿ, ಪುನಿತ್, ಧಾರ್ಮಿಕ ದತ್ತಿ ಇಲಾಖೆ ತಹಸೀಲ್ದಾರ್ ಎಂ.ಎಚ್.ಲತಾ, ಹಿರೀಸಾವೆ, ನುಗ್ಗೇಹಳ್ಳಿ, ದಂಡಿಗನಹಳ್ಳಿ ಹೋಬಳಿ ಸಂಘದ ಪದಾಧಿಕಾರಿಗಳು ಇದ್ದರು.

# ಅರಿವು ವಿದ್ಯಾಭ್ಯಾಸ ಯೋಜನೆಯಡಿ ಸಾಲ ಸೌಲಭ್ಯಕ್ಕೆ ಅರ್ಜಿ ಆಹ್ವಾನ

• ಪ್ರಜೋದಯ ವರದಿ

**ಹಾಸನ:** ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ 2026-27ನೇ ಸಾಲಿಗೆ ACU/KCCU ಮುಖೇನ ಆಯ್ಕೆಯಾಗುವ, ಮತೀಯ ಅಲ್ಪಸಂಖ್ಯಾತರಾದ ಮುಸ್ಲಿಂ, ಜೈನ್, ಬೌದ್ಧ, ಸಿಖ್, ಹಾಗೂ ಪಾರ್ಸಿ ಜನಾಂಗದ ವಿದ್ಯಾರ್ಥಿಗಳಿಗೆ ಅರಿವು ವಿದ್ಯಾಭ್ಯಾಸ ಯೋಜನೆಯಡಿಯಲ್ಲಿ ವೈದ್ಯಕೀಯ (ಎಂ.ಬಿ.ಬಿ.ಎಸ್) ಬಿಡಿಎಸ್, ಬಿ.ಇ/ಬಿ.ಟೆಕ್ ಬ್ಯಾಚುರಲ್ ಆಫ್ ಆರ್ಕಿಟೆಕ್ಚರ್, ಬಿ. ಆಯುಷ್, ಫಾರ್ಮಸಿ, ಕೃಷಿ ವಿಜ್ಞಾನ ಮತ್ತು ಪಶುವೈದ್ಯಕೀಯ ಕೋರ್ಸ್‌ಗಳಿಗೆ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವತಿಯಿಂದ ಅರಿವು ವಿದ್ಯಾಭ್ಯಾಸ ಯೋಜನೆಯಡಿ ಸಾಲ ಸೌಲಭ್ಯ ನೀಡಲಾಗುವುದು.

ಸಾಲವನ್ನು ಪಡೆಯಲು ವೆಬ್ ಸೈಟ್ mgeqoq.mbwqb|bmb..q ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ, ಆನ್‌ಲೈನ್ ಅರ್ಜಿಯ ಹಾರ್ಡ್ ಕಾಪಿ ಮತ್ತು ದಾಖಲಾತಿಗಳನ್ನು ಜಿಲ್ಲಾ ಕಚೇರಿಗೆ ನೇರವಾಗಿ ಸಲ್ಲಿಸುವುದು, ಅರ್ಜಿ ಸಲ್ಲಿಸಲು ಮೇ.30 ಕೊನೆಯ ದಿನಾಂಕವಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ವ್ಯವಸ್ಥಾಪಕರ ಕಚೇರಿ, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (ನಿ) ಮೌಲಾನಾ ಆಜಾದ್ ಭವನ, 1ನೇ ಮಹಡಿ, ಆಕಾಶವಾಣಿ ಕ್ವಾಟ್ರಸ್ ಹಿಂಭಾಗ, ಸಾಲಗಾಮೆ ಮುಖ್ಯ ರಸ್ತೆ, ಶ್ರೀ ವಿದ್ಯಾ ಗಣಪತಿ ದೇವಸ್ಥಾನದ ಅಡ್ಡರಸ್ತೆ, ಮಲ್ನಾಡ್ ಇಂಜಿನಿಯರಿಂಗ್ ಕಾಲೇಜ್ ಹತ್ತಿರ, ಹಾಸನ-573202 ಇಲ್ಲಿಗೆ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸುವುದು, ಜಿಲ್ಲಾ ಕಚೇರಿಗೆ ಅರ್ಜಿಯನ್ನು ಸಲ್ಲಿಸಲು ಮೇ 30 ರಂದು ಕೊನೆಯ ದಿನಾಂಕ ಆಗಿರುತ್ತದೆ.

ಕಚೇರಿ ದೂರವಾಣಿ ಸಂಖ್ಯೆ 08172-246333ಗೆ ಸಂಪರ್ಕಿಸಬಹುದಾಗಿದೆ ಎಂದು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿದ್ಯುತ್ ಚಾಲಿತ ವಾಹನ ಮೂಲಸೌಕರ್ಯಕ್ಕೆ ಅನುಮೋದನೆ: ಹೆಚ್.ಡಿ.ಕುಮಾರಸ್ವಾಮಿ

• ಪ್ರಜೋದಯ ವರದಿ



**ಬೆಂಗಳೂರು:** ಕರ್ನಾಟಕಕ್ಕೆ 1,232.6 ಕೋಟಿ ರೂ. ಸೇರಿ ವಿವಿಧ ರಾಜ್ಯಗಳಲ್ಲಿ ಒಟ್ಟು 50,386 ಕೋಟಿ ರೂ. ವಿದ್ಯುತ್ ವಾಹನ ಚಾರ್ಜಿಂಗ್ ಮೂಲಸೌಕರ್ಯಕ್ಕೆ ಸಂಬಂಧಿಸಿದ ಪ್ರಸ್ತಾವನೆಗಳಿಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಮಂಗಳವಾರ ಅನುಮೋದನೆ ನೀಡಿದ್ದಾರೆ.

ಬೆಂಗಳೂರಿನಲ್ಲಿ ಪಿಎಂ ಇ-ಡ್ರೈವ್ ಯೋಜನೆಯಡಿಯಲ್ಲಿ ರಾಷ್ಟ್ರವ್ಯಾಪಿ ವಿದ್ಯುತ್ ವಾಹನ ಚಾರ್ಜಿಂಗ್ ಮೂಲಸೌಕರ್ಯ ಕುರಿತ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು ಬೃಹತ್ ಕೈಗಾರಿಕಾ ಸಚಿವಾಲಯವು, ದೇಶದ ವಾಹನ ವಲಯವನ್ನು ಜಾಗತಿಕ ಮಟ್ಟದಲ್ಲಿ ಸ್ಪರ್ಧಾತ್ಮಕವಾಗಿಸಲು ಹಲವು ಯೋಜನೆಗಳನ್ನು ಪ್ರಾರಂಭಿಸಿದೆ ಎಂದು ಕುಮಾರಸ್ವಾಮಿ ತಿಳಿಸಿದರು.

ಕರ್ನಾಟಕಕ್ಕೆ 1,232.6 ಕೋಟಿ ರೂ. ವೆಚ್ಚದಲ್ಲಿ 1,243 ವಿದ್ಯುತ್ ವಾಹನ ಚಾರ್ಜರ್‌ಗಳನ್ನು ಒಳಗೊಂಡ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಲಾಗಿದೆ. ಇಲ್ಲಿವರೆಗೆ ವಿವಿಧ ರಾಜ್ಯಗಳು ಮತ್ತು ಸಿಪಿಎಸ್‌ಯುಗಳಲ್ಲಿ 4,874 ವಿದ್ಯುತ್ ವಾಹನ ಚಾರ್ಜರ್‌ಗಳ ಸ್ಥಾಪನೆಯನ್ನು ಒಳಗೊಂಡಂತೆ ಒಟ್ಟು 50,386 ಕೋಟಿ ರೂ. ವೆಚ್ಚದ ವಿದ್ಯುತ್ ವಾಹನ ಚಾರ್ಜಿಂಗ್ ಪ್ರಸ್ತಾವನೆಗಳನ್ನು ಅನುಮೋದಿಸಲಾಗಿದೆ ಎಂದರು.

ಮೊದಲ ಹಂತದಲ್ಲಿ ಬಿಡುಗಡೆಯಾದ ಮೊತ್ತ 2,000 ಕೋಟಿ ರೂ. ಆಗಿದ್ದು, ಎರಡನೇ ಹಂತದಲ್ಲಿ ವಿದ್ಯುತ್ ಚಾಲಿತ ವಾಹನಗಳು ಮತ್ತು ಚಾರ್ಜಿಂಗ್ ಕೇಂದ್ರಗಳಿಗೆ ಸಂಬಂಧಿಸಿ ಎಲ್ಲಾ ರಾಜ್ಯಗಳಿಗೂ ಸಂಪೂರ್ಣವಾಗಿ ಮತ್ತು ವಿಶ್ವಾಸದಿಂದ ಬೆಂಬಲ ನೀಡುತ್ತೇವೆಂದು ನನ್ನ ಇಲಾಖೆಯಿಂದ ಭರವಸೆ ನೀಡುತ್ತೇನೆಂದರು.

ಭಾರತದ ಆಟೋಮೋಟಿವ್ ವಲಯವನ್ನು ಜಾಗತಿಕ ಮಟ್ಟದಲ್ಲಿ ಸ್ಪರ್ಧಾತ್ಮಕವಾಗಿಸಲು ಭಾರೀ ಕೈಗಾರಿಕಾ ಸಚಿವಾಲಯವು ಹಲವಾರು ಯೋಜನೆಗಳನ್ನು ಪ್ರಾರಂಭಿಸಿದೆಯೆಂದು ಕುಮಾರಸ್ವಾಮಿ ಹೇಳಿದರು.

# ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ: ಮರು ಪರೀಕ್ಷೆಗೆ ನಿರ್ಧಾರ

• ಪ್ರಜೋದಯ ವರದಿ



**ನವದೆಹಲಿ:** ನೀಟ್‌ಯುಜಿ 2026 ಪರೀಕ್ಷೆಯಲ್ಲಿ ಅಕ್ರಮ ನಡೆದಿರುವ ಆರೋಪದ ಹಿನ್ನಲೆಯಲ್ಲಿ ಪರೀಕ್ಷೆಯನ್ನು ರದ್ದುಗೊಳಿಸಲಾಗಿದೆ ಎಂದು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ತಿಳಿಸಿದೆ.

ಮೇ 3ರಂದು ನಡೆದ ಪರೀಕ್ಷೆಯಲ್ಲಿ ಅಕ್ರಮ ನಡೆದಿರುವ ಕುರಿತು ವರದಿಯಾಗಿದೆ. ಮರು ಪರೀಕ್ಷೆ ದಿನಾಂಕವನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದೆಂದು ಎನ್‌ಟಿಎ ತಿಳಿಸಿದೆ. ಪ್ರಶ್ನೆ ಪತ್ರಿಕೆ ಸೋರಿಕೆಯ ಆರೋಪಕ್ಕೆ ಸಂಬಂಧಿಸಿ ಕೇಂದ್ರ ತನಿಖಾ ಸಂಸ್ಥೆಗಳ ವರದಿಯ ಆಧಾರದಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲು ನೀಟ್‌ಯುಜಿ ಪರೀಕ್ಷೆ ರದ್ದುಗೊಳಿಸಲು ನಿರ್ಧರಿಸಲಾಗಿದೆ ಎಂದು ಎನ್‌ಟಿಎ ತಿಳಿಸಿದೆ.

**ಸಿಬಿಐ ತನಿಖೆ**

ನೀಟ್ ಪರೀಕ್ಷೆಯ ಅಕ್ರಮಗಳ ಕುರಿತು ಕೇಂದ್ರ ಸರ್ಕಾರವು ಸಿಬಿಐ ತನಿಖೆಗೆ ಆದೇಶಿಸಿದೆ. ಈ ನಿಟ್ಟಿನಲ್ಲಿ ವಿಚಾರಣೆಗೆ ಬೇಕಾದ ಸಂಪೂರ್ಣ ಸಹಕಾರ ನೀಡುವುದಾಗಿ ಎನ್‌ಟಿಎ ಹೇಳಿದೆ. ಮರು ಪರೀಕ್ಷೆಗೆ ಸಂಬಂಧಿಸಿ ಯಾವುದೇ ಹೊಸ ನೋಂದಣಿಯ ಅಗತ್ಯ ಇರುವುದಿಲ್ಲ, ಹೆಚ್ಚುವರಿ ಪರೀಕ್ಷಾ ಶುಲ್ಕ ವಿಧಿಸಲಾಗುವುದಿಲ್ಲ. ಅಲ್ಲದೆ ಈಗಾಗಲೇ ಪಾವತಿಸಿರುವ ಶುಲ್ಕವನ್ನು ಹಿಂತಿರುಗಿಸಲಾಗುವುದು ಎಂದಿದೆ. ಮರು ಪರೀಕ್ಷೆಗೆ ಸಂಬಂಧಿಸಿ ಎನ್‌ಟಿಎ ಅಧಿಕೃತ ವೆಬ್‌ಸೈಟ್ ಮೂಲಕವೇ ಮಾಹಿತಿ ಪಡೆದುಕೊಳ್ಳಬೇಕೆಂದು ವಿದ್ಯಾರ್ಥಿಗಳು ಹಾಗು ಪೋಷಕರನ್ನು ವಿನಂತಿಸಿದೆ.

**ಪಾರದರ್ಶಕ ಪರೀಕ್ಷೆಗೆ ಒತ್ತು**

ಪ್ರಶ್ನೆಪತ್ರಿಕೆ ಸೋರಿಕೆಯ ಆರೋಪದ ನಡುವೆ ನೀಟ್-ಯುಜಿ ಪರೀಕ್ಷೆ ರದ್ದುಗೊಳಿಸಿರುವುದಕ್ಕೆ ದೇಶದಾದ್ಯಂತ ವ್ಯಾಪಕ ಆಕ್ರೋಶ ವ್ಯಕ್ತವಾಗುತ್ತಿರುವ ಬೆನ್ನಲ್ಲೇ ಮರುಪರೀಕ್ಷೆಯನ್ನು ಪಾರದರ್ಶಕವಾಗಿ ನಡೆಸುತ್ತೇವೆಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಮಹಾನಿರ್ದೇಶಕ ಅಭಿಷೇಕ್ ಸಿಂಗ್ ಅವರು ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾವು ನೀಟ್ ಮರು ಪರೀಕ್ಷೆಯನ್ನು ನ್ಯಾಯ ಸಮ್ಮತವಾಗಿ ನಡೆಸುತ್ತೇವೆ. ಮರುಪರೀಕ್ಷೆಗೆ ಯಾವುದೇ ಹೆಚ್ಚುವರಿ ಶುಲ್ಕವನ್ನು ವಿಧಿಸುವುದಿಲ್ಲ. ಜೊತೆಗೆ ಮೊದಲ ಪರೀಕ್ಷೆಯಲ್ಲಿ ಪಡೆದ ಶುಲ್ಕವನ್ನು ಮರುಪಾವತಿ ಮಾಡುತ್ತೇವೆಂದು ಹೇಳಿದ್ದಾರೆ.

ಮೇ 3ರಂದು ನಡೆದ ನೀಟ್-ಯುಜಿ2026 ಪರೀಕ್ಷೆಯ ಪ್ರಶ್ನೆಗಳಿಗೆ ಹೋಲುವ ಕೆಲವು ಪ್ರಶ್ನೆಗಳು ವ್ಯಾಟ್ಸ್ ಆ್ಯಪ್‌ನಲ್ಲಿ ಹರಿದಾಡುತ್ತಿವೆ ಎಂಬ ಮಾಹಿತಿ ಸಿಕ್ಕಿತು. ಪರೀಕ್ಷಾ ದಿನಾಂಕಕ್ಕಿಂತ ಮುಂಚಿತವಾಗಿ ಪಿಡಿಎಫ್‌ಗಳನ್ನು ಯಾರಾದರೂ ಬಳಸಿದ್ದಾರೆಯೇ ಎಂದು ತನಿಖೆ ನಡೆಸಿದಾಗ, ಕೆಲವು ಪ್ರಶ್ನೆಗಳು ಅಧಿಕೃತ ಪ್ರಶ್ನೆ ಪತ್ರಿಕೆಗೆ ಹೋಲಿಕೆಯಾಗುತ್ತಿದ್ದು, ಕೆಲವು ವ್ಯಕ್ತಿಗಳ ಫೋನ್‌ಗಳಲ್ಲಿ ಈ ಮಾಹಿತಿ ಇತ್ತು ಎಂಬುದು ದೃಢಪಟ್ಟಿದೆ ಎಂದು ಸಿಂಗ್ ವಿವರಿಸಿದ್ದಾರೆ.

ಕಷ್ಟಪಟ್ಟು ಪರೀಕ್ಷೆಗೆ ತಯಾರಿ ನಡೆಸುತ್ತಿರುವ ವಿದ್ಯಾರ್ಥಿಗಳ ಭವಿಷ್ಯದ ಮೇಲೆ ಇದು ಕೆಟ್ಟ ಪರಿಣಾಮ ಬೀರುತ್ತಿತ್ತು. ಹಾಗಾಗಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪರೀಕ್ಷೆ ರದ್ದುಗೊಳಿಸುವ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದಿದ್ದಾರೆ. ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣವನ್ನು ಕೇಂದ್ರೀಯ ತನಿಖಾ ದಳಕ್ಕೆ (ಸಿಬಿಐ) ಹಸ್ತಾಂತರಿಸಲಾಗಿದೆ. ವಿದ್ಯಾರ್ಥಿಗಳ ಭವಿಷ್ಯಕ್ಕೆ ಧಕ್ಕೆಯಾಗದಂತೆ ಎಲ್ಲಾ ಆರೋಪಿಗಳನ್ನು ಪತ್ತೆ ಹಚ್ಚಿ ಜೈಲಿಗಟ್ಟಲಾಗುವುದು ಎಂದು ಸಿಂಗ್ ಭರವಸೆ ನೀಡಿದ್ದಾರೆ.

## ಅಮೇರಿಕಾ-ಇರಾನ್ ಯುದ್ಧ ಅನಿಶ್ಚಿತತೆ, ಏರಿದ ತೈಲ ಬೆಲೆ : ಷೇರುಪೇಟೆಯಲ್ಲಿ ಕುಸಿತ

• ಪ್ರಜೋದಯ ವರದಿ



**ಮುಂಬೈ:** ಪಶ್ಚಿಮ ಏಷ್ಯಾ ಸಂಘರ್ಷದ ಅನಿಶ್ಚಿತತೆ ಮತ್ತು ಕಚ್ಚಾ ತೈಲ ದರ ಏರಿಕೆಯ ಬೆನ್ನಲ್ಲೇ ದೇಶೀಯ ಷೇರು ಪೇಟೆ ಸೂಚ್ಯಂಕಗಳಾದ ಸೆನ್ಸೆಕ್ಸ್ ಮತ್ತು ನಿಫ್ಟಿ ಮಂಗಳವಾರ ಶೇ .2ರಷ್ಟು ಕುಸಿದಿವೆ.

ವಿದೇಶಿ ಬಂಡವಾಳದ ನಿರಂತರ ಹೊರಹರಿವು ಮತ್ತು ಅಮೇರಿಕಾ ಡಾಲರ್ ಎದುರು ರೂಪಾಯಿ ಮೌಲ್ಯವು ಸಾರ್ವಕಾಲಿಕ ಕುಸಿತ ಕಂಡಿರುವುದು ಹೂಡಿಕೆದಾರರ ಆತಂಕಕ್ಕೆ ಕಾರಣವಾಗಿದೆ.

ಷೇರುಗಳ ಭಾರಿ ಮಾರಾಟ ಭರಾಟೆ ಹಿನ್ನಲೆಯಲ್ಲಿ 30 ಷೇರುಗಳ ಬಿಎಸ್‌ಇ ಸೆನ್ಸೆಕ್ಸ್, 1,456.04 ಅಂಶಗಳಷ್ಟು ಅಥವಾ ಶೇ.1.92ರಷ್ಟು ಕುಸಿದು 74,559 ವಹಿವಾಟು ಅಂತ್ಯ ಗೊಳಿಸಿದರೆ, 50 ಷೇರುಗಳ ಎನ್‌ಎಸ್‌ಇ ನಿಫ್ಟಿ 436.30 ಅಂಶಗಳಷ್ಟು ಕುಸಿದು 23,379ರಲ್ಲಿ ವಹಿವಾಟು ಅಂತ್ಯಗೊಳಿಸಿತು.


ಸೆನ್ಸೆಕ್ಸ್ ಸಂಸ್ಥೆಗಳ ಪೈಕಿ ಟೆಕ್ ಮಹೀಂದ್ರ, ಅದಾನಿ ಪೋರ್ಟ್ಸ್, ಎಚ್‌ಸಿಎಲ್ ಟೆಕ್, ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್, ಟೈಟನ್ ಮತ್ತು ಭಾರತ್ ಎಲೆಕ್ಟ್ರಾನಿಕ್ಸ್ ಷೇರುಗಳು ಅತಿ ಹೆಚ್ಚು ನಷ್ಟ ಕಂಡಿವೆ. ಈ ಪೈಕಿ ಸ್ಟೇಟ್ ಬ್ಯಾಂಕ್ ಇಂಡಿಯಾ ಮಾತ್ರ ಲಾಭ ಗಳಿಸಿದೆ.

ಜಾಗತಿಕ ತೈಲ ಮಾನದಂಡ ಬ್ರೆಂಟ್ ಕಚ್ಚಾತೈಲ ದರವು ಶೇ.2.75ರಷ್ಟು ಹೆಚ್ಚಳವಾಗಿ ಬ್ಯಾರಲ್‌ಗೆ 107.1 ಡಾಲರ್ ಆಗಿದೆ. ಅಮೇರಿಕ ಡಾಲರ್ ಎದುರು ಭಾರತದ ರೂಪಾಯಿ ಮೌಲ್ಯ 35 ಪೈಸೆ ಕುಸಿದು ಸಾರ್ವಕಾಲಿಕ ಕನಿಷ್ಠ ಮಟ್ಟ 95.63ಕ್ಕೆ ತಲುಪಿದೆ.

ಯುದ್ಧ ಅಂತ್ಯಕ್ಕೆ ಇರಾನ್ ಕಳುಹಿಸಿದ್ದ ಪ್ರಸ್ತಾಪ ತಿರಸ್ಕರಿಸಿದ ಬಳಿಕ ಯುದ್ಧ ವಿರಾಮವು ದುರ್ಬಲವಾಗಿದೆ ಎಂದು ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದರು.

ವಿನಿಮಯ ಕೇಂದ್ರದ ದತ್ತಾಂಶದ ಪ್ರಕಾರ, ಸೋಮವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು 8,437 ಕೋಟಿ ಮೊತ್ತದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಏಷ್ಯಾ ಷೇರುಪೇಟೆಗಳ ಪೈಕಿ, ದಕ್ಷಿಣ ಕೊರಿಯಾದ ಕಾಸ್ಪಿ, ಶಾಂಘೈನ ಎಸ್‌ಎಸ್‌ಇ ಕಾಂಪೊಸಿಟ್ ಇಂಡೆಕ್ಸ್ ಮತ್ತು ಹಾಂಗ್‌ಕಾಂಗ್‌ನ ಹ್ಯಾಂಗ್‌ಸೆಂಟ್ ಕುಸಿತ ದಾಖಲಿಸಿವೆ. ಜಪಾನ್‌ನ ನಿಕ್ಕಿ ಏರಿಕೆ ದಾಖಲಿಸಿದೆ.

## ಡ್ರಗ್ಸ್ ಮಾರಾಟಕ್ಕೆ ಯತ್ನಿಸಿದ್ದ ಅಪ್ರಾಪ್ತ ವಶಕ್ಕೆ



• ಪ್ರಜೋದಯ ವರದಿ

**ಸಕಲೇಶಪುರ:** ಡ್ರಗ್ಸ್ ಪದಾರ್ಥ ಮಾರಾಟ ಮಾಡಲು ಯತ್ನಿಸುತ್ತಿದ್ದ 17 ವರ್ಷದ ಅಪ್ರಾಪ್ತ ಬಾಲಕನನ್ನು ಡ್ರಗ್ಸ್ ಮುಕ್ತ ಸಕಲೇಶಪುರ ಆಂದೋಲನದ ಕಾರ್ಯಕರ್ತರು ಮಾದಕ ವಸ್ತು ಸಮೇತ ಅಬಕಾರಿ ಇಲಾಖೆಗೆ ಒಪ್ಪಿಸಿದ ಘಟನೆ ಪಟ್ಟಣದಲ್ಲಿ ನಡೆದಿದೆ.

ಪಟ್ಟಣದ ಹಳೆ ಬಸ್ ನಿಲ್ದಾಣ ಸಮೀಪದ ಕಾಕಾ ಟೀ ಶಾಪ್ ಮುಂಭಾಗದಲ್ಲಿ ಎಂಡಿಎಂಎ ಮಾದರಿಯ ಡ್ರಗ್ಸ್ ಮಾರಾಟ ಮಾಡಲು ಯತ್ನಿಸುತ್ತಿದ್ದ ವೇಳೆ ಕಾರ್ಯಕರ್ತರು ದಾಳಿ ನಡೆಸಿದ್ದಾರೆ. ಅಪ್ರಾಪ್ತ ಬಾಲಕನು ಸ್ವಂತ ಕಾರಿನಲ್ಲಿ ಮಾದಕ ವಸ್ತುಗಳನ್ನು ಸಾಗಾಟ ಹಾಗು ವಿತರಣೆಗೆ ಯತ್ನಿಸುತ್ತಿದ್ದ ಎನ್ನಲಾಗಿದೆ.

ಆರೋಪಿ ಹಾಗು ಆತನ ಸಂಪರ್ಕದಲ್ಲಿದ್ದ ಗ್ಯಾಂಗ್ ಸಕಲೇಶಪುರದಲ್ಲಿ ಡ್ರಗ್ಸ್ ಜಾಲ ನಡೆಸುತ್ತಿರುವ ಬಗ್ಗೆ ಮಾಹಿತಿ ಪಡೆದಿದ್ದ ಆಂದೋಲನದ ಕಾರ್ಯಕರ್ತರು ಕಳೆದ ಮೂರು ತಿಂಗಳಿನಿಂದ ಗುಪ್ತ ನಿಗಾವಳಿ ನಡೆಸುತ್ತಿದ್ದರು ಎನ್ನಲಾಗಿದೆ. ಕೊನೆಗೂ ಅಮಲು ವಸ್ತು ಸಮೇತ ಬಾಲಕನನ್ನು ಹಿಡಿದು ಅಬಕಾರಿ ಇಲಾಖೆಗೆ ಒಪ್ಪಿಸಲಾಗಿದೆ.

ಅಪ್ರಾಪ್ತನ ಕೈಗೆ ಕಾರು ನೀಡಿದ ಮಾಲೀಕನ ವಿರುದ್ಧವೂ ಪ್ರಕರಣ ದಾಖಲಾಗಬೇಕು. ಚಾಲನಾ ಪರವಾನಗಿ ಇಲ್ಲದೆ ವಾಹನ ಚಲಾಯಿಸಲು ಅವಕಾಶ ನೀಡಿರುವ ಸಂಬಂಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಇದೇ ಬಾಲಕ ಈ ಹಿಂದೆ ಪ್ರಥಮ ಪಿಯುಸಿ ವ್ಯಾಸಂಗ ಮಾಡುತ್ತಿದ್ದ ಸಂದರ್ಭದಲ್ಲಿ ತನ್ನದೇ ಕಾಲೇಜಿನ ಪ್ರಾಂಶುಪಾಲರ ನಕಲಿ ಅಶ್ಲೀಲ ವಿಡಿಯೋ ಸೃಷ್ಟಿಸಿ ಕೋಟ್ಯಾಂತರ ರೂಪಾಯಿ ಹಣಕ್ಕೆ ಬೇಡಿಕೆ ಇಟ್ಟ ಪ್ರಕರಣದಲ್ಲಿಯೂ ಹೆಸರು ಕೇಳಿಬಂದಿತ್ತು. ಈ ಸಂಬಂಧ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿ ಕೆಲವರನ್ನು ವಿಚಾರಣೆಗೆ ಒಳಪಡಿಸಲಾಗಿತ್ತು. ಪ್ರಕರಣದ ತನಿಖೆ ವೇಳೆ ಬಾಲಕನ ಐಫೋನ್ ವಶಪಡಿಸಿಕೊಂಡು ಫೋರೆನ್ಸಿಕ್ ಲ್ಯಾಬ್‌ಗೆ ಕಳುಹಿಸಲಾಗಿದ್ದು, ವರದಿ ಇನ್ನಷ್ಟೇ ಬರಬೇಕಿದೆ.

## ಗಾಂಜಾ ಮಾರಾಟ ಯತ್ನ: ಇಬ್ಬರ ಬಂಧನ



• ಪ್ರಜೋದಯ ವರದಿ

**ಬೇಲೂರು:** ಗಾಂಜಾ ಪದಾರ್ಥ ಮಾರಾಟಕ್ಕೆ ಯತ್ನಿಸುತ್ತಿದ್ದ ಅಂತಾರಾಜ್ಯದ ಇಬ್ಬರನ್ನು ತಾಲ್ಲೂಕಿನ ಲಿಂಗಾಪುರ ಗ್ರಾಮದ ಬಸ್ ನಿಲ್ದಾಣದ ಬಳಿ ಪೊಲೀಸರು ಬಂಧಿಸಿದ್ದಾರೆ.

ಅಸ್ಸಾಂ ಮೂಲದ ಸಫಿಕುಲ್ ಇಸ್ಲಾಂ ಹಾಗು ಮೊಹಮ್ಮದ್ ರಫಿಕುಲ್ ಬಂಧಿತರು. ಅರೇಹಳ್ಳಿ ಹೋಬಳಿಯ ಲಿಂಗಾಪುರ ಕಾಫಿ ತೋಟದ ಲೈನ್ ಮನೆಯಲ್ಲಿ ವಾಸವಾಗಿದ್ದ ಆರೋಪಿಗಳು ಹಲವು ದಿನಗಳಿಂದ ಗಾಂಜಾ ಮಾರಾಟ ಮಾಡುತ್ತಿದ್ದರು ಎನ್ನಲಾಗಿದೆ. ಖಚಿತ ಮಾಹಿತಿ ಮೇರೆಗೆ ಪೊಲೀಸರು ದಾಳಿ ನಡೆಸಿದಾಗ ಕಪ್ಪು ಬಣ್ಣದ ಪ್ಲಾಸ್ಟಿಕ್ ಕವರ್‌ನಲ್ಲಿ ಒಣಗಿದ ಗಾಂಜಾ ಸೊಪ್ಪನ್ನು ಅಕ್ರಮವಾಗಿ ಮಾರಾಟ ಮಾಡಲು ತಂದಿರುವುದು ದೃಢಪಟ್ಟಿದೆ. ಬಂಧಿತ ರಿಂದ 325 ಗ್ರಾಂ ಗಾಂಜಾ ವಶಪಡಿಸಿಕೊಳ್ಳಲಾಗಿದೆ. ಅರೇಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಜೂನ್ ಬಳಿಕ ಮೆಗಾ ಹಾಲಿನ ಡೇರಿ ಉದ್ಘಾಟನೆ

» ಮೊದಲನೇ ಪುಟದಿಂದ

ಕೆಲಸ ಮಾಡಬೇಕು. ಎಲ್ಲಾ ದಾಖಲಾತಿಗಳನ್ನು ಸರಿಯಾಗಿಟ್ಟುಕೊಳ್ಳಬೇಕು. ಪ್ರಧಾನಿ ಕಾರ್ಯಕ್ರಮದಲ್ಲಿ ಯಾವುದೇ ಕೊರತೆಯಾಗದಂತೆ ಎಚ್ಚರ ವಹಿಸಬೇಕೆಂದು ನಿರ್ದೇಶನ ನೀಡಿದರು.

**ಹಿಡಿದ ಕೆಲಸ ಮುಗಿಸುವುದು ರೇವಣ್ಣ ಸ್ವಭಾವ**

ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಹಠಮಾರಿ. ಯಾವುದೇ ಕೆಲಸ ಆಗಬೇಕೆಂದರೆ ಅದು ಮುಗಿಯುವವರೆಗೆ ವಿಶ್ರಮಿಸುವುದಿಲ್ಲ. ಮೊಸಳೆಹೊಸಳ್ಳಿ ಇಂಜಿನೀಯರಿಂಗ್ ಕಾಲೇಜು, ರೈಲ್ವೆ ಮೇಲ್ಸೇತುವೆ ಕಾಮಗಾರಿಯಲ್ಲಿ ಅವರ ಶ್ರಮ ಸಾಕಷ್ಟಿದೆ ಎಂದು ದೇವೇಗೌಡರು ಹೇಳಿದರು.

ಹಳ್ಳಿಗಾಡು ಪ್ರದೇಶದಲ್ಲಿ ಸರ್ಕಾರಿ ಇಂಜಿನೀಯರಿಂಗ್ ಕಾಲೇಜು ಸ್ಥಾಪಿಸಿ 2,300 ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಟ್ಟಿರುವುದು ಸಣ್ಣ ಸಾಧನೆ ಯಲ್ಲ. ಹಾಸನ ಮಾತ್ರವಲ್ಲದೆ ಬೀದರ್, ಕಲಬುರಗಿ, ಮಡಿಕೇರಿ ಸೇರಿ ಎಲ್ಲಾ ಭಾಗದ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಇಂಜಿನೀಯರಿಂಗ್ ಕಾಲೇಜಿನಿಂದ ರೈಲ್ವೆ ನಿಲ್ದಾಣಕ್ಕೆ ಪಾದಚಾರಿ ಮಾರ್ಗದ ಅವಶ್ಯಕತೆ ಇದ್ದು, ನಾನು ಸಹ ಕೇಂದ್ರ ರೈಲ್ವೆ ಸಚಿವರೊಂದಿಗೆ ಚರ್ಚಿಸುತ್ತೇನೆಂದರು.

## ಮೇ 15ಕ್ಕೆ ನೇತ್ರ ತಪಾಸಣೆ-ಪ್ರತಿಭಾ ಪುರಸ್ಕಾರ



• ಪ್ರಜೋದಯ ವರದಿ

**ಅರಕಲಗೂಡು:** ಸ್ವಸ್ಥ ಸಮಾಜ ನಿರ್ಮಾಣ ಸಮಿತಿಯಿಂದ ತಾಲ್ಲೂಕಿನ ರಾಮನಾಥಪುರದ ಭಾಗ್ಯಶ್ರೀ ಕಲ್ಯಾಣ ಮಂಟಪದಲ್ಲಿ ಮೇ 15ರಂದು ಕಣ್ಣಿನ ಉಚಿತ ತಪಾಸಣಾ ಶಿಬಿರ ಹಾಗು ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿ ಅಧ್ಯಕ್ಷ ಪ್ರದೀಪ್ ರಾಮಸ್ವಾಮಿ ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ಶುಕ್ರವಾರ ಬೆಳಿಗ್ಗೆ 7 ರಿಂದ ಮಧ್ಯಾಹ್ನ 12 ಗಂಟೆ ವರೆಗೆ ಕೊಯಮತ್ತೂರಿನ ಅರವಿಂದ ಕಣ್ಣಿನ ಆಸ್ಪತ್ರೆಯ ತಜ್ಞ ವೈದ್ಯರು ಕಣ್ಣಿನ ಸಮಸ್ಯೆಗಳ ಕುರಿತು ತಪಾಸಣೆ ನಡೆಸಿ ಚಿಕಿತ್ಸೆ ಮತ್ತು ಸಲಹೆ ನೀಡುವರು. ಶಸ್ತ್ರ ಚಿಕಿತ್ಸೆ ಅಗತ್ಯವಿದ್ದವರಿಗೆ ಕೊಯಮತ್ತೂರಿನ ಆಸ್ಪತ್ರೆಗೆ ಕರೆದೊಯ್ದು ಉಚಿತವಾಗಿ ಚಿಕಿತ್ಸೆ ನಡೆಸಲಾಗುವುದು. ಕಳೆದ ಮಾರ್ಚ್‌ನಲ್ಲಿ ಪಟ್ಟಣದಲ್ಲಿ ಸಮಿತಿ ಉಚಿತ ನೇತ್ರ ಚಿಕಿತ್ಸಾ ಶಿಬಿರ ಹಮ್ಮಿಕೊಂಡಿತ್ತು. ಹಲವರು ಚಿಕಿತ್ಸೆ ಪಡೆಯಲು ಸಾಧ್ಯವಾಗದೆ ಇನ್ನೊಮ್ಮೆ ಶಿಬಿರ ಏರ್ಪಡಿಸುವಂತೆ ಮನವಿ ಮಾಡಿದ್ದ ಹಿನ್ನಲೆಯಲ್ಲಿ ಕೇವಲ ಎರಡು ತಿಂಗಳ ಅವಧಿಯಲ್ಲಿ ಮತ್ತೊಮ್ಮೆ ಶಿಬಿರವನ್ನು ಆಯೋಜಿಸಲಾಗಿದೆ. ಅಗತ್ಯವಿದ್ದವರು ಶಿಬಿರದ ಪ್ರಯೋಜನ ಪಡೆದುಕೊಳ್ಳುವಂತೆ ತಿಳಿಸಿದರು.

ಎಸ್‌ಎಸ್‌ಎಲ್‌ಸಿ ಹಾಗು ದ್ವಿತೀಯ ಪಿಯು ಪರೀಕ್ಷೆಯ ಕಲಾ, ವಾಣಿಜ್ಯ ಹಾಗು ವಿಜ್ಞಾನ ವಿಭಾಗದಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುವುದೆಂದರು.

ಸಮಿತಿ ಮುಖಂಡರಾದ ಬಸವರಾಜ್, ಸಿದ್ದರಾಮು, ಮೋಹನ್, ನಸ್ರುಲ್ಲಾ ಟಿಪ್ಪು, ದಶರಥ, ಸೋಮಣ್ಣ, ಬಾಬು, ಗಂಗಾಧರ್ ಇದ್ದರು.

## ಚುನಾವಣೆ ವೇಳೆ ವಿದೇಶಿ ವಿನಿಯಮದ ಆತಂಕ ಮೋದಿಗೆ ಇರಲಿಲ್ಲವೇ

**ಹೈದರಾಬಾದ್:** ದೇಶದ ಜನರಿಗೆ ಮಿತವ್ಯಯದ ಪಾಠ ಮಾಡುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರ ಕರೆಗೆ ಎಐಎಂಐಎಂ ಪಕ್ಷದ ಅಧ್ಯಕ್ಷ ಅಸಾದುದ್ದೀನ್ ಓವೈಸಿ ಅವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಇತ್ತೀಚೆಗೆ ನಡೆದ ರಾಜ್ಯಗಳ ವಿಧಾನ ಸಭಾ ಚುನಾವಣೆ ವೇಳೆ ಪ್ರಧಾನಿ ಮತ್ತು ಬಿಜೆಪಿ ನಾಯಕರಿಗೆ ವಿದೇಶಿ ವಿನಿಮಯ ಉಳಿಸುವ ಅನಿವಾರ್ಯತೆ ನೆನಪಿರಲಿಲ್ಲವೇ ಎಂದು ಪ್ರಶ್ನಿಸಿದ್ದಾರೆ.

ಮಿತವ್ಯಯದ ಕ್ರಮಗಳ ಮೂಲಕ ಡಾಲರ್ ಉಳಿಸಿ, ಆ ಹಣವನ್ನು ಅಮೇರಿಕಾದಿಂದ ತೈಲ ಖರೀದಿಸಲು ಟ್ರಂಪ್‌ಗೆ ನೀಡುವುದು ಸರ್ಕಾರದ ಉದ್ದೇಶ ಎಂದು ಅವರು ಗಂಭೀರ ಆರೋಪ ಮಾಡಿದ್ದಾರೆ.

ಚುನಾವಣೆ ಮುಗಿದ ನಂತರ ಪೆಟ್ರೋಲ್, ಡೀಸೆಲ್ ಮತ್ತು ವಿಮಾನ ಇಂಧನ ಬೆಲೆ ಏರಿಕೆ ಯಾಗಲಿದೆ ಎಂಬ ಸತ್ಯವನ್ನು ಮರೆಮಾಚಿ ಪ್ರಧಾನಿ ಮತ ಕೇಳಿದ್ದರೇ? ಈಗ ಬೆಲೆ ಏರಿಕೆಯ ಸಂಕಷ್ಟಗಳನ್ನು ಸಹಿಸಿಕೊಳ್ಳುವುದೇ ದೇಶ ಪ್ರೇಮ ಎಂದು ಅವರು ಜನರನ್ನು ನಂಬಿಸುತ್ತಿದ್ದಾರೆ ಎಂದು ಕಿಡಿಕಾರಿದರು.

## ಸರ್ವಮಂಗಳಮ್ಮ ನಿಧನ



**ಮಾಡಾಳು:** ಅರಸೀಕೆರೆ ತಾಲ್ಲೂಕು ಮಾಡಾಳು ಗ್ರಾಮದ ಜಯಪ್ಪ ಅವರ ಪತ್ನಿ ಸರ್ವಮಂಗಳಮ್ಮ (85) ಮಂಗಳವಾರ ನಿಧನರಾದರು.

ಮೃತರಿಗೆ ಪುತ್ರಿ, ಮೂವರು ಸಹೋದರರು, ಇಬ್ಬರು ಸಹೋದರಿಯರು ಇದ್ದಾರೆ. ಮೃತರ ಅಂತ್ಯಕ್ರಿಯೆ ಬುಧವಾರ ಬೆಳಿಗ್ಗೆ 11 ಗಂಟೆಗೆ ಅವರ ತೋಟದಲ್ಲಿ ನೆರವೇರಲಿದೆ.

## ಅಪರಿಚಿತ ವಾಹನ ಡಿಕ್ಕಿ: ಬೈಕ್ ಸವಾರ ಸಾವು

**ಹೊಳೆನರಸೀಪುರ:** ಹಿಂದಿನಿಂದ ಬಂದ ಅಪರಿಚಿತ ವಾಹನ ಡಿಕ್ಕಿಯಾಗಿ ಬೈಕ್ ಮೇಲಿಂದ ಬಿದ್ದ ವ್ಯಕ್ತಿ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಹಿರೇಬೆಳಗುಲಿ ಕ್ರಾಸ್ ಸಮೀಪ ನಡೆದಿದೆ.

ಅರಕಲಗೂಡು ಪಟ್ಟಣದ ಸುಭಾಷ್ ನಗರ ನಿವಾಸಿ ನಿಂಗರಾಜು ಮೃತರು. ಮೇ 10ರಂದು ಹಾಸನದಿಂದ ಹೊಳೆನರಸೀಪುರಕ್ಕೆ ಹೋಗುತ್ತಿದ್ದಾಗ ಹಿಂದಿನಿಂದ ಬಂದ ವಾಹನ ಡಿಕ್ಕಿಯಾಗಿದೆ. ಅಪಘಾತದ ರಭಸಕ್ಕೆ ನಿಂಗರಾಜು ಅವರು ಬೈಕ್ ಸಮೇತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ತೋಡಿರುವ 4 ಅಡಿ ಆಳದ ಚರಂಡಿಗೆ ಬಿದ್ದಿದ್ದಾರೆ. ತಲೆಗೆ ಬಲವಾದ ಪೆಟ್ಟು ಬಿದ್ದಿದ್ದರಿಂದ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## 28 ಗ್ರಾಂ ತೂಕದ ಚಿನ್ನಾಭರಣ ಕಳವು

**ಚನ್ನರಾಯಪಟ್ಟಣ:** ಪಟ್ಟಣದ ಬಸ್ ನಿಲ್ದಾಣದಲ್ಲಿ ಬಸ್ ಹತ್ತುವಾಗ ಮಹಿಳೆ ಗಮನಕ್ಕೆ ಬಾರದಂತೆ ವ್ಯಾನಿಟಿ ಬ್ಯಾಗ್‌ನಲ್ಲಿದ್ದ ಸುಮಾರು 28 ಗ್ರಾಂ ತೂಕದ ಚಿನ್ನಾಭರಣ ಕದ್ದಿರುವ ಘಟನೆ ನಡೆದಿದೆ.

ಬೆಂಗಳೂರಿನ ಯಲಹಂಕ ನಿವಾಸಿ ಇಂದಿರಾ ಆಭರಣ ಕಳೆದುಕೊಂಡವರು. ಮೇ 11ರಂದು ಚಾಮಡಿಹಳ್ಳಿ ಗ್ರಾಮದಲ್ಲಿ ಮದುವೆ ಸಮಾರಂಭ ಮುಗಿಸಿಕೊಂಡು ಬೆಂಗಳೂರಿಗೆ ಹೊರಟಿದ್ದರು. ಪ್ರಯಾಣಿಕರ ನೂಕುನುಗ್ಗಲಿನ ನಡುವೆ ಬಸ್ ಏರುವಾಗ ವ್ಯಾನಿಟಿ ಬ್ಯಾಗ್‌ನಲ್ಲಿಟ್ಟಿದ್ದ 9 ಗ್ರಾಂ ತೂಕದ ಚೈನ್, 10 ಗ್ರಾಂ ತೂಕದ ಓಲೆ ಜುಮುಕಿ, 9 ಗ್ರಾಂನ ಓಲೆ ಮಾಟಿ ಕದ್ದಿದ್ದಾರೆ. ಕಳುವಾಗಿರುವ ಚಿನ್ನಾಭರಣ ಮೌಲ್ಯ 3 ಲಕ್ಷ ರೂ. ಆಗಿದೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ವೀರಶೈವ ಲಿಂಗಾಯತ ಮಹಾಸಭಾದ ತಾಲ್ಲೂಕು ಅಧ್ಯಕ್ಷರಾಗಿ ಎಸ್.ಸಿ.ದಿನೇಶ್ ಆಯ್ಕೆ



• ಪ್ರಜೋದಯ ವರದಿ

**ಸಕಲೇಶಪುರ:** ಅಖಿಲ ಭಾರತ ವೀರಶೈವ ಲಿಂಗಾಯತ ಮಹಾ ಸಭಾದ ತಾಲ್ಲೂಕು ಅಧ್ಯಕ್ಷರಾಗಿ ಎಸ್.ಸಿ. ದಿನೇಶ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಕಳೆದ 10 ವರ್ಷಗಳಿಂದ ತಾಲ್ಲೂಕು ಅಧ್ಯಕ್ಷರಾಗಿದ್ದ ಹಾಗು ಪ್ರಸ್ತುತ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾ ಸಭಾ ಜಿಲ್ಲಾ ಘಟಕ ಉಪಾಧ್ಯಕ್ಷರಾಗಿರುವ ಬಿ.ಜಿ.ಯತೀಶ್, ಜಿಲ್ಲಾ ನಿರ್ದೇಶಕರಾದ ರೇಖಾ ಸುರೇಶ್ ಹಾಗು ಶಾರದಾ ಗುರುಮೂರ್ತಿ ಉಪಸ್ಥಿತಿಯಲ್ಲಿ ಚುನಾವಣಾಧಿಕಾರಿ ಉಮಾಪತಿ ಅವರು ಅವಿರೋಧ ಆಯ್ಕೆಯನ್ನು ಘೋಷಣೆ ಮಾಡಿದರು.

ಮಲೆನಾಡು ವೀರಶೈವ ಸಮಾಜದ ಅಧ್ಯಕ್ಷ ಧರ್ಮಪ್ಪ, ಉಪಾಧ್ಯಕ್ಷ ಗಗನ್, ನಿರ್ದೇಶಕರಾದ ಪ್ರಶಾಂತ್, ಕೇತನ್ ಸುರೇಶ್, ನಾಗೇಶ್ ಹಾಗು ಚಂದ್ರಶೇಖರ್ ಭಾಗವಹಿಸಿದ್ದರು.

ಯುವ ವೇದಿಕೆಯ ಅಧ್ಯಕ್ಷ ಮಳಲಿ ಸ್ವಾಮಿ, ಧರ್ಮರಾಜು ಸೇರಿ ವಿವಿಧ ಅಂಗ ಸಂಸ್ಥೆಗಳ ಪದಾಧಿಕಾರಿಗಳು ಹಾಗು ಸದಸ್ಯರು ನೂತನ ಅಧ್ಯಕ್ಷರಿಗೆ ಶುಭಾಶಯ ಕೋರಿದರು.

## ಮಲ್ಲಿಪಟ್ಟಣ ಏತ ನೀರಾವರಿ ಯೋಜನೆ ನಿರ್ಲಕ್ಷ್ಯಕ್ಕೆ ಆಕ್ರೋಶ

» ಮೊದಲನೇ ಪುಟದಿಂದ

ಕೆಲಸ ಪ್ರಗತಿಯಲ್ಲಿದೆ. ಬಾಕಿ ಕೆಲಸವನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ತಿಳಿಸಿದರು.

ಕಟ್ಟೇಪುರ ಪೈಪ್‌ಲೈನ್ ಅಳವಡಿಕೆಯ ಕೆಲವು ಭಾಗದಲ್ಲಿ ರೈತರು ಅಡ್ಡಿಪಡಿಸುತ್ತಿದ್ದಾರೆ. ಎಷ್ಟೇ ಮನವೊಲಿಸಿದರು ಕೆಲಸಕ್ಕೆ ಸಹಕಾರ ನೀಡುತ್ತಿಲ್ಲವೆಂದು ಇಇ ಪುಟ್ಟಸ್ವಾಮಿ ಶಾಸಕರಿಗೆ ಹೇಳಿದರು. ಸರ್ಕಾರ ನಿಗದಿ ಮಾಡಿರುವಂತೆ ರೈತರ ಭೂಮಿಗೆ ಹಣ ಮತ್ತು ಮರಗಿಡಗಳಿಗೆ ಪರಿಹಾರವನ್ನು ಕಲ್ಪಿಸಲಾಗುತ್ತಿದೆ. ಅದಕ್ಕೆ ಒಪ್ಪದೇ ಇದ್ದಲ್ಲಿ ಕಾನೂನು ಪ್ರಕಾರ ಕ್ರಮವಹಿಸಿ ಪೈಪ್ ಲೈನ್ ಅಳವಡಿಸಬೇಕೆಂದು ಶಾಸಕರು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಒಟ್ಟು 11 ಎಕರೆ ಭೂಸ್ವಾಧೀನ ಪಡೆದ ರೈತರಿಗೆ ಪರಿಹಾರ ನೀಡಲು ಅಗತ್ಯವಾದ 9 ಕೋಟಿ ರೂ. ಹಣವನ್ನು ಮೀಸಲಿರಿಸಲಾಗಿದೆ. ಬಹುತೇಕ ಮಂದಿ ಹಣ ಕೂಡ ಪಡೆದುಕೊಂಡಿದ್ದಾರೆ. ಕೆಲ ರೈತರು ಸಲ್ಲದ ನೆಪವೊಡ್ಡಿ ಕೆಲಸಕ್ಕೆ ಅಡ್ಡಿಪಡಿಸುತ್ತಿರುವುದು ಗೊತ್ತಿದೆ. ನೇರ ಖರೀದಿ ಮೂಲಕ ಹಣ ಪಡೆದುಕೊಂಡರೇ ಅವರಿಗೆ ಒಳಿತು. ಇಲ್ಲವಾದರೇ ಅವರ ಖಾತೆಗೆ ಹಣ ಜಮಾ ಮಾಡಿ ಭೂಮಿಸ್ವಾಧೀನಕ್ಕೆ ಪಡೆದು ಕೆಲಸ ಮಾಡುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಕಾರ್ಯಪಾಲಕ ಇಂಜಿನಿಯರ್ ಪುಟ್ಟಸ್ವಾಮಿ, ಎಇ ದೀಪಕ್, ಗುತ್ತಿಗೆದಾರ, ಗ್ರಾಮಸ್ಥರು ಹಾಜರಿದ್ದರು.

# ಮೇ 30ಕ್ಕೆ ಅರಕಲಗೂಡಿನಲ್ಲಿ ಅಂಬೇಡ್ಕರ್ ಹಬ್ಬ

• ಪ್ರಜೋದಯ ವರದಿ



**ಅರಕಲಗೂಡು:** ಪಟ್ಟಣದಲ್ಲಿ ವಿವಿಧ ದಲಿತ ಸಂಘಟನೆಗಳಿಂದ ಮೇ 30 ರಂದು ಡಾ. ಬಿ. ಆರ್.ಅಂಬೇಡ್ಕರ್ ಜಯಂತಿ ಆಚರಿಸುವ ಮೂಲಕ ಅವರ ವಿಚಾರ ಧಾರೆಗಳನ್ನು ಜನರಿಗೆ ತಲುಪಿಸುವ ಕಾರ್ಯ ಕೈಗೊಳ್ಳಲಾಗಿದೆ ಎಂದು ಅಂಬೇಡ್ಕರ್ ಹಬ್ಬ ಆಚರಣಾ ಸಮಿತಿ ಕಾರ್ಯಾಧ್ಯಕ್ಷ ಬಿ.ಸಿ.ರಾಜೇಶ್ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ನಾಲ್ಕು ವರ್ಷಗಳ ಹಿಂದೆ ದಲಿತ ಸಂಘಟನೆಗಳು ಮತ್ತು ದಲಿತ ನೌಕರರ ಒಕ್ಕೂಟದ ಸಹಯೋಗದಲ್ಲಿ ಅಂಬೇಡ್ಕರ್ ಅವರ ಅದ್ದೂರಿ ಹಬ್ಬ ಆಚರಿಸಲಾಗಿತ್ತು. ಕಾರಣಾಂತರಗಳಿಂದ ನಿಂತು ಹೋಗಿದ್ದ ಕಾರ್ಯಕ್ರಮವನ್ನು ಈ ಸಲ ಮತ್ತಷ್ಟು ವೈಭವಯುತವಾಗಿ ಹಮ್ಮಿಕೊಳ್ಳಲಾಗುತ್ತಿದ್ದು, ಅಂಬೇಡ್ಕರ್ ಮೊಮ್ಮಗ ಆನಂದರಾಜ್ ಯಶ್ವಂತ್ ಅಂಬೇಡ್ಕರ್, ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಪಾಲ್ಗೊಳ್ಳುವರು. ಹಬ್ಬದ ಆಚರಣೆಗೆ ಬೇರೆ ಯಾವುದೇ ಸಮುದಾಯದವರಿಂದ ದೇಣಿಗೆ ಪಡೆಯದೆ ದಲಿತ ಸಮುದಾಯದವರೇ ಸ್ವತಃ ಹಣ ಸಂಗ್ರಹಿಸಿ ತಮ್ಮ ಶಕ್ತಿಯಿಂದ ಕಾರ್ಯಕ್ರಮವನ್ನು ಆಯೋಜಿಸುತ್ತಿರುವುದು ವಿಶೇಷ ಎಂದರು.

ಸಮುದಾಯದ ಜನರಲ್ಲಿ ಜಾಗೃತಿ ಮೂಡಿಸುವುದು, ಏಕತೆಯನ್ನು ಬೆಳೆ ಸುವುದು ಹಾಗು ಬಾಬಾ ಸಾಹೇಬರ ವಿಚಾರಧಾರೆಗಳನ್ನು ಜನರಿಗೆ ತಲುಪಿಸುವುದು ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ. ಅದಕ್ಕಾಗಿ ತಾಲ್ಲೂಕಿನಾದ್ಯಂತ ಹಳ್ಳಿಗಳಿಗೆ ತೆರಳಿ ಪ್ರಚಾರ ಕಾರ್ಯ ಕೈಗೊಳ್ಳಲಾಗು ತ್ತಿದ್ದು, ಸುಮಾರು 10 ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸುವ ನಿರೀಕ್ಷೆ ಯಿದೆ. ಅಂಬೇಡ್ಕರ್ ಮೊಮ್ಮಗನನ್ನು ಕರೆಸಿ ಅವರ ಮೂಲಕ ಅಂಬೇಡ್ಕರ್ ಸಂದೇಶಗಳನ್ನು ಜನರಿಗೆ ತಲುಪಿಸುವ ಉದ್ದೇಶದಿಂದ ಕಾರ್ಯಕ್ರಮ ಹಮ್ಮಿ ಕೊಳ್ಳಲಾಗಿದೆ ಎಂದು ಹೇಳಿದರು.

ಸಮಿತಿ ಉಪಾಧ್ಯಕ್ಷ ಎ.ಪಿ. ಲಿಂಗರಾಜ್ ಅವರು ಮಾತನಾಡಿ, ಬಾಬಾ ಸಾಹೇಬ್ ಅಂಬೇಡ್ಕರ್ ಅವರು ರಚಿಸಿದ ಸಂವಿಧಾನವು ಕೇವಲ ಒಂದು ಸಮುದಾಯಕ್ಕೆ ಸೀಮಿತವಲ್ಲ. ಅದು ಇಡೀ ದೇಶದ ಜನರಿಗೆ ಸೇರಿದ್ದು. ಅಂಬೇಡ್ಕರ್ ಮೊಮ್ಮಗ ಈ ನೆಲಕ್ಕೆ ಪಾದಸ್ಪರ್ಶ ಮಾಡುತ್ತಿದ್ದು ಅದನ್ನು ಕಣ್ತುಂಬಿ ಕೊಳ್ಳಬೇಕಿದೆ. ಪ್ರಕಾಶ್ ರಾಜ್, ದುನಿಯಾ ವಿಜಯ್ ಅವರನ್ನು ಕಾರ್ಯಕ್ರಮಕ್ಕೆ ಬರುವಂತೆ ಕೋರ ಲಾಗಿದೆ. ಆದ್ದರಿಂದ ಎಲ್ಲಾ ವರ್ಗದ ಹಾಗು ಎಲ್ಲಾ ಧರ್ಮದ ಜನರು ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಸಮಿತಿ ಅಧ್ಯಕ್ಷ ಜವರಯ್ಯ, ಅಣಯ್ಯ, ಉಪಾಧ್ಯಕ್ಷರಾದ ಚಂದ್ರಣ್ಣ, ಶಂಕರಣ್ಣ, ಕಾರ್ಯದರ್ಶಿ ಗಣೇಶ್ ವೇಲಾಪುರಿ, ಅತ್ನಿ ಶಿವರಾಜ್, ಕೆ.ಪಿ.ಗಣೇಶ್, ರಮೇಶ್ ಮರಲಕ್ಕಿ, ಹರೀಶ್ ವೀರಭದ್ರ, ಅಂಬರೀಶ್, ಲಕ್ಷ್ಮಣ್ ಇದ್ದರು.

## ಬಂಗಾಳದ ಸಿಎಸ್ ನೇಮಕಕ್ಕೆ ರಾಹುಲ್ ಗಾಂಧಿ ಟೀಕೆ

# ದೊಡ್ಡ ಕಳ್ಳರಿಗೆ ಸಿಕ್ಕ ದೊಡ್ಡ ಬಹುಮಾನ

• ಪ್ರಜೋದಯ ವರದಿ



**ನವದೆಹಲಿ:** ಪಶ್ಚಿಮ ಬಂಗಾಳದ ನೂತನ ಮುಖ್ಯ ಕಾರ್ಯದರ್ಶಿಯಾಗಿ ಮಾಜಿ ಮುಖ್ಯ ಚುನಾವಣಾಧಿಕಾರಿ ಮನೋಜ್ ಅಗರ್ವಾಲ್ ಮತ್ತು ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರ ಮುಖ್ಯ ಸಲಹೆಗಾರರಾಗಿ ಸುಬ್ರತಾ ಗುಪ್ತಾ ಅವರನ್ನು ನೇಮಕ ಮಾಡಿರುವುದನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಟೀಕಿಸಿದ್ದಾರೆ. ಬಿಜೆಪಿ-ಚುನಾವಣಾ ಆಯೋಗದ ಚೋರ್ ಬಜಾರ್‌ನಲ್ಲಿ ಕಳ್ಳತನ ದೊಡ್ಡದಾದಷ್ಟೂ ಬಹುಮಾನವೂ ದೊಡ್ಡದಾಗಿರು ತ್ತದೆಂದು ವಾಗ್ದಾಳಿ ನಡೆಸಿದ್ದಾರೆ.

ಈ ನೇಮಕಾತಿಯು ಬಿಜೆಪಿ ಮತ್ತು ಚುನಾವಣಾ ಆಯೋಗದ ನಡುವಿನ ಲಜ್ಜೆಗೆಟ್ಟ ಹೊಂದಾಣಿಕೆಯನ್ನು ಪ್ರತಿಬಿಂಬಿಸುತ್ತದೆಂದು ರಾಹುಲ್ ಆರೋಪಿಸಿದ್ದಾರೆ.

ಎಕ್ಸ್‌ನಲ್ಲಿ ಹಿಂದಿ ಭಾಷೆಯಲ್ಲಿ ಮಾಡಲಾದ ಪೋಸ್ಟ್‌ನಲ್ಲಿ ಬಿಜೆಪಿ-ಚುನಾವಣಾ ಆಯೋಗದ ಚೋರ್ ಬಜಾರ್‌ನಲ್ಲಿ ಕಳ್ಳತನ ದೊಡ್ಡದಾದಷ್ಟೂ ಬಹುಮಾನವೂ ದೊಡ್ಡದಾಗಿರುತ್ತದೆ ಎಂದು ಬರೆದುಕೊಂಡಿದ್ದಾರೆ. ಬಿಜೆಪಿ ನೇತೃತ್ವದ ಪಶ್ಚಿಮ ಬಂಗಾಳ ಸರ್ಕಾರವು, ರಾಜ್ಯದಲ್ಲಿ ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯ ಮೇಲ್ವಿಚಾರಣೆ ಜವಾಬ್ದಾರಿ ಹೊತ್ತಿದ್ದ 1990ರ ಬ್ಯಾಚ್‌ನ ಐಎಎಸ್ ಅಧಿಕಾರಿ, ಮಾಜಿ ಮುಖ್ಯ ಚುನಾವಣಾ ಅಧಿಕಾರಿ ಮನೋಜ್ ಅಗರ್ವಾಲ್ ಅವರನ್ನು ಹೊಸ ಮುಖ್ಯ ಕಾರ್ಯದರ್ಶಿಯಾಗಿ ನೇಮಿಸಿದೆ. ಅದೇ ರೀತಿ, ಬಂಗಾಳದಲ್ಲಿ ವಿಶೇಷ ರೋಲ್ ವೀಕ್ಷಕರಾಗಿ ಎಸ್‌ಐಆರ್ ಮೂಲಕ ಹೆಸರು ಅಳಿಸುವಿಕೆಯ ಮೇಲ್ವಿಚಾರಣೆ ಮಾಡಿದ್ದ 1990ರ ಬ್ಯಾಚ್‌ನ ಐಎಎಸ್ ಅಧಿಕಾರಿ ಸುಬ್ರತಾ ಗುಪ್ತಾ ಅವರನ್ನು ಮುಖ್ಯ ಮಂತ್ರಿಯ ಮುಖ್ಯ ಸಲಹೆಗಾರರನ್ನಾಗಿ ನೇಮಕ ಮಾಡಲಾಗಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ಗಮನ ಸೆಳೆದಿದ್ದರು.

ಈ ನೇಮಕಾತಿಯು ಚುನಾವಣಾ ಆಯೋಗ ಮತ್ತು ಬಿಜೆಪಿ ನಡುವಿನ ಲಜ್ಜೆಗೆಟ್ಟ ಒಪ್ಪಂದ, ಪಿತೂರಿಯನ್ನು ಪ್ರತಿಬಿಂಬಿಸುತ್ತವೆಂದು. ಇದು ಚುನಾವಣಾ ಆಯೋಗವು ನಿಷ್ಪಕ್ಷಪಾತವಾಗಿಲ್ಲ ಮತ್ತು ಬಿಜೆಪಿಗೆ ಅನುಕೂಲ ಮಾಡಿಕೊಡಲು ವಿಶೇಷವಾಗಿ ಶ್ರಮಿಸಿದೆ ಎಂಬುದಕ್ಕೆ ಪುರಾವೆ ಯಾಗಿದೆ ಎಂದಿದ್ದರು.

ಚುನಾವಣೆಗೂ ಮುನ್ನ ನಡೆದ ಎಸ್‌ಐಆರ್‌ನಲ್ಲಿ 91 ಲಕ್ಷ ಮತದಾರರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ಹೊರಗಿಡಲಾಗಿತ್ತು. ಅದರ ಜೊತೆಗೆ, 27 ಲಕ್ಷ ಮತದಾರರ ಬಗ್ಗೆ ಯಾವುದೇ ನಿರ್ಣಯ ಕೈಗೊಂಡಿರಲಿಲ್ಲ. ಇದು ಚುನಾವಣೆಯಲ್ಲಿ ಬಿಜೆಪಿಗೆ ಅನುಕೂಲ ಮಾಡಿಕೊಟ್ಟಿದೆಂದು ಅವರು ಆರೋಪಿಸಿದ್ದಾರೆ.

## ಟ್ರಂಪ್ ಟೆಕ್ ತಂಡದಲ್ಲಿ ಮಸ್ಕ್, ಕುಕ್

• ಪ್ರಜೋದಯ ವರದಿ

**ವಾಷಿಂಗ್ಟನ್:** ಚೀನಾ ಪ್ರವಾಸ ಕೈಗೊಳ್ಳುತ್ತಿರುವ ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೊಂದಿಗೆ ವಾಣಿಜ್ಯ ಹಾಗೂ ತಂತ್ರಜ್ಞಾನ ಪ್ರತಿನಿಧಿಗಳನ್ನು ಒಳಗೊಂಡ ಮಹತ್ತರವಾದ ತಂಡವೇ ಪ್ರಯಾಣ ಬೆಳೆಸಲಿದೆ ಎಂದು ಶ್ವೇತಭವನ ತಿಳಿಸಿದೆ.

ಈ ತಂಡವು ವಾಣಿಜ್ಯ, ತಂತ್ರಜ್ಞಾನ, ಹಣಕಾಸು, ರಕ್ಷಣಾ ಹಾಗೂ ಗ್ರಾಹಕ ವಲಯಗಳಲ್ಲಿನ ಪ್ರಮುಖ ಕಂಪನಿಗಳ ನಾಯಕರನ್ನು ಒಳಗೊಂಡಿರಲಿದೆ. ಟ್ರಂಪ್ ಅವರ ತಂಡದಲ್ಲಿ ಆ್ಯಪಲ್ ಸಿಇಒ ಟಿಮ್ ಕುಕ್, ಟೆಸ್ಲಾ ಹಾಗೂ ಸ್ಪೇಸ್‌ಎಕ್ಸ್ ಸಿಇಒ ಇಲಾನ್‌ಮಸ್ಕ್, ಬ್ಲ್ಯಾಕ್ ರಾಕ್ ಸಿಇಒ ಲ್ಯಾರಿ ಫಿಂಕ್, ಬ್ಲ್ಯಾಕ್‌ಸ್ಟೋನ್ ಸಿಇಒ ಸ್ಟೀಫನ್ ಶ್ವಾರ್ಜ್‌ಮನ್, ಬೋಯಿಂಗ್ ಸಿಇಒ ಕೆಲ್ಲಿ ಆರ್ಟ್ ಬರ್ಗ್ ಸೇರಿ ಪ್ರಮುಖರು ಸೇರಿದ್ದಾರೆ.

ತಂತ್ರಜ್ಞಾನ, ಹಣಕಾಸು, ಏರೋಸ್ಪೇಸ್ ಸೇರಿ ಜಗತ್ತಿನ ಪ್ರಮುಖ ವಲಯಗಳಲ್ಲಿ ಪ್ರಭಾವಿ ನಾಯಕರನ್ನು ಒಳಗೊಂಡ ಪ್ರತಿನಿಧಿಗಳ ತಂಡವು ಚೀನಾಗೆ ಭೇಟಿ ಕೊಡಲಿದೆ. ಟ್ರಂಪ್ ಅವರ ಭೇಟಿ ಸಂದರ್ಭದಲ್ಲಿ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ. ಈ ಸಂದರ್ಭದಲ್ಲಿ ವಿಶ್ವದ 2 ಪ್ರಮುಖ ಆರ್ಥಿಕ ರಾಷ್ಟ್ರಗಳು ಮಹತ್ವದ ಒಪ್ಪಂದಕ್ಕೆ ಸಹಿ ಹಾಕುವ ನಿರೀಕ್ಷೆಯಿದೆ.

## ಲಿಂಗಾಪುರದಲ್ಲಿ ಸಂಭ್ರಮದ ಸಿರಿ ಸಿಂಗಾರ ನೇಮೋತ್ಸವ

• ಪ್ರಜೋದಯ ವರದಿ



**ಬೇಲೂರು:** ತಾಲ್ಲೂಕಿನ ಅರೇಹಳ್ಳಿ ಹೋಬಳಿ ಲಿಂಗಾಪುರ ಗ್ರಾಮದ ಭಗವಾನ್ ಶ್ರೀ ಬಬ್ಬುಸ್ವಾಮಿ ದೈವ ಸ್ಥಾನದಲ್ಲಿ ಬಬ್ಬುಸ್ವಾಮಿ, ತನ್ನಿಮಾನಿಗ, ಚಾಮುಂಡೇಶ್ವರಿ ಹಾಗು ಪರಿವಾರ ದೈವಗಳ ಸಿರಿ ಸಿಂಗಾರ ನೇಮೋತ್ಸವ ಅದ್ದೂರಿಯಾಗಿ ನೆರವೇರಿತು.

ಗ್ರಾಮದಲ್ಲಿರುವ ಶಿಲಾಮಯ ದೈವ ಸ್ಥಾನದಲ್ಲಿ ವಾರ್ಷಿಕ ಸಿರಿ ಸಿಂಗಾರದ ನೇಮೋತ್ಸವ ನೋಡಲು ಹಾಸನ ಸೇರಿ ಮಂಗಳೂರು, ಮೈಸೂರು, ಬೆಂಗಳೂರು, ಚಿಕ್ಕಮಗಳೂರು ಹಾಗು ನಾನಾ ಭಾಗಗಳಿಂದ ಸಹಸ್ರಾರು ದೈವರಾಧಕರು ಮೂರು ದಿನಗಳ ಕಾಲ ನಡೆದ ನೇಮೋತ್ಸವದಲ್ಲಿ ಪಾಲ್ಗೊಂಡಿದ್ದರು. ಮಾಜಿ ಸಚಿವ ಬಿ.ಶಿವರಾಮ್, ಸಕಲೇಶಪುರ ಶಾಸಕ ಸಿಮೆಂಟ್ ಮಂಜು ಸೇರಿ ಗಣ್ಯರು ಸಿರಿ ಸಿಂಗಾರ ನೇಮೋತ್ಸವಕ್ಕೆ ಸಾಕ್ಷಿಯಾದರು.

ಪರಿವಾರ ದೈವಗಳ ಸಿರಿ ಸಿಂಗಾರ ನೇಮೋತ್ಸವವು ಕಳೆದ ಶನಿವಾರ ಬೆಳಿಗ್ಗೆ ಕಲತಕಂಬೆರ್ಲು, ಚಾಮುಂಡೇಶ್ವರಿ, ರಾಹು, ತನ್ನಿಮಾನಿಗ, ಬಬ್ಬುಸ್ವಾಮಿಯ ದರ್ಶನ ಸೇವೆಯ ಮೂಲಕ ಪ್ರಾರಂಭವಾಯಿತು. ಭಾನುವಾರ ಬೆಳಿಗ್ಗೆ ಗಜಕಂಬ ಸ್ಥಾಪನೆ, ಮಧ್ಯಾಹ್ನ ಚಪ್ಪರ ಏರುವ ಮೂಲಕ ನೇಮೋತ್ಸವಕ್ಕೆ ಚಾಲನೆ ದೊರೆಯಿತು.

ಸೋಮವಾರ ಚಾಮುಂಡೇಶ್ವರಿ ಮತ್ತು ಪರಿವಾರ ದೈವಗಳಾದ ರಾಹು ಗುಳಿಗ ಹಾಗು ಕತ್ತಲೆ ಖಾನ ಗುಳಿಗದ ನೇಮೋತ್ಸವನ್ನು ಸಹಸ್ರಾರು ಭಕ್ತರು ಕಣ್ತುಂಬಿಕೊಂಡರು. ನಂತರ ರಾತ್ರಿ ಜುಮಾದಿ ಬಂಟ ದೈವಗಳ ನೇಮೋತ್ಸವದ ಮೂಲಕ ಗ್ರಾಮದಲ್ಲಿ ಮೂರು ದಿನಗಳ ಕಾಲ ವಿಜೃಂಭಣೆಯಿಂದ ಮಂಗಳವಾರ ಬೆಳಗಿನ ಜಾವದ ವರೆಗೂ ಪೂಜಾಕೋಲೋತ್ಸವ ನೆರವೇರಿತು.

ರಾಜ್ಯದಲ್ಲಿಯೇ ದೈವಾರಾಧನೆಯ ಪ್ರಸಿದ್ಧ ಸ್ಥಳ ತುಳುನಾಡದ ದಕ್ಷಿಣ ಕನ್ನಡ ಹಾಗು ಉಡುಪಿ ಜಿಲ್ಲೆಗಳಲ್ಲಿ ಪರಂಪರೆಯ ಪ್ರತೀಕ ದೈವಿಕ ಶಕ್ತಿ, ಕಾರಣಿಕ ಮತ್ತು ಭಕ್ತಿಯ ಸಂಕೇತವಾದ ದೈವಗಳ ನೇಮೋತ್ಸವವು ನಿರಂತರ ನಡೆಯುವುದು ಸರ್ವೇ ಸಾಮಾನ್ಯ. ಆದರೆ ಹೆಚ್ಚಾಗಿ ದೇವರ ಆರಾಧನೆ ಮಾಡುವ ಮಲೆನಾಡು ಭಾಗವಾದ ಹಾಸನ ಜಿಲ್ಲೆಯಲ್ಲಿ ದೈವಾರಾಧನೆಯ ನೆಲೆಯಾಗಿರುವ ಅರೇಹಳ್ಳಿ ಹೋಬಳಿಯ ಲಿಂಗಾಪುರ ಗ್ರಾಮದಲ್ಲಿರುವುದು ವಿಶೇಷ. ಇಲ್ಲಿ ನೂರಾರು ವರ್ಷಗಳಿಂದ ದೈವಾರಾಧನೆ ಮಾಡುತ್ತಾ ಸಿರಿ ಸಿಂಗಾರ ನೇಮೋತ್ಸವ ನಡೆಸಲಾಗುತ್ತಿದೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019